5. ವಿತ್ತೀಯ ಕಾರ್ಯಕಲಾಪ

2001-2002ನೇ ಸಾಲಿನ ಇಲಾಖಾ ಬೇಡಿಕೆಗಳ ಮೇಲಿನ ಚರ್ಚೆ (ಮುಂದು)

+ಶ್ರೀ ಹೆಚ್. ಗೋಪಾಲ್ ಭಂಡಾರಿ (ಕಾರ್ಕಳ) :— ಮಾನ್ಯ ಅಧ್ಯಕ್ಷರೆ, ಸರ್ಕಾರ ಮಂಡಿಸಿದಂಥ ಬೇಡಿಕೆಗಳನ್ನು ಬೆಂಬಲಿಸಿ ನಾನು ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ನಮ್ಮ ರಾಜ್ಯದಲ್ಲಿ ಶೇಕಡ 70ಕ್ಕಿಂತ ಹೆಚ್ಚು ರೈತರು ಕೃಷಿಯನ್ನು ಅವಲಂಬಿಸಿಕೊಂಡಿದ್ದು ಇವರ ಬಗ್ಗೆ ಹಿಂದೆ ಮಾತನಾಡಿದಂಥ ಎಲ್ಲಾ ಸದಸ್ಯರು ಈಗಾಗಲೇ ಪ್ರಸ್ತಾಪ ಮಾಡಿರುತ್ತಾರೆ. ಈ ರಾಜ್ಯದ ರೈತರ ಮತ್ತು ಕೃಷಿಯ ಬಗ್ಗೆ ಪ್ರಸ್ತಾಪ ಮಾಡುವುದಕ್ಕಿಂತ ಕರಾವಳಿ ಜಿಲ್ಲೆಯ ರೈತರ ಸಮಸ್ಯೆ ವಿಶಿಷ್ಟವಾದಂಥ ಸಮಸ್ಯೆಯಾಗಿದ್ದು ಅದನ್ನು ಪ್ರಸ್ತಾಪ ಮಾಡಲಿಕ್ಕೆ ನಾನು ಇಚ್ಛಿಸುತ್ತೇನೆ. ನಮ್ಮ ಕರಾವಳಿ ಜಿಲ್ಲೆಯಲ್ಲಿ ಸಾಕಷ್ಟು ಮಳೆ ಬರುತ್ತಿದೆ. ಸಾಕಷ್ಟು ಮಳೆ ಬಂದರೂ ಸಹ ಬೆಳೆಯತಕ್ಕಂಥ ಬೆಳೆಯ ಪ್ರಮಾಣ ಬಹಳ ಕಡಿಮೆಯಾಗಿದೆ. ಬಹುಶ: ಪಶ್ಚಿಮಘಟ್ಟದಿಂದ ಮೇಲ್ಭಾಗದಲ್ಲಿ ಬೆಳೆದಂಥ ಬೆಳೆಯ ಕಾಲುಭಾಗ ಬೆಳೆ ನಮ್ಮ ದಕ್ಷಿಣಕನ್ನಡ, ಉಡುಪಿ ಉತ್ತರ ಕನ್ನಡ ಜಿಲ್ಲೆಗಳಲ್ಲಿ ಇವತ್ತು ಬರುತ್ತಿದೆ. ಮೂಲತ: ಈ ಮೂರು ಜಿಲ್ಲೆಗಳಲ್ಲಿ ರೈತರು ಭತ್ತದ ಬೆಳೆಯನ್ನು ಅವಲಂಬಿಸಿಕೊಂಡಿರತಕ್ಕಂಥವರು. ಈಗ ಇದು ಬದಲಾಗಿದೆ. ಭತ್ತದ ಬೆಳೆಯನ್ನು ಅವಲಂಬಿಸಿಕೊಂಡಿದ್ದಂಥ ಸಾಕಷ್ಟು ಜನ ಇವತ್ತು ಬೆಳೆಯ ಪ್ರಮಾಣ ಕಡಿಮೆಯಾಗಿದ್ದರಿಂದ, ಲಾಭದ ಪ್ರಮಾಣ ಅತ್ಯಂತ ಕಡಿಮೆಯಾಗಿದ್ದರಿಂದ ಭತ್ತದ ಬೆಳೆಗೆ ಬದಲಾಗಿ ಬದಲಿ ವ್ಯವಸ್ಥೆಯನ್ನು ಮಾಡತಕ್ಕಂಥ ನಿಟ್ಟಿನಲ್ಲಿ ಇವತ್ತು ಸಾಕಷ್ಟು ವಾಣಿಜ್ಯ ಬೆಳೆಗಳಾದ ಅಡಿಕೆ, ಕರಿಮೆಣಸು, ತೆಂಗು ಈ ರೀತಿಯಾದ ಬೇರೆ ಬೇರೆ ಬೆಳೆಗಳನ್ನು ಬೆಳೆಯುತ್ತಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಶೇಕಡ 50ರಷ್ಟು ಭತ್ತದ ಬೆಳೆಯನ್ನು ಕಡಿಮೆ ಮಾಡಿ ಅಡಿಕೆ ಬೆಳೆಯನ್ನು ಜಾಸ್ತಿ ಮಾಡಿರುತ್ತಾರೆ. ಇದರಿಂದ ನಮ್ಮ ಭಾಗದ ಕರಾವಳಿ ಜಿಲ್ಲೆಯ ರೈತರ ಪರಿಸ್ಥಿತಿ ಅತ್ಯಂತ ಚಿಂತಾಜನಕವಾಗಿದೆ. ಅಡಿಕೆ ಬೆಲೆಯನ್ನು ಅವಲಂಬಿಸಿಕೊಂಡಿರತಕ್ಕಂಥ ರೈತರು ಲಕ್ಷಾಂತರ ರೂಪಾಯಿಗಳನ್ನು ಸಾಲ ಮಾಡಿದ್ದಾರೆ. ಇದು ದೀರ್ಘಾವಧಿ ಬೆಳೆಯಾಗಿದ್ದು ಗಿಡ ಹಾಕಿ ಸುಮಾರು 4-5 ವರ್ಷಗಳು ಆದ ನಂತರ ಫಲ ಕೊಡತಕ್ಕಂತ ಅಡಿಕೆ ಬೆಳೆಯಾಗಿರುವುದರಿಂದ ಲಕ್ಷಾಂತರ ರೂಪಾಯಿಗಳನ್ನು ಬೇರೆ ಬೇರೆ ಬ್ಯಾಂಕುಗಳಿಂದ ಸಾಲ ಮಾಡಿ ಈ ಬೆಳೆಯನ್ನು ಬೆಳೆಸಿದ್ದಾರೆ. ಆದರೆ ಕಳೆದ 2-3 ವರ್ಷಗಳ ಹಿಂದೆ ಒಂದು ಕೆ.ಜಿ. ಬಿಳಿ ಗೋಟು ಅಡಿಕೆಗೆ 165 ರಿಂದ 175 ರೂಪಾಯಿ ಇದ್ದಲ್ಲಿ ಇವತ್ತು ಅದು ಕೇವಲ 35 ರೂಪಾಯಿಗಳಿಗೆ ಇಳಿಯತಕ್ಕಂಥ

12.10 ಪಿ.ಎಂ.

ಪರಿಸ್ಥಿತಿ ನಿರ್ಮಾಣವಾಗಿದೆ. ಈ ಜಿಲ್ಲೆಯ ಪ್ರದೇಶದ ರೈತರು ಕಂಗಾಲಾಗುವ ಪರಿಸ್ಥಿತಿ ಇದೆ. ಈಗಾಗಲೇ ತಾವು ಪತ್ರಿಕೆಯಲ್ಲಿ ಓದಿರಬಹುದು, ನಮ್ಮ ಭಟ್ಕಳ ಶಾಸಕರ

ಕ್ಷೇತ್ರದಲ್ಲಿ ಅಡಿಕೆ ಬೆಳೆ ಬೆಳೆಸುವ ರೈತ ಕುಟುಂಬದವರು ಆತ್ಮಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿ ಬಂದಿದೆ. ಆದುದರಿಂದ, ಈ ಬಗ್ಗೆ ಏನಾದರೂ ಅಡಿಕೆ ಬೆಳೆಗೆ ಬೆಲೆಯನ್ನು, ಮಾರುಕಟ್ಟೆಯನ್ನು ಒದಗಿಸುವ ವ್ಯವಸ್ಥೆ ಮಾಡಬೇಕು ಮತ್ತು ಈ ಬಗ್ಗೆ ಸರ್ಕಾರ ಚಿಂತನೆಯನ್ನು ಮಾಡುತ್ತಿದೆ. ಮಾರುಕಟ್ಟೆ ಮಂತ್ರಿಗಳು ಈ ಬಗ್ಗೆ ಒಂದೆರಡು ಸಭೆಗಳನ್ನು ನಡೆಸಿದ್ದಾರೆ. ಆದರೆ, ಅಡಿಕೆಯಲ್ಲಿಯೂ ಬಿಳಿ ಗೋಟು ಇದ್ದು, ಕೆಂಪು ಅಡಿಕೆಗೆ ಸ್ವಲ್ಪಮಟ್ಟಿನ ಬೆಲೆಯಾದರೂ ಇದೆ. ಆದರೆ, ಬಿಳಿ ಗೋಟಿಗೆ ಏನೂ ಬೆಲೆ ಇರದ ಪರಿಸ್ಥಿತಿ ಇದೆ. ಅಂಥ ರೈತರನ್ನು ರಕ್ಷಿಸುವ, ಅವರಿಗೆ ಸರಿಯಾದ ಮಾರುಕಟ್ಟೆ ಬೆಲೆಯನ್ನೊದಗಿಸುವ ವ್ಯವಸ್ಥೆ ಮಾಡಲು ಸರ್ಕಾರ ಗಮನಹರಿಸಬೇಕೆಂದು ಹೇಳುತ್ತೇನೆ. ನಮ್ಮ ಜಿಲ್ಲೆಯಲ್ಲಿ ಸಾಕಷ್ಟು ಮಳೆ ಬರುತ್ತದೆ. ಕೋಲಾರದಂಥ ಭಾಗದ ಕೆಲವು ಜಿಲ್ಲೆಗಳಲ್ಲಿ ಇಡೀ ವರ್ಷದಲ್ಲಿ ಬಂದ ಮಳೆ ನಮ್ಮ ಜಿಲ್ಲೆಯಲ್ಲಿ ಒಂದು ದಿನದಲ್ಲಿ ಬಂದು ಹೋಗುತ್ತದೆ. ಭೂಮಿಯಲ್ಲಿದ್ದ ಸಾರವೆಲ್ಲಾ ಕೊಚ್ಚಿಹೋಗುವ ಪರಿಸ್ಥಿತಿ ಇವತ್ತು

(ಈ ಹಂತದಲ್ಲಿ ಶ್ರೀ ಯು.ಆರ್. ಸಭಾಪತಿಯವರು ಪೀಠವನ್ನಲಂಕರಿಸಿದರು)

ನಿರ್ಮಾಣವಾಗುತ್ತಿದೆ. ಭೂಸಾರ ಸಂರಕ್ಷಣೆ ಮಾಡುವ ವ್ಯವಸ್ಥೆ ಅತ್ಯಂತ ಅವಶ್ಯಕವಾಗಿ ಕರಾವಳಿ ಜಿಲ್ಲೆಗಳಿಗೆ ಇದೆ. ಸರ್ಕಾರ ಭೂಸಾರ ಸಂರಕ್ಷಣೆಯನ್ನು ಮಾಡುವ ಬಗ್ಗೆ ವಿಶೇಷವಾಗಿ ಚಿಂತಿಸಿ, ಕೃಷಿ ಇಲಾಖೆಯವರು ಇದಕ್ಕೆ ಬೇರೆಯಾದ ಇಲಾಖೆಯನ್ನು ರಚಿಸಿದೆ ನಮ್ಮ ಮೈನರ್ ಇರಿಗೇಷನ್ ಇಲಾಖೆಯಿಂದ ಅಂತರ್ಜಲ ಮಟ್ಟ ಎತ್ತರಿಸುವ, ಭೂಮಿಯ ಸಾರವನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಸಾಕಷ್ಟು ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತಿದೆ. ಇದಕ್ಕೆ ಇನ್ನಷ್ಟು ಶಕ್ತಿ ಕೊಡಬೇಕಾಗಿದೆ. ನಮ್ಮ ಜಿಲ್ಲೆಯಲ್ಲಿ ಮಳೆಯಿಂದಾಗಿ ಭೂಮಿಯ ಸಾರ ಕೊಚ್ಚಿ ಸಮುದ್ರಕ್ಕೆ ಹೋಗಿ ಬೆಳೆ ಬರುವ ಪ್ರಮಾಣ ಕಡಿಮೆಯಾಗುತ್ತಿದೆ. ಆದುದರಿಂದ, ಕರಾವಳಿ ಜಿಲ್ಲೆಯ ರೈತರ ರಕ್ಷಣೆ ಬಗ್ಗೆ, ಅಲ್ಲಿಯ ರೈತರಿಗೆ ಭದ್ರತೆ ಕೊಡುವುದಕ್ಕೆ ಸರ್ಕಾರ ವಿಶೇಷವಾಗಿ ಚಿಂತಿಸಬೇಕೆಂದು ಹೇಳುತ್ತೇನೆ. ಅಡಿಕೆ ಜೊತೆಗೆ ಸಾಕಷ್ಟು ತೆಂಗನ್ನು ಸಹ ಕರಾವಳಿಯಲ್ಲಿ ಬೆಳೆಸುತ್ತಿದ್ದಾರೆ. ಎಲ್ಲರೂ ಕೂಡ ಕರಾವಳಿ ಪ್ರದೇಶಕ್ಕೆ ಹೋದಾಗ, ಅಲ್ಲಿ ತೆಂಗಿನ ಕೃಷಿ ಜಾಸ್ತಿ ಇರುವುದನ್ನು ನೋಡಬಹುದು. ಆದರೆ ತೆಂಗಿನಕಾಯಿಗೂ ಕೂಡ ಬೆಲೆ ಇಲ್ಲದ ಪರಿಸ್ಥಿತಿ ಇರುವಾಗ ಕೊಬ್ಬರಿ ಮಾಡಿದಾಗ ನಮ್ಮ ಭಾಗದ ಜನರಿಗೆ ಕೊಬ್ಬರಿಯನ್ನು ಕೇಂದ್ರ ಸರ್ಕಾರ ನಫೆಡ್ ಮೂಲಕ ಕೊಂಡುಕೊಳ್ಳುವ ವ್ಯವಸ್ತೆ ಮಾಡಿದೆ ಎಂದು ಕೇಳಿದ್ದೇನೆ. ಆದರೆ, ಕರಾವಳಿ ಜಿಲ್ಲೆಗೆ ಇದೇನೋ ವ್ಯವಸ್ತೆ ಜಾರಿಯಾಗಿಲ್ಲ. ಅಲ್ಲಿ ಈ ವ್ಯವಸ್ಥೆ ಮಾಡಬೇಕೆಂದು ಕೇಳುತ್ತೇನೆ. ಆರೋಗ್ಯ ಇಲಾಖೆಯಲ್ಲಿ ಭಾರತೀಯ ವೈದ್ಯ ಪದ್ಧತಿ ಎನ್ನುವ ಆಯುರ್ವೇದ ವ್ಯವಸ್ಥೆ ಇದೆ. ಆಯುರ್ವೇದದ ಬಗ್ಗೆ ರಾಜ್ಯ ಮತ್ತು ರಾಷ್ಟ್ರದ ಎಲ್ಲಾ ಪ್ರದೇಶಗಳಲ್ಲಿಯೂ ವಿಶೇಷವಾಗಿ ಜನರು ನಿರೀಕ್ಷೆ ಇಟ್ಟುಕೊಂಡಿದ್ದಾರೆ. ನಮ್ಮಲ್ಲಿ ಆಯುರ್ವೇದ ಕಾಲೇಜುಗಳಿದ್ದು,

ಸಾಕಷ್ಟು ಜನ ಆಯುರ್ವೇದ ಪದವಿ ಪಡೆಯುತ್ತಿದ್ದಾರೆ. ಆದರೆ, ನಮ್ಮಲ್ಲಿರುವ ಆಯುರ್ವೇದ ಆಸ್ಪತ್ರೆಗಳನ್ನು ಉಳಿಸಿಕೊಳ್ಳುವ ವ್ಯವಸ್ಥೆ ಮಾಡಬೇಕಾಗಿದೆ. ವಿಶೇಷವಾಗಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಹಿಂದೆ ರೂರಲ್ ಡಿಸ್ಪೆನ್ಸರಿ ಎನ್ನುವ ವ್ಯವಸ್ಥೆ ಇತ್ತು. ಅಲ್ಲಿದ್ದ ವೈದ್ಯರುಗಳನ್ನು ಖಾಯಂ ಮಾಡಿ ಸರ್ಕಾರಿ ಆಯುರ್ವೇದ ಆಸ್ಪತ್ರೆಗಳಲ್ಲಿರುವ ಎಲ್ಲಾ ವ್ಯವಸ್ಥೆಗಳನ್ನು, ಕಟ್ಟಡಗಳನ್ನು, ಔಷಧಿಗಳನ್ನು ಕೊಡುವ ವ್ಯವಸ್ಥೆ ಇದೆ. ಇತ್ತೀಚೆಗೆ, ಆ ವೈದ್ಯರುಗಳ ನಿವೃತ್ತಿ ನಂತರ ಆಸ್ಪತ್ರೆಗಳನ್ನು ಮುಚ್ಚುವ ವ್ಯವಸ್ಥೆ ಇದೆ. ಅಲ್ಲಿ ಹೊಸ ಹುದ್ದೆ ಸೃಜಿಸುವ, ಹೊಸ ವ್ಯವಸ್ಥೆ ಸ್ಥಾಪಿಸುವ ವ್ಯವಸ್ಥೆಯನ್ನು ಮಾಡಿ, ಭಾರತೀಯ ವೈದ್ಯ ಪದ್ಧತಿಗೂ ಕೂಡ ಇದರಿಂದ ಸಾಕಷ್ಟು ಬೇಡಿಕೆ ಇರುವುದರಿಂದ, ಆ ವ್ಯವಸ್ಥೆಯನ್ನು ಅನುಷ್ಠಾನ ಮಾಡಬೇಕೆಂದು ಹೇಳುತ್ತೇನೆ. ಪಶ್ಚಿಮ ವಾಹಿನಿ ಬಗ್ಗೆ ನಾವು ಕೇಳುತ್ತಿದ್ದೇವೆ. ಆದಕ್ಕೆ ಸಾಕಷ್ಟು ಯೋಜನೆಗಳನ್ನು ರೂಪಿಸಿದ್ದೇವೆ. ಮೈನರ್ ಇರಿಗೇಷನ್ ಮಂತ್ರಿಗಳು ಮತ್ತು ಇಲಾಖೆಯವರು ಮುಖ್ಯಮಂತ್ರಿಗಳ ನಿರ್ದೇಶನದ ಮೇರೆಗೆ ಸಾಕಷ್ಟು ಕಾರ್ಯಕ್ರಮಗಳನ್ನು ರೂಪಿಸಿದ್ದಾರೆ. ಈ ಕಾರ್ಯಕ್ರಮಗಳು ಕರಾವಳಿಯ ಮೂರು ಜಿಲ್ಲೆಗಳಿಗೆ ಅತ್ಯಂತ ಅವಶ್ಯಕವಾದುದಾಗಿವೆ. ಆದುದರಿಂದ, ಅದನ್ನು ಆದಷ್ಟು ಬೇಗ ಅನುಷ್ಠಾನ ಮಾಡುವ ಹಾಗೆ ಮಾಡಬೇಕೆಂದು ಸರ್ಕಾರವನ್ನು ವಿನಂತಿಸುತ್ತಿದ್ದೇನೆ. ಇತ್ತೀಚಿನ ದಿನಗಳಲ್ಲಿ ನಾನು ಪ್ರತಿನಿಧಿಸುವ ಕಾರ್ಕಳ, ಉಡುಪಿ ಮತ್ತು ಮಂಗಳೂರಿನ ಪ್ರದೇಶಗಳಲ್ಲಿ ಸಾಕಷ್ಟು ಮಲೇರಿಯಾ ರೋಗಗಳು ಕಾಣಿಸಿಕೊಳ್ಳುತ್ತಿವೆ. ಮಲೇರಿಯಾ ಕೇಸಸ್ ಪತ್ತೆಯಾಗಿ, ಆ ಪ್ರದೇಶಗಳಲ್ಲಿ ಮಲೇರಿಯಾ ರೋಗವಿದೆ ಎಂಬುದೂ ಕೂಡ ಸರ್ಕಾರದ ಗಮನಕ್ಕೆ ಬಂದಿದೆ. 5-6 ವರ್ಷಗಳ ಹಿಂದೆ ನಮ್ಮ ರಾಜ್ಯದಲ್ಲಿ ಮಲೇರಿಯಾ ರೋಗವಿರಲಿಲ್ಲ. ನಮ್ಮ ಪ್ರದೇಶದಲ್ಲಿಯೂ ಇರಲಿಲ್ಲ. ಅದು ಸಂಪೂರ್ಣ ನಿಯಂತ್ರಣದಲ್ಲಿತ್ತು. ಈಗ ಅದು ಸಂಪೂರ್ಣ ನಿಯಂತ್ರಣ ಕಳೆದುಕೊಳ್ಳುವ ಹಂತಕ್ಕೆ ಬಂದಿದೆ. ಆದಕ್ಕೆ ಸರಿಯಾದ ಯೋಜನೆ ರೂಪಿಸಿ, ಇದಕ್ಕೊಂದು ರೀತಿಯ ವಾರ್‌ಫುಟ್‌ನಲ್ಲಿ ಕೆಲಸ ಮಾಡುವ ವ್ಯವಸ್ಥೆ ಮಾಡಬೇಕು. ವಿಶೇಷವಾಗಿ ಅಲ್ಲಿ ವೈದ್ಯರನ್ನು, ಲ್ಯಾಬೋರೇಟರಿಯನ್ನು ಅಥವಾ ಆರೋಗ್ಯ ಕಾರ್ಯಕರ್ತರನ್ನು ನಿಯೋಜಿಸುವ ಮೂಲಕ ಎಲ್ಲೆಲ್ಲಿ ಮಲೇರಿಯಾ ರೋಗದ ತೀವ್ರತೆ ಇದೆ, ಅಲ್ಲಿ ಈ ವ್ಯವಸ್ಥೆ ಮಾಡುವ ಕೆಲಸ ಮಾಡಬೇಕೆಂದು ಹೇಳುತ್ತೇನೆ. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣದ ಬಗ್ಗೆ ಅನೇಕ ಸದಸ್ಯರು ಮಾತನಾಡಿದರು. ಶಾಲಾ ಅಭಿವೃದ್ಧಿ ಸಮಿತಿ ರಚಿಸುವಾಗ ಗೊಂದಲದ ವಾತಾವರಣ ಎಲ್ಲಾ ಕಡೆ ಸೃಷ್ಟಿಯಾಗಿದೆ. ಅದನ್ನು ಪರಿಹರಿಸುವ ನಿಟ್ಟಿನಲ್ಲಿ ಸರ್ಕಾರ ಗಮನಹರಿಸುತ್ತದೆನ್ನುವ ವಿಶ್ವಾಸವಿದೆ. ಸಾಕಷ್ಟು ಶಾಲಾ ಕಟ್ಟಡಗಳ ಕೊರತೆ ಇದೆ. ಗ್ರಾಮೀಣ ಪ್ರದೇಶಗಳಲ್ಲಿ ಸಾಕಷ್ಟು ಶಾಲಾ ಕಟ್ಟಡಗಳ ಕೊರತೆ ತುಂಬುವ ಬಗ್ಗೆ ಸರ್ಕಾರ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತದೆಂಬುವ ನಂಬಿಕೆ ಇದೆ. ವಯಸ್ಕರ ಶಿಕ್ಷಣದ ಬಗ್ಗೆ ಹೇಳುವುದಾದರೆ, 10 ವರ್ಷಗಳ ಹಿಂದೆ ನಮ್ಮ ಜಿಲ್ಲೆಯಲ್ಲಿ ಸಾಕ್ಷರತಾ ಆಂದೋಲನ ಮಾಡಿದ್ದೇವು. ಸಾಕಷ್ಟು

ಜನ ಅನಕ್ಷರಸ್ಥರು ಅಕ್ಷರಸ್ಥರಾಗಿರುವ ಸಾಧನೆ ಇದೆ; ಅದು ಒಂದು ಚರಿತ್ರೆಯಾಗಿದೆ. ಆದರೆ, ಈ ಸಾಕ್ಷರತಾ ಆಂದೋಲನಕ್ಕೆ ಬೇರೆ ಕಾರ್ಯಕ್ರಮವನ್ನು ಕೇಂದ್ರ ಸರ್ಕಾರದಿಂದ ಬೇರೆ ಬೇರೆ ಯೋಜನೆಗಳನ್ನು ತರಿಸುವ ಯೋಚನೆ ಇದೆ. ಆದರೆ, ಇದನ್ನು ಎಲ್ಲಾ ಜಿಲ್ಲೆಗಳಲ್ಲೂ ಪರಿಣಾಮಕಾರಿಯಾಗಿ ಅನುಷ್ಠಾನ ಮಾಡುವ ಈ ನಿರಂತರ ಶಿಕ್ಷಣ ಕಾರ್ಯಕ್ರಮಗಳನ್ನು ವ್ಯವಸ್ಥಿತವಾಗಿ, ಬಹಳ ಉತ್ತಮವಾಗಿ ಜಾರಿ ಮಾಡುವ ನೆಲೆಯಲ್ಲಿ ಅನುಷ್ಠಾನ ಮಾಡುವ ಕಾರ್ಯಕ್ರಮ ಹಾಕಿಕೊಳ್ಳುವುದು ಅಗತ್ಯವಿದೆ ಎಂದು ಹೇಳುತ್ತೇನೆ. ಕಂದಾಯ ಮಂತ್ರಿಗಳು ಈಗಾಗಲೇ ಒಂದು ಘೋಷಣೆ ಮಾಡಿದ್ದಾರೆ. ಬಗರ್ ಹುಕುಂ ಏನಿದೆ ಅದನ್ನು ಸಕ್ರಮ ಮಾಡುವ ನಿಟ್ಟಿನಲ್ಲಿ ಅರ್ಜಿ ಕೊಡಲು ಪುನ: ಮೂರು ತಿಗಂಳ ಅವಧಿ ಕೊಡುತ್ತೇವೆಂದು ಹೇಳಿದ್ದಾರೆ. ಸಾಕಷ್ಟು ಡಿಸಿ ರಿಸರ್ವೇಷನ್ ಜಾತಿಗಳಿವೆ, ಗೋಮಾಳ, ಸೇಂದಿ, ಶರಾಬು ಅಂಗಡಿಗಳಿಗೆ ಬೇರೆ ಬೇರೆ ಪ್ರದೇಶಗಳಿಗೆ ಮೀಸಲಾಗಿರುವ ಜಾಗಗಳಿವೆ. ಸಾಮಾನ್ಯ ಬಡ ಜನರಿಗೆ ಗೊತ್ತಿಲ್ಲದೆ, ಅದರಲ್ಲಿ ಅವರು ಸಾಕಷ್ಟು ಅಕ್ರಮಣ ಮಾಡಿ ಮನೆ ಕಟ್ಟಿ ಸಾಕಷ್ಟು ಅಭಿವೃದ್ಧಿ ಮಾಡಿಕೊಂಡ ಜನರಿದ್ದಾರೆ. ಅಂಥ ಸಂದರ್ಭದಲ್ಲಿ ಅವರಿಗೆ ಆ ಜಾಗವನ್ನು ಮಂಜೂರು ಮಾಡಲು ಸಾಧ್ಯವಿರುವ ವ್ಯವಸ್ಥೆಯಲ್ಲಿ ಅನಾನುಕೂಲವಿರುವುದರಿಂದ ಡಿಸಿ ರಿಸರ್ವೇಷನ್, ಗೋಮಾಳ, ಸೇಂದಿ, ಅಂಗಡಿ ಇರಬಹುದು, ಇಂಥ ಮೀಸಲಿರುವ ಜಾಗಗಳಲ್ಲಿ ಪರಿಣಾಮಕಾರಿಯಾದ ಅಭಿವೃದ್ಧಿ ಕೃಷಿ ಇದ್ದರೆ, ಅದೇ ಜಾಗವನ್ನು, ಅದೇ ಉದ್ದೇಶಕ್ಕೆ, ಅದೇ ಗ್ರಾಮದಲ್ಲಿ ಬೇರೆ ಕಡೆ ಮೀಸಲಾಗಿರಿಸುವ ವ್ಯವಸ್ಥೆ ಮಾಡಿ ನಂತರ ಆ ಜಾಗವನ್ನು ಮಂಜೂರು ಮಾಡಿವ ವ್ಯವಸ್ಥೆ ಮಾಡಿದರೆ ಎಲ್ಲರಿಗೂ ಇದರಿಂದ ಅನುಕೂಲವಾಗುತ್ತದೆ. ಈ ಬಗ್ಗೆ ಸರ್ಕಾರ ವಿಶೇಷ ಚಿಂತನೆ ಮಾಡುತ್ತದೆಂದು ಹೇಳುತ್ತೇನೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಾಕಷ್ಟು ಕೃಷಿ ಕಾರ್ಮಿಕರಿದ್ದಾರೆ. ಇಲ್ಲಿ ಬೀಡಿ ಕಾರ್ಮಿಕರ ಸಮಸ್ಯೆ ಚಿಂತಾಜನಕವಾಗಿದೆ. ಈ ರಾಜ್ಯದಲ್ಲಿ ಹೆಚ್ಚು ಬೀಡಿ ಕಾರ್ಮಿಕರಿದ್ದರೆ ಅದು ಕರಾವಳಿ ಜಿಲ್ಲೆ. ಅಲ್ಲಿ ಬೀಡಿ ಕಾರ್ಮಿಕರಿಗೆ ವಾರದಲ್ಲಿ ಒಂದೆರಡು ದಿನವೂ ಕೆಲಸ ಸಿಗದಿರುವ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಬಗ್ಗೆ ಕಾರ್ಮಿಕ ಇಲಾಖೆಯು ವಿಶೇಷವಾಗಿ ಚಿಂತನೆ ಮಾಡಬೇಕು. ಗೇರು ಬೀಜ ಅಭಿವೃದ್ಧಿ ಘಟಕಗಳ ಬಗ್ಗೆ ಹೇಳುವುದಾದರೆ, ಇದು ಬೀಡಿ ಕಾರ್ಮಿಕರ ನಂತರ ಗೇರು ಬೀಜಗಳನ್ನು ಸಂಸ್ಕರಣ ಮಾಡುವ ಘಟಕ. ನನ್ನ ತಾಲ್ಲೂಕಿನಲ್ಲಿ ಸುಮಾರು 20 ಸಾವಿರ ಜನ ಕಾರ್ಮಿಕರು ಗೇರು ಬೀಜ ಘಟಕಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಅಲ್ಲಿಯೂ ಕೂಡ ಇವತ್ತು ಡಬ್ಲ್ಯೂಟಿಓನಿಂದ ಬೇರೆ ಬೇರೆ ರಾಜ್ಯಗಳಿಂದ ಗೇರು ಬೀಜ ಉತ್ಪನ್ನಗಳು ಇಲ್ಲಿ ಆಮದಾಗುವ ಪರಿಸ್ಥಿತಿ ಇರುವುದರಿಂದ ಅಲ್ಲಿ ಕೂಡ ಕಾರ್ಮಿಕರ ಪರಿಸ್ಥಿತಿ ಚಿಂತಾಜನಕವಾಗಿದೆ. ಸಾಕಷ್ಟು ಗೇರು ಬೀಜ ಕಾರ್ಖಾನೆಗಳು ಮುಚ್ಚುವ ಪರಿಸ್ಥಿತಿ ಇದೆ. ನನ್ನ ತಾಲ್ಲೂಕಿನಲ್ಲಿ ಶೇ.50 ರಷ್ಟು ಗೇರು ಬೀಜ ಘಟಕಗಳನ್ನು ಮುಚ್ಚಿದ್ದಾರೆ. ಆದರಿಂದಾಗಿ ಸಾಕಷ್ಟು ಕಾರ್ಮಿಕರಿಗೆ ಸಮಸ್ಯೆಯಾಗುತ್ತದೆ. ಈ ಬಗ್ಗೆ

ವಿಶೇಷವಾದ ಕಾರ್ಯಕ್ರಮವನ್ನು ಸರ್ಕಾರ ರೂಪಿಸುತ್ತದೆನ್ನುವ ವಿಚಾರ ಹೇಳುತ್ತೇನೆ. ಅರಣ್ಯ ಸಚಿವರಿಗೆ ಒಂದೆರಡು ವಿಚಾರಗಳನ್ನು ಹೇಳಬಯಸುತ್ತೇನೆ. ನಮ್ಮಲ್ಲಿ ಅರಣ್ಯ ಭೂಮಿಯ ಪಕ್ಕದಲ್ಲಿರುವ ಸರ್ಕಾರಿ ಜಮೀನನ್ನು ಹಂಚುವಾಗ ಕೆಲವು ಸಮಸ್ಯೆಗಳಾಗುತ್ತಿವೆ. ಉದಾಹರಣೆಗೆ ತಾಲ್ಲೂಕಿನಲ್ಲಿ ಸುಮಾರು ಒಂದು, ಒಂದೂವರೆ ಸಾವಿರ ಎಕರೆ ವಿಸ್ತೀರ್ಣವಿರುವ ಆ ಒಂದು ಸರ್ವೆ ನಂಬರಿನಲ್ಲಿ ಸುಮಾರು 100 ಎಕರೆ ಅಕ್ರಮ ಮೀಸಲು ಅರಣ್ಯವಿರುತ್ತದೆ. ಆ ನೂರು ಎಕರೆ ಮೀಸಲು ಅರಣ್ಯದಲ್ಲಿ ಅಕ್ರಮ ಸಕ್ರಮ ಮಾಡಲಿಕ್ಕೆ ನಾವು ಬೇಡಿಕೆ ಮಂಡಿಸುತ್ತಿಲ್ಲ. ಆದರೆ, ಆ ಒಂದು ಸಾವಿರ ಮೀಸಲು ಅರಣ್ಯ ಏನಿದೆ ಅದನ್ನು ಬಿಟ್ಟು ಉಳಿದಂತಹ ಸರ್ಕಾರಿ ಜಮೀನು ಏನಿದೆ, ಅಲ್ಲಿ ಕೃಷಿ ಮಾಡಿದಂಥ ರೈತರಿಗೆ ಆ ಭೂಮಿಯನ್ನು ಕೊಡಲಿಕ್ಕೆ ಅರಣ್ಯ ಇಲಾಖೆಯ ಅಧಿಕಾರಿಗಳು ಆಕ್ಷೇಪಣೆ ಮಾಡುತ್ತಿದ್ದಾರೆ, ಸರಿಯಾದಂಥ ನಕಾಶೆ ಕೂಡ ನಮ್ಮಲ್ಲಿ ಇಲ್ಲ. ಇದೆಲ್ಲವೂ ಕೂಡ ನಮ್ಮದೆನ್ನುವ ಅವರು ಕೇವಲ ಆರ್‌ಟಿಸಿಎಲ್ 100 ಏಕರೆಗೆ ಮಾತ್ರ ಆಕ್ಷೇಪಿಸಬಹುದೇ ವಿನಾ: ಎಲ್ಲದಕ್ಕೂ ಕೂಡ ಆಕ್ಷೇಪಿಸಬಾರದು. ಇದಕ್ಕಾಗಿ ತಾವು ಸದರಿ ಅಧಿಕಾರಿಗಳಿಗೆ ನಿರ್ದೇಶನ ಕೊಡಬೇಕು ಎಂದು ಹೇಳುತ್ತೇನೆ. ಕುದುರೆಮುಖ ವನ್ಯಜೀವಿಯ ವಿಭಾಗಕ್ಕೆ ಜಾಗವನ್ನು ಹಸ್ತಾಂತರ ಮಾಡತಕ್ಕ ಸಂದರ್ಭದಲ್ಲಿ ಫಾರೆಸ್ಟ್ ಸೆಟ್ಲ್‌ಮೆಂಟ್ ಆಫೀಸರ್ಸ್‌ರವರು ಸ್ಥಳಕ್ಕೆ ಹೋಗಿ ಪರಿಶೀಲಿಸಿ ಹಸ್ತಾಂತರ ಮಾಡಲಿಲ್ಲ. ಉದಾಹರಣೆಗೆ ಕಾರ್ಕಳ ತಾಲ್ಲೂಕಿನಲ್ಲಿರುವ ಜಾರಾ ಗ್ರಾಮದಲ್ಲಿ ನಾಲ್ಕಾರು ನಿವೇಶನ ಇರುವ ಕಾಲೋನಿ, ಕೇಂದ್ರ ಸರ್ಕಾರದ ನವೋದಯ ಶಾಲೆಯಿರುವ ಪ್ರದೇಶ, ಇವೆಲ್ಲವನ್ನು ವನ್ಯ ಜೀವಿ ವಿಭಾಗಕ್ಕೆ ಸೇರಿಸುವ ವ್ಯವಸ್ಥೆ ಮಾಡಿದ್ದಾರೆ. ಅರಣ್ಯವೇ ಇಲ್ಲದೆ ಇದ್ದರೂ ಇದನ್ನು ಸೇರಿಸಿರುವುದರಿಂದ ಇದನ್ನು ಡಿನೋಟಿಫಿಕೇಷನ್ ಮಾಡುವುದಕ್ಕೆ ಸಂಬಂಧಪಟ್ಟ ಇಲಾಖೆಗೆ ಚತಾವು ನಿರ್ದೇಶಿಸಬೇಕು. ಇದರ ಜೊತೆಗೆ ಎಲ್ಲರಿಗೂ ಗೊತ್ತಿರುವಂತೆ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯ ಮುಖೇನ ಹಳದಿ ಕಾರ್ಡುಗಳನ್ನು ವಿತರಣೆ ಮಾಡುತ್ತಿದ್ದಾರೆ, ಇದಕ್ಕೆ ಪೂರಕವಾಗಿ ಬಡತನ ರೇಖೆಗಿಂತ ಕೆಳಗಿರುವವರ ಪಟ್ಟಿಯನ್ನು ಎರಡು ವರ್ಷಗಳ ಹಿಂದೆ ಸಮೀಕ್ಷೆ ಮಾಡಲಾಗಿದೆ. ಈ ಪಟ್ಟಿಯನ್ನು ತಯಾರಿಸುವಾಗ ಸಾಕಷ್ಟು ಲೋಪದೋಶಗಳಾಗಿವೆ. ಇವುಗಳನ್ನು ಪರಿಹಾರ ಮಾಡಲು ಒಂದು ಗ್ರಾಮ ಸಭೆಯನ್ನು ಕರೆದು ಆ ಬಿಪಿಎಲ್ ಪಟ್ಟಿಗೆ ಯಾರನ್ನು ಸೇರಿಸಿಲ್ಲ ಅಂಥವರನ್ನು ಸೇರಿಸುವ ಕೆಲಸವಾಗಬೇಕು, ಯಾರು ಅನರ್ಹರು ಅದರಲ್ಲಿ ಸೇರಿದ್ದಾರೆ ಅಂಥವರನ್ನು ಕೈಬಿಡಬೇಕು ಎಂದು ಸರ್ಕಾರ ಈಗಾಗಲೇ ಎಲ್ಲಾ ಜಿಲ್ಲೆಗಳಿಗೆ ಸುತ್ತೋಲೆ ಕಳುಹಿಸಿದ್ದರೂ ಇದು ಸರಿಯಾಗಿ ಅನುಷ್ಠಾನಕ್ಕೆ ಬರುವಲ್ಲಿ ಜಿಲ್ಲಾ ಮಟ್ಟದಲ್ಲಿ ಒಂದು ರೀತಿಯ ಜಿಜ್ಞಾಸೆ ಇದೆ, ಇದನ್ನು ಪರಿಹರಿಸಲು ಸರ್ಕಾರ ಗಮನಹರಿಸಬೇಕೆಂದು ಹೇಳುತ್ತಾ, ಅಂತರಜಲ ವೃದ್ಧಿಯ ಬಗ್ಗೆ ಈಗಾಗಲೇ ಸರ್ಕಾರ ಯೋಜನೆಗಳನ್ನು ರೂಪಿಸಿಕೊಂಡಿದೆ. ಇನ್ನು ನಮ್ಮ ಜಿಲ್ಲೆ ಆ ಕಾರ್ಯಕ್ರಮವನ್ನು ಸರಿಯಾಗಿ

ಅನುಷ್ಠಾನಗೊಳಿಸಬೇಕೆಂದು ಹೇಳಿ, ನಮ್ಮ ಕರಾವಳಿ ಜಿಲ್ಲೆಯ ರೈತರ ವಿಶೇಷವಾದ ತೊಂದರೆಗಳನ್ನು ಸರ್ಕಾರ ಗಮನಕ್ಕೆ ತೆಗೆದುಕೊಂಡು, ಅದನ್ನು ಪರಿಹರಿಸಲು ಕಾರ್ಯಕ್ರಮಗಳನ್ನು ರೂಪಿಸುತ್ತಾರೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

+ ಎನ್. ಸಂಪಂಗಿ (ಬಾಗೇಪಲ್ಲಿ) :— ಮಾನ್ಯ ಛೇರ್ಮನ್‌ರವರೆ, ಈ ಬೇಡಿಕೆಗಳ ಮೇಲೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ವಂದನೆಗಳು. ಕೋಲಾರ ಜಿಲ್ಲೆಯ 11 ತಾಲ್ಲೂಕುಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಬಹಳ ಅವ್ಯವಸ್ಥೆಯಿಂದ ಕೂಡಿದೆ. ಇದರ ಜೊತೆಗೆ ಮುಂಗಾರು ಮಳೆ ಬಾರದೆ ಇರುವ ಕಾರಣ ಅನೇಕ ರೈತರು ಕಂಗಾಲಾಗಿರುವ ವಿಚಾರ ಈ ಸದನದಲ್ಲಿ ಚರ್ಚೆಯಾಗಿದೆ. ಅದರಲ್ಲೂ ನನ್ನ ಕ್ಷೇತ್ರದಲ್ಲಿ ಸುಮಾರು ವರ್ಷಗಳಿಂದ ಕುಡಿಯುವ ನೀರಿನ ಅವ್ಯವಸ್ಥೆ ಜೊತೆಗೆ ಈ ಫ್ಲೋರೈಡ್ ಅಂಶ ಜಾಸ್ತಿಯಿರುವುದರಿಂದ, ರೈತರಿಗೆ, ನಾಗರೀಕರಿಗೆ ಬಹಳ ನೋವು ಆಗಿದೆ. ಕಳೆದ ಸದನದಲ್ಲೂ ಇದೇ ವಿಷಯವಾಗಿ ನಾನು ಚರ್ಚೆ ಮಾಡಿದಾಗ, ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು, ಈ ಫ್ಲೋರೈಡ್ ಅಂಶ ಎಲ್ಲೆಲ್ಲಿ ಜಾಸ್ತಿಯಿದೆ ಅಲ್ಲಿ ಫ್ಲೋರೈಡ್ ರಹಿತ ನೀರು ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತಿದ್ದೇವೆಂದೂ ಹೇಳಿದ್ದರು. ನಮ್ಮ ಭಾಗದ ಸುಮಾರು 300 ಹಳ್ಳಿಗಳಲ್ಲಿ ಈ ಫ್ಲೋರೈಡ್ ಅಂಶ ಹೆಚ್ಚಾಗಿದೆ. ಇಲ್ಲಿರುವ ಸುಮಾರು 30 ಸಾವಿರ ಜನರು ಈ ಫ್ಲೋರೋಸಿಸ್ ಖಾಯಿಲೆಗೆ ತುತ್ತಾಗಿದ್ದಾರೆ. ಇವನ್ನೆಲ್ಲಾ ಹತೋಟಿ ಮಾಡಲು ಸರ್ಕಾರ ಕ್ರಮ ತೆಗೆದುಕೊಳ್ಳಬೇಕಾಗಿದೆ. ಇವತ್ತು ಈ ಬಾಗದಲ್ಲಿ 400 ರಿಂದ 500 ಅಡಿಗಳಷ್ಟು ಬೋರ್ ಹಾಕಿದರೂ ನೀರು ಸಿಗುತ್ತಿಲ್ಲ, ಸಿಕ್ಕರೂ ಕೂಡ ಫ್ಲೋರೈಡ್ ಅಂಶ ಜಾಸ್ತಿಯಿರುವುದರಿಂದ, ಗಡಿನಾಡಿನಲ್ಲಿರುವ ಜನಗಳು ಬೇರೆ ಕಡೆಗೆ ವಲಸೆ ಹೋಗುವುದಕ್ಕೆ ಪ್ರಯತ್ನಿಸುತ್ತಿದ್ದಾರೆ. ರೈತನಿಗೆ ಬೆಳೆಯಿಲ್ಲದೆ ಆರ್ಥಿಕವಾಗಿ ಹಿಂದೆ ಬಿದ್ದಿದ್ದು ಬಡತನ ತಾಂಡವಾಡುತ್ತಿದೆ. ಈಗಾಗಲೇ ಈ ಫ್ಲೋರೈಡ್ ಅಂಶವನ್ನು ತೆಗೆಯತಕ್ಕ ಕೆಲಸ ಮಾಡುತ್ತೇವೆ ಎಂದು ಸರ್ಕಾರ ಏನು ಹೇಳಿದೆ, ಈ ವ್ಯವಸ್ಥೆಯನ್ನು ನಮ್ಮ ಭಾಗಕ್ಕೆ ಆದಷ್ಟು ಬೇಗನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಅಲ್ಲಿರುವ ಕೆರೆಗಳಲ್ಲಿ ಅವತ್ತು ಹೂಳು ತುಂಬಿಕೊಂಡಿರುವುದರಿಂದ, ಈ ಹೂಳೆತ್ತುವ ಕಾರ್ಯಕ್ರಮ ನಮ್ಮ ಭಾಗದಲ್ಲಿ ಜರುಗಿಲ್ಲ. ಪಕ್ಕದಲ್ಲಿರುವ ಆಂಧ್ರಪ್ರದೇಶದ ಗಡಿನಾಡು ಪ್ರದೇಶಗಳಲ್ಲಿ ಹೂಳೆತ್ತುವ ಕಾರ್ಯಕ್ರಮವಾಗಲಿ, ಫೀಡರ್ ಚಾನಲ್ ಕಾರ್ಯಕ್ರಮವಾಗಲಿ, ಪ್ರಾರಂಭವಾಗಿವೆ. ಆದರೆ ನಮ್ಮ ಬಾಗದಲ್ಲಿ ಈ ಕೆಲಸ ತೆಗೆದುಕೊಳ್ಳುತ್ತೇವೆಂದು ಸರ್ಕಾರ ಏನು ಹೇಳಿದೆ, ಅದನ್ನು ಆದಷ್ಟು ಬೇಗನೆ ಪ್ರಾರಂಭಿಸಬೇಕು. ಇಲ್ಲಿಯವರೆಗೆ ಮಳೆ ಇರಲಿಲ್ಲ ಆಗ ಹೂಳೆತ್ತಿದ್ದರೆ ಬಹಳ ಚೆನ್ನಾಗಿರುತ್ತಿತ್ತು. ಈಗಾಗಲೇ ಅಲ್ಲಿ ಬರ ಬಂದಿರುವುದರಿಂದ ವಲಸೆ ಹೋಗುವ ಜನಗಳನ್ನು ಉಳಿಸುವುದಕ್ಕಾಗಿ ಆದಷ್ಟು ಬೇಗನೆ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಅದೇ ರೀತಿಯಲ್ಲಿ ಬಾಗೇಪಲ್ಲಿ ಮತ್ತು ಗುಡಿಬಂಡೆ ಪಟ್ಟಣಗಳಲ್ಲಿ ಫ್ಲೋರೋಸಿಸ್ ಖಾಯಿಲೆಗೆ ತುತ್ತಾಗಿರುವವರ ಸಂಖ್ಯೆ ಹೆಚ್ಚಾಗಿರುವುದರಿಂದ,

ಇವರಿಗೆ ಸರಿಯಾಗಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡುತ್ತೇವೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದರು. ಚಿತ್ರಾವತಿ ನದಿಗೆ ಬರಗೋಡು ಹತ್ತಿರ ಅಡ್ಡವಾಗಿ ಒಂದು ಅಣೆಕಟ್ಟನ್ನು ನಿರ್ಮಿಸಿ, ಅಲ್ಲಿ ಸಿಗುವಂಥ ಫ್ಲೋರೈಡ್‌ರಹಿತ ನೀರನ್ನು ಬಾಗೇಪಲ್ಲಿ ಮತ್ತು ಗುಡಿಬಂಡೆ ಪಟ್ಟಣಗಳಿಗೆ ಸರಬರಾಜು ಮಾಡಲು ವ್ಯವಸ್ಥೆ ಮಾಡಿಸುತ್ತೇನೆಂದು ಏನು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ, ಆ ಒಂದು ಕಾರ್ಯವನ್ನು ಆದಷ್ಟು ಬೇಗ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಅವರನ್ನು ವಿನಂತಿಸುತ್ತೇನೆ. ನಮ್ಮ ಭಾಗದ ಜನರಿಗೆ ಅನೇಕ ವಿಚಾರಗಳಲ್ಲಿ ಬಹಳ ಅನ್ಯಾಯವಾಗಿದೆ. ಮಾನ್ಯ ಕಂದಾಯ ಮಂತ್ರಿಗಳಿಗೆ ಅನೇಕ ಸಲ ಪತ್ರಗಳನ್ನು ಕೊಟ್ಟಿದ್ದೇನೆ. ನಮ್ಮ ಭಾಗದ ಜನಕ್ಕೆ ಹಾಗೂ ಚಿಕ್ಕಬಳ್ಳಾಪುರದ ಉಪ ವಿಭಾಗದ ಜನಗಳಿಗೆ ಬಹಳ ಅನಾನುಕೂಲವಾಗಿದೆ. ಏಕೆಂದರೆ, ಕೋಲಾರ ಜಿಲ್ಲಾ ಕೇಂದ್ರವಾಗಿರುವುದರಿಂದ, ಇಲ್ಲಿನ ಜನರು ಅಲ್ಲಿಗೆ ಹೋಗುವುದಕ್ಕೆ ಬಹಳ ಅನಾನುಕೂಲವಾಗಿದೆ. ಏಕೆಂದರೆ ನೂರರಿಂದ ನೂರೈವತ್ತು ಕಿಲೋಮೀಟರ್ ಸಂಚರಿಸಬೇಕಾಗುತ್ತದೆ. ಚಿಕ್ಕಬಳ್ಳಾಪುರದ ಸುತ್ತ ಮುತ್ತ ಇರುವ ಶಿಡ್ಲಘಟ್ಟವಾಗಲಿ ಗೌರಿಬಿದನೂರು ಆಗಲಿ ಗುಡಿಬಂಡೆಯಿರಬಹುದು, ಚಿಕ್ಕಬಳ್ಳಾಪುರ ಇರಬಹುದು. ಈ ಭಾಗದ ಜನರು ಕೋಲಾರಕ್ಕೆ ಹೋಗಬೇಕೆಂದರೆ ಬಹಳ ಅವ್ಯವಸ್ಥೆ ಇದೆ. ಏಕೆಂದರೆ, ಚಿಕ್ಕಬಳ್ಳಾಪುರದಿಂದ ಕೋಲಾರಕ್ಕೆ ಹೋಗುವ ರಸ್ತೆಗಳು ಡಾಂಬರೀಕರಣವಾಗಿಲ್ಲ. ಚಿಕ್ಕಬಳ್ಳಾಪುರ ಉಪ ವಿಭಾಗದವರು, ಯಾವುದೇ ಕೋರ್ಟು, ಕಛೇರಿ, ಕೆಲಸಕ್ಕೆ ಹೋಗಬೇಕಾದರೆ ಸಮಯಕ್ಕೆ ಸರಿಯಾಗಿ ಹೋಗುವುದಕ್ಕೆ ಆಗುತ್ತಿಲ್ಲ. ಏಕೆಂದರೆ ಬಸ್ಸಿನ ಸೌಕರ್ಯಗಳು ಹೆಚ್ಚಾಗಿಲ್ಲ. ಚಿಕ್ಕಬಳ್ಳಾಪುರ ಪ್ರಸಿದ್ಧವಾದ ಸ್ಥಳ. ಇಡೀ ರಾಜ್ಯದಲ್ಲಿ ಅಲ್ಲದೆ ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರಸಿದ್ಧವಾದ ಸ್ಥಳ ಚಿಕ್ಕಬಳ್ಳಾಪುರ. ಏಕೆಂದರೆ ಸರ್ ಎಂ. ವಿಶ್ವೇಶ್ವರಯ್ಯನವರು ಜನಿಸಿದಂತ ಮುದ್ದೇನಹಳ್ಳಿಯಲ್ಲಿರುವ ಅವರ ಮನೆಯನ್ನು ವಸ್ತು ಸಂಗ್ರಹಾಲಯವನ್ನಾಗಿ ಮಾಡಿ, ಪ್ರವಾಸಿಗರನ್ನು ಆಕರ್ಷಿಸುವ ಕೆಲಸ ಮಾಡುತ್ತಿಲ್ಲ. ಶ್ರೀ ವಿಶ್ವೇಶ್ವರಯ್ಯನವರೇ ಪಂಡಿತ್ ಜವಹರ್‌ಲಾಲ್ ನೆಹರೂ ಅವರನ್ನು ಕರೆದುಕೊಂಡು ಬಂದು ಒಂದು ಗ್ರಂಥಾಲಯಕ್ಕೆ ಶಂಕು ಸ್ಥಾಪನೆ ಮಾಡಿದಂಥ ಕಟ್ಟಡದಲ್ಲಿ ಇವತ್ತು ನಾಯಿಗಳು, ಭಿಕ್ಷುಕರು ಮಲಗುವಂಥ ಪರಿಸ್ಥಿತಿ ಬಂದಿದೆ. ಚಿಕ್ಕಬಳ್ಳಾಪುರ ತಾಲ್ಲೂಕಿನಲ್ಲಿರುವ ನಂದಿ ಬೆಟ್ಟ ಗಿರಿಧಾಮಕ್ಕೆ ಮಹಾತ್ಮ ಗಾಂಧಿಜೀಯವರು ಬಂದು ಶಾಂತಿ ಧಾಮದಲ್ಲಿ ಕೆಲವು ದಿನಗಳವರೆಗೆ ನೆಲೆಸಿದ್ದರು ಎನ್ನತಕ್ಕಂಥದನ್ನು ನಾವು ಪುಸ್ತಕದಲ್ಲಿ ಓದಿದ್ದೇವೆ.

ಛೇರ್ಮನ್ :— ಈ ವಿಷಯದ ಬಗ್ಗೆ ತಾವು ಪ್ರಸ್ತಾವನೆಯನ್ನು ಸಲ್ಲಿಸಿದ್ದೀರಾ?

ಶ್ರೀ ಎನ್. ಸಂಪಂಗಿ :— ಮಾನ್ಯ ಉಪಾಧ್ಯಕ್ಷರೆ, ನಾನು ಈಗಾಗಲೇ ಪ್ರಸ್ತಾವನೆಯನ್ನು ಕಳುಹಿಸಿದ್ದೇನೆ. ಹಾಗೆಯೇ ಇದರ ಬಗ್ಗೆ ಎರಡು-ಮೂರು ಬಾರಿ ಮಾತನಾಡಿದ್ದೇನೆ. ಈ ವಿಷಯ ಕಂದಾಯ ಮಂತ್ರಿಯವರಿಗೂ ಸಹ ಗೊತ್ತಿದೆ.

ಚಿಕ್ಕಬಳ್ಳಾಪುರಕ್ಕೆ ಮಹನೀಯರಾದಂಥ ಶ್ರೀ ಪಂಡಿತ್ ಜವಹಾರ್‌ಲಾಲ್ ನೆಹರುರವರು ಮತ್ತು ಮಹಾತ್ಮ ಗಾಂಧೀಯವರು ಪಾದಾರ್ಪಣೆ ಮಾಡಿದಂಥ ಸ್ಥಳವಾಗಿದೆ. ಆದರೆ, ಇವತ್ತಿನ ದಿವಸ ಈ ಒಂದು ಜಾಗಗಳು ನಶಿಸಿ ಹೋಗುವಂಥ ಪರಿಸ್ಥಿತಿ ಬಂದಿದೆ. ಈ ಭಾಗದ ಜನರಿಗೆ ಯಾವುದೇ ರೀತಿಯ ಸೌಕರ್ಯ ಸಿಕ್ಕಿಲ್ಲ. ಹಾಗೆಯೇ ಇಲ್ಲಿನ ರೈತರ ಅಭಿವೃದ್ಧಿ ವಿಚಾರದಲ್ಲಿ ಬಹಳಷ್ಟು ಕುಂಠಿತವಾಗಿದೆ. ಹಾಗೆಯೇ ಇಲ್ಲಿ ಒಳ್ಳೆಯ ರಸ್ತೆಗಳು ಮತ್ತು ಆಸ್ಪತ್ರೆಗಳ ಸೌಕರ್ಯವೂ ಕೂಡ ಇಲ್ಲ. ಇಲ್ಲಿರತಕ್ಕಂಥ ಜನರಿಗೆ ಅನೇಕ ಅಡೆತಡೆಗಳಿರುವುದರಿಂದ ಈ ಸಂದರ್ಭದಲ್ಲಿ ಸರ್ಕಾರಕ್ಕೆ ನೇರವಾಗಿ ಕೇಳಿಕೊಳ್ಳುವುದೇನೆಂದರೆ, ಈ ಭಾಗವನ್ನು ಚಿಕ್ಕಬಳ್ಳಾಪುರ ಜಿಲ್ಲೆಯನ್ನಾಗಿ ಮಾಡಿ ಇದಕ್ಕೆ ಸರ್ ಎಂ. ವಿಶ್ವೇಶ್ವರಯ್ಯ ಜಿಲ್ಲೆಯೆಂದು ನಾಮಕರಣ ಮಾಡಬೇಕೆಂದು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಚಿಕ್ಕಬಳ್ಳಾಪುರದಿಂದ ಬೆಂಗಳೂರು ಸುಮಾರು 60 ಕಿ.ಮೀ. ದೂರವಿದೆ. ಆದೆ, ಚಿಕ್ಕಬಳ್ಳಾಪುರದಿಂದ ನಮ್ಮ ಮುಖ್ಯ ಕೇಂದ್ರಸ್ಥಾನವಾದ ಕೋಲಾರ ಸುಮಾರು 100 ಕಿ.ಮೀ. ದೂರವಿದೆ. ಇವತ್ತಿನ ದಿವಸ ಬೆಂಗಳೂರಿನಿಂದ ಬಾಗೇಪಲ್ಲಿಯವರೆಗೆ 6 ಲೈನ್‌ಗಳ ಕಾರಿಡಾರ್ ಯೋಜನೆಯಲ್ಲಿ ಒಳ್ಳೆಯ ರಾಷ್ಟ್ರೀಯ ಹೆದ್ದಾರಿಯನ್ನು ಸನ್ಮಾನ್ಯ ಮುಖ್ಯಮಂತ್ರಿಯವರು ಮಾಡಿಸಿದ್ದಾರೆ. ಹಾಗೆಯೇ ಚಿಕ್ಕಬಳ್ಳಾಪುರಕ್ಕೆ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವೂ ಕೂಡ ಬಹಳ ಹತ್ತಿರವಿದೆ. ಆದ್ದರಿಂದ ಬಹಳ ಹತ್ತಿರ ಇರತಕ್ಕಂಥ ಚಿಕ್ಕಬಳ್ಳಾಪುರವನ್ನು ಚಿಕ್ಕಬಳ್ಳಾಪುರ ಜಿಲ್ಲೆಯನ್ನಾಗಿ ಮಾಡಿದರೆ ನಿಜವಾಗಿಯೂ ನಮ್ಮ ಜನರು ಸರ್ಕಾರಕ್ಕೆ ಕೃತಜ್ಞತರಾಗಿರುತ್ತಾರೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಆದ್ದರಿಂದ, ಆದಷ್ಟು ಬೇಗ ಚಿಕ್ಕಬಳ್ಳಾಪುರವನ್ನು ಜಿಲ್ಲೆಯನ್ನಾಗಿ ಮಾಡಬೇಕೆಂದು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಮೊನ್ನೆ ದಿವಸ ಒಂದು ವಿಚಾರದ ಬಗ್ಗೆ ನಾನು ಸದನದ ಬಾವಿಗೆ ಹೋಗಿದೆ. ಇವತ್ತಿನ ದಿವಸ ಬಾವಿಯಾಗಲಿ ಅಥವಾ ಸಮುದ್ರಕ್ಕೆ ಹೋದರೂ ಸಹ ನಮ್ಮ ವಿಚಾರವನ್ನು ಕೇಳುವಂಥವರು ಇಲ್ಲ. ಇವತ್ತಿನ ದಿವಸ ವಾರ್ತೆ ಓದುವಾಗ ಕ್ರೀಡಾರಂಗದ ವಿಷಯವನ್ನು ಕೊನೆಯಲ್ಲಿ ತೆಗೆದುಕೊಳ್ಳುತ್ತಿದ್ದಾರೆ. ಆದ್ದರಿಂದ ಇವತ್ತಿನ ದಿವಸ ಯುವಕರೂ ಕೂಡ ಕೊನೆಯಲ್ಲಿದ್ದಾರೆ. ಯುವಕರು ಇವತ್ತಿನ ದಿವಸ ಕರಬೇವಿನಸೊಪ್ಪಾಗಿದ್ದಾರೆ. ಹೇಗೆಂದರೆ, ಕರಬೇವಿನಸೊಪ್ಪು ವಗ್ಗರಣೆಗೆ ಮುಖ್ಯವಾಗಿರುತ್ತದೆ. ಆದರೆ ಊಟದ ಸಮಯದಲ್ಲಿ ಇದನ್ನು ಹೊರಕ್ಕೆ ಹಾಕುತ್ತಾರೆ. ಇವತ್ತಿನ ದಿವಸ ಯುವಕರ ಪರಿಸ್ಥಿತಿ ಇದೇ ರೀತಿಯಾಗಿದೆ. ಈ ಸಂದರ್ಭದಲ್ಲಿ ಕ್ರೀಡಾ ಮಂತ್ರಿಯವರಿಗೆ ಒಂದು ವಿಚಾರವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮಲ್ಲಿ ಸುಮಾರು ಕ್ರೀಡಾ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗಿದೆ. ನಮ್ಮ ರಾಜ್ಯದಲ್ಲಿರತಕ್ಕಂಥ ೧೭೫ ತಾಲ್ಲೂಕುಗಳಲ್ಲಿ ಕೇವಲ ೮ ತಾಲ್ಲೂಕುಗಳಲ್ಲಿ ಮಾತ್ರ ಕ್ರೀಡಾಂಗಣ ಪೂರ್ತಿಯಾಗಿದೆ ಎಂದು ವರದಿ ಬಂದಿದೆ. ಇನ್ನು ೮೫ ಕ್ರೀಡಾಂಗಣಗಳನ್ನು ಪೂರ್ತಿ ಮಾಡುವುದಕ್ಕೆ ಸುಮಾರು ೧೮ ಕೋಟಿ ರೂಪಾಯಿಗಳು ಬೇಕಾಗುತ್ತದೆ ಎಂದು ಸರ್ಕಾರ ಹೇಳಿದೆ.

ಇವತ್ತಿನ ದಿವಸ ೧೮ ಕೋಟಿ ರೂಪಾಯಿ ಕೊಡತಕ್ಕಂಥ ಸ್ಥಿತಿಯಲ್ಲಿ ಸರ್ಕಾರ ಇಲ್ಲ. ಇವತ್ತಿನ ದಿವಸ ತಾಲ್ಲೂಕು ಕ್ರೀಡಾಂಗಣಗಳನ್ನು ಆದಷ್ಟು ಬೇಗ ಪೂರ್ತಿಮಾಡಿ ಗ್ರಾಮಾಂತರ ಪ್ರದೇಶದಲ್ಲಿರತಕ್ಕಂಥ ಕ್ರೀಡಾಪಟುಗಳಿಗೆ ಉತ್ತೇಜನ ಕೊಡುವುದರ ಬಗ್ಗೆ ಸರ್ಕಾರ ಆಲೋಚನೆ ಮಾಡಬೇಕಾಗಿದೆ. ಇವತ್ತಿನ ದಿವಸ ಸುಮಾರು ೨೦ ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿದರೆ ತಾಲ್ಲೂಕು ಕ್ರೀಡಾಂಗಣಗಳು ಪೂರ್ತಿಯಾಗುತ್ತವೆ. ಇದಕ್ಕೆ ನನ್ನ ಸಲಹೆ ಏನೆಂದರೆ, ಲೋಕಸಭಾ ಮತ್ತು ರಾಜ್ಯ ಸಭಾ ಸದಸ್ಯರನ್ನು ನಮ್ಮ ರಾಜ್ಯದಿಂದ ಆಯ್ಕೆ ಮಾಡಿ ಕೇಂದ್ರಕ್ಕೆ ಕಳುಹಿಸಿ ಕೊಡುತ್ತೇವೆ. ಕೇಂದ್ರ ಸರ್ಕಾರ ಇವರಿಗೆ ಕೊಡತಕ್ಕಂಥ ಅನುದಾನದಲ್ಲಿ ಕನಿಷ್ಟಪಕ್ಷ ೨೫ ಲಕ್ಷ, ರೂಪಾಯಿಗಳನ್ನು ಕ್ರೀಡಾ ರಂಗಕ್ಕೆ ಉತ್ತೇಜನ ನೀಡುವುದಕ್ಕಾಗಿ ಪ್ರತಿಯೊಬ್ಬ ಸದಸ್ಯರು ಕೊಟ್ಟರೆ, ಇದರಿಂದ ಸುಮಾರು ೨೦ ಕೋಟಿ ರೂ. ಕಲೆಕ್ಟ್ ಆಗುತ್ತದೆ. ಈ ಒಂದು ಹಣದಿಂದ ತಾಲ್ಲೂಕು ಕ್ರೀಡಾಂಗಣವನ್ನು ಪೂರ್ತಿ ಮಾಡಿ ಕ್ರೀಡೆಗೆ ಹೆಚ್ಚಿನ ಉತ್ತೇಜನ ನೀಡುವುದಕ್ಕೆ ಸಾಧ್ಯವಾಗುತ್ತದೆಂದು ಈ ಸಂದರ್ಭದಲ್ಲಿ ಸರ್ಕಾರಕ್ಕೆ ತಿಳಿಸಲಿಚ್ಛಿಸುತ್ತೇನೆ. ಇವತ್ತಿನ ದಿವಸ ಯುವಜನ ಸೇವಾ ಇಲಾಖೆಯವರು ಸರ್ಕಾರಿ ಕ್ರೀಡಾ ಕೂಟಗಳನ್ನು ನಡೆಸುತ್ತಿದ್ದಾರೆ. ೧೪ ಲಕ್ಷ ರೂಪಾಯಿಗಳನ್ನು ಸರ್ಕಾರಿ ಕ್ರೀಡಾ ಕೂಟಕ್ಕೆ ಕೊಡತಕ್ಕಂಥದು ಅವಶ್ಯಕತೆ ಇದೆಯೆ ಎಂದು ಕೇಳುವುದಕ್ಕೆ ಇಷ್ಟಪಡುತ್ತೇನೆ. ಏಕೆಂದರೆ, ನಮ್ಮಲ್ಲಿರತಕ್ಕಂಥ ಅನೇಕ ಕ್ರೀಡಾಪಟುಗಳು ಚಿನ್ನದ ಮತ್ತು ಬೆಳ್ಳಿಯ ಪದಕವನ್ನು ಗೆದ್ದಿದ್ದಾರೆ. ಇವರಿಗೆ ಇವತ್ತಿನ ದಿವಸ ಒಂದು ಸಮಯದ ಊಟ ಸಿಗದೇ ಭಿಕ್ಷೆ ಮಾಡತಕ್ಕಂಥ ಪರಿಸ್ಥಿತಿ ಇದೆ. ಇಂಥ ಸಂದರ್ಭದಲ್ಲಿ ಸರ್ಕಾರ ನೌಕರರ ಕ್ರೀಡಾ ಕೂಟಕ್ಕೆ ೧೪ ಲಕ್ಷ ರೂಪಾಯಿ ಕೊಡುತ್ತಿದ್ದಾರೆಂದರೆ ನಿಜವಾಗಿಯೂ ಇದರ ಬಗ್ಗೆ ಆಲೋಚನೆ ಮಾಡಬೇಕಾಗಿದೆ. ಏಕೆಂದರೆ, ಒಬ್ಬ ಸರ್ಕಾರಿ ನೌಕರ ಒಂದು ವರ್ಷದಲ್ಲಿ ೫ ರೂಪಾಯಿಯನ್ನು ಈ ಒಂದು ಕ್ರೀಡಾ ಕೂಟಕ್ಕೆ ಕೊಡುವುದರಿಂದ ಲಕ್ಷಾಂತರ ರೂಪಾಯಿ ಕಲೆಕ್ಟ್ ಆಗುತ್ತಿದೆ. ಈ ಒಂದು ಹಣದಿಂದಲೇ ಯುವಜನ ಸೇವಾ ಇಲಾಖೆಯವರು ಸರ್ಕಾರಿ ನೌಕರರ ಕ್ರೀಡಾ ಕೂಟವನ್ನು ನಡೆಸಬಹುದು.

(ಈ ಹಂತದಲ್ಲಿ ಸನ್ಮಾನ್ಯ ಉಪಾಧ್ಯಕ್ಷರು (ಶ್ರೀ ಮನೋಹರ್ ಹೆಚ್. ತಹಸಿಲ್ದಾರ್)ರವರು ಪೀಠವನ್ನು ಅಲಂಕರಿಸಿದರು)

ಸರ್ಕಾರಿ ನೌಕರರ ಕ್ರೀಡಾಕೂಟಕ್ಕೆ ಕೊಡತಕ್ಕಂಥ 14 ಲಕ್ಷ ರೂಪಾಯಿಗಳನ್ನು ಕೊಳಚೆ ನಿವಾಸಿಗಳ ಕ್ರೀಡಾಕೂಟಕ್ಕೆ ಕೊಡುವಂಥ ಒಂದು ವ್ಯವಸ್ಥೆ ಆಗಬೇಕು. ಏಕೆಂದರೆ ಕೊಳಚೆ ನಿವಾಸಿಗಳ ಕ್ರೀಡಾಕೂಟಕ್ಕೆ ನಾನು ಅಧ್ಯಕ್ಷನಾಗಿದಂಥ ಸಂದರ್ಭದಲ್ಲಿ ಇದನ್ನು ಮಾಡಿ ಕೊಟ್ಟಿದ್ದೇನೆ. ಆದರೆ ಈಗ ಇದನ್ನು ನಿಲ್ಲಿಸಿದ್ದಾರೆ. ಕೊಳಚೆ ಪ್ರದೇಶದಲ್ಲಿರತಕ್ಕಂಥ ಮಕ್ಕಳಿಗೆ ಇವತ್ತಿನ ದಿವಸ ಯಾವುದೇ ರೀತಿಯ ಉತ್ತೇಜನವನ್ನು ಕೊಡುತ್ತಿಲ್ಲ. ಹಳ್ಳಿಯಿಂದ ಬಂದಿರತಕ್ಕಂಥವರಿಗೆ ಸರಿಯಾದ ಆರ್ಥಿಕ ವ್ಯವಸ್ಥೆ ಇಲ್ಲದೇ ಇರತಕ್ಕಂಥ

ಸಂದರ್ಭದಲ್ಲಿ ಇವರೆಲ್ಲರೂ ಕೊಳಚೆ ಪ್ರದೇಶಗಳಿಗೆ ಹೋಗಿ ಸೇರಿಕೊಂಡಿದ್ದಾರೆ. ಇಲ್ಲಿನ ಮಕ್ಕಳಿಗೆ ವಿದ್ಯಾಭ್ಯಾಸ ಮಾಡುವುದಕ್ಕೆ ಆಸೆ ಇರುತ್ತದೆ. ಹಾಗೆಯೇ ಕ್ರೀಡೆಗಳಲ್ಲಿ ಭಾಗವಹಿಸುವುದಕ್ಕೆ ಆಸಕ್ತಿ ಇರುತ್ತದೆ. ಆದರೆ ಇವರಿಗೆ ಯಾವುದೇ ರೀತಿಯ ಉತ್ತೇಜನ ಸಿಗುತ್ತಿಲ್ಲ. ಆದ್ದರಿಂದ ಸರ್ಕಾರ ಕೊಳಚೆ ಪ್ರದೇಶದ ನಿವಾಸಿಗಳಿಗೆ ಉತ್ತೇಜನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಹಾಗೇಯೇ ಕೊಳಚೆ ಪ್ರದೇಶದಲ್ಲಿ ಕ್ರೀಡಾಕೂಟಗಳನ್ನು ಪ್ರತಿವರ್ಷ ಮಾಡಿ, ಪ್ರತಿವರ್ಷ ೨೦ ಪ್ರತಿಭಾವಂತ ಮಕ್ಕಳನ್ನು ಸರ್ಕಾರ ದತ್ತು ತೆಗೆದುಕೊಂಡು ಯುವಜನ ಸೇವಾ ಹಾಸ್ಟೆಲ್‌ನಲ್ಲಿ ಇವರು ಇದ್ದುಕೊಂಡು ಓದುವುದಕ್ಕೆ ಮತ್ತು ಕ್ರೀಡಾ ಕಾರ್ಯಕ್ಕೆ ಉತ್ತೇಜನ ಕೊಡಬೇಕೆಂದು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಇದೇ ರೀತಿಯಾಗಿ ನಮ್ಮಲ್ಲಿರತಕ್ಕಂಥ ಕ್ರೀಡಾಪಟುಗಳಿಗೆ ನಾವು ಎಲ್ಲಾ ರೀತಿಯಾದ ವ್ಯವಸ್ಥೆಯನ್ನು ಮಾಡುತ್ತಿದ್ದೇವೆಂದು ತಾವು ಹೇಳುತ್ತೀರಿ. ಆದರೆ ಯಾವುದೇ ರೀತಿಯ ವ್ಯವಸ್ಥೆಯನ್ನು ಇವತ್ತಿನ ದಿವಸ ಕ್ರೀಡಾಪಟುಗಳಿಗೆ ಕೊಡುತ್ತಿಲ್ಲ. ವರ್ಷಕ್ಕೆ ಒಂದು ಬಾರಿ ಏಕಲವ್ಯ ಎನ್ನತಕ್ಕಂಥ ಪ್ರಶಸ್ತಿಯನ್ನು ಕೊಡುವುದಕ್ಕೆ ಪ್ರಾರಂಭ ಮಾಡಿದಂಥ ಸಂದರ್ಭದಲ್ಲಿ ಎಲ್ಲಾ ಕ್ರೀಡಾಪಟುಗಳು ಬಹಳ ಸಂತೋಷಪಟ್ಟರು. ಏಕಂದರೆ ಕೇಂದ್ರ ಸರ್ಕಾರ ಅರ್ಜುನ ಪ್ರಶಸ್ತಿ ಕೊಡುತ್ತಿದ್ದು, ನಮ್ಮ ರಾಜ್ಯದಲ್ಲಿ ಉನ್ನತ ಮಟ್ಟದ ಕ್ರೀಡಾ ಪಟುಗಳಿಗೆ ಏಕಲವ್ಯ ಪ್ರಶಸ್ತಿಯನ್ನು ಕೊಡುತ್ತಿದ್ದುದನ್ನು ಈಗ ನಿಲ್ಲಿಸಿದ್ದಾರೆ. ಇಂಥ ಪ್ರಶಸ್ತಿಗಳನ್ನು ಮತ್ತು ಇತರೇ ಸೌಕರ್ಯಗಳನ್ನು ಕರ್ನಾಟಕ ರಾಜ್ಯದಲ್ಲಿರತಕ್ಕಂಥ ಕ್ರೀಡಾಪಟಿಗಳಿಗೆ ಕೊಡದೇ ಇದ್ದರೆ ಯಾವ ರೀತಿಯಾದ ನೋವು ಅವರಿಗೆ ಆಗುತ್ತದೆ ಎನ್ನತಕ್ಕಂಥದನ್ನು ಸರ್ಕಾರ ಅರ್ಥ ಮಾಡುಕೊಳ್ಳಬೇಕಾಗಿದೆ. ಇವರಿಗೆ ಕೊಡತಕ್ಕಂಥ ಪ್ರತಿಮೆ ಅಥವಾ ಹಣ ಮುಖ್ಯವಲ್ಲ. ಪ್ರತಿವರ್ಷ ಪ್ರಶಸ್ತಿ ಕೊಡತಕ್ಕಂಥದು ಪ್ರಾರಂಭಮಾಡಬೇಕು. ಹಾಗೆಯೇ ಪ್ರತಿ ವರ್ಷ ಇವರಿಗೆ ಸಿಗಬೇಕಾಗಿರತಕ್ಕಂಥ ಸೌಕರ್ಯಗಳನ್ನು ಕೊಡುವುದಕ್ಕೆ ಸರ್ಕಾರ ಹಿಂದು-ಮುಂದು ನೋಡಬಾರದೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಸಾರಿಗೆ ಮಂತ್ರಿಯವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಏಕಲವ್ಯ ವಿಜೇತರಿಗೆ ಮತ್ತು ಅವರ ಕುಟುಂಬದ ಮೂರು ಜನ ಸದಸ್ಯರಿಗೆ ಇಡೀ ಕರ್ನಾಟಕ ರಾಜ್ಯದಲ್ಲಿ ಒಂದು ವರ್ಷ ಪೂರ್ತಿ ಬಸ್ಸಿನಲ್ಲಿ ಓಡಾಡುವುದಕ್ಕೆ ಉಚಿತ ಪಾಸ್ ಕೊಡತಕ್ಕಂಥ ಕೆಲಸ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇವೆಲ್ಲವನ್ನೂ ನಾನು ಏಕೆ ಹೇಳುತ್ತಿದ್ದೇನೆಂದರೆ, ನಮ್ಮ ರಾಜ್ಯದ ಕ್ರೀಡಾಪಟುಗಳಿಗೆ ಸರಿಯಾದಂಥ ಸೌಕರ್ಯಗಳು ಸಿಗದೇ ಇದ್ದಾಗ ನಮ್ಮ ಕ್ರೀಡಾ ಪ್ರಗತಿ ಬಹಳ ಹಿಂದೆ ಬೀಳುತ್ತದೆ ಎನ್ನತಕ್ಕಂಥ ವಿಷಯವನ್ನು ಸರ್ಕಾರಕ್ಕೆ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಕರ್ನಾಟಕ ರಾಜ್ಯದಲ್ಲಿ ಕ್ರೀಡೆ ಹಿಂದಕ್ಕೆ ಬೀಳುವುದಕ್ಕೆ ಆರ್ಥಿಕ ಪರಿಸ್ಥಿತಿ ಒಂದು ಮುಖ್ಯ ಕಾರಣವೆಂದು ನಾವೆಲ್ಲಾ ಕೇಳಿದ್ದೇವೆ. ಬಹಳ ಪ್ರಯತ್ನಗಳಿಂದ ರಾಷ್ಟ್ರೀಯ ಕ್ರೀಡಾ ಕೂಟವನ್ನು ನಮ್ಮ ರಾಜ್ಯಕ್ಕೆ ತಂದಂಥ ಸಂದರ್ಭದಲ್ಲಿ ಸುಮಾರು ೧೪೦ ಕೋಟಿ ರೂಪಾಯಿ ವೆಚ್ಚದಲ್ಲಿ ಕ್ರೀಡಾಂಗಣ ನಿರ್ಮಾಣವನ್ನು ನಾವು ಮಾಡಿದ್ದೇವೆ.

ಆಗ ಕ್ರೀಡಾಂಗಣ ಮಾಡುವಂಥ ವಿಚಾರದಲ್ಲಿ ಕರ್ನಾಟಕ ರಾಜ್ಯದ ನಾಗರೀಕರು ಮತ್ತು ಕ್ರೀಡಾಪಟುಗಳು ಬಹಳ ಸಂತೋಷಪಟ್ಟರು. ನಾವು ಒಂದು ಕಂಠೀರವ ಕ್ರೀಡಾಂಗಣವನ್ನು

12.40 ಪಿ.ಎಂ.

ನೋಡುತ್ತಿದ್ದೇವೆ. ಅದರ ಬಗ್ಗೆ ಜನರು ಕೇಳುತ್ತಿದ್ದರು. ಆದರೆ, ಕಾಂಗ್ರೆಸ್ ಸರ್ಕಾರವಿದ್ದ ಸಂದರ್ಭದಲ್ಲಿ ರಾಷ್ಟ್ರೀಯ ಕ್ರೀಡೆಗಳನ್ನು ಕರ್ನಾಟಕದಲ್ಲಿ ನಡೆಸಲೇಬೇಕೆಂಬ ಒತ್ತಾಯ ಮಾಡಿ, ಸತತ ಪ್ರಯತ್ನದಿಂದ ಕರ್ನಾಟಕದಲ್ಲಿ ರಾಷ್ಟ್ರೀಯ ಕ್ರೀಡೆಗಳನ್ನು ತಂದೆವು. ಆ ಸಂದರ್ಭದಲ್ಲಿ ನಮಗೆ ಸುಮಾರು 70-80 ಕೋಟಿ ರೂ.ಗಳಲ್ಲಿ ಒಳಾಂಗಣ ಕ್ರೀಡಾಂಗಣ, ಹೊರಾಂಗಣ ಕ್ರೀಡಾಂಗಳನ್ನು ನಿರ್ಮಿಸಲು ಎಸ್ಟೀಮೆಟ್ ತಯಾರಾಯಿತು. ಸಭೆ ನಡೆದು, ಕೆಲಸವು ಸಹ ಶುರುವಾಯಿತು. ನಂತರ, ಯಾವುದೋ ಕಾರಣದಿಂದ ಅದು ಬಿದ್ದುಹೋಯಿತು. ಇನ್ನೊಂದು ಸರ್ಕಾರ ಬಂದಾಗ, ಹಿಂದೆ ನಡೆಸಿದ ರಾಷ್ಟ್ರೀಯ ಕ್ರೀಡೆಗಳನ್ನು ನಡೆಸುವುದಕ್ಕೆ ಪ್ರಯತ್ನ ಮಾಡಿದ ಎಲ್ಲರನ್ನೂ ದೂರವಿಟ್ಟು, ಯಾರನ್ನೂ ಈ ವಿಚಾರವಾಗಿ ಕೇಳಲಿಲ್ಲ. ಕಾಂಗ್ರೆಸ್ ಸರ್ಕಾರ ಬರುವುದಕ್ಕೆ ಮುಂದೆ ಯಾವ ಸರ್ಕಾರವಿತ್ತು ಆದರ ಬಗ್ಗೆ ಹೇಳುತ್ತಿದ್ದೇನೆ. ನಾನು ಸ್ವತಂತ್ರ ಅಭ್ಯರ್ಥಿ. ನನಗೆ ಸ್ವಾತಂತ್ರ್ಯ ಸಿಕ್ಕಿದೆ, ಮಾತನಾಡಲು ಅವಕಾಶ ಕೊಟ್ಟಿದ್ದಾರೆ. ಸ್ವಾತಂತ್ರ್ಯ ಬಂದ ಮೇಲೆ ಬಹಳ ದಿವಸಗಳಿಂದ ಮಾತನಾಡುವುದಕ್ಕೆ ಅವಕಾಶ ಕೊಡಿ ಎನ್ನುತ್ತಿದ್ದೆ, ಅಲ್ಲಿ ಜನರು ನನಗೆ ಸ್ವಾತಂತ್ರ್ಯ ಕೊಟ್ಟು ಕಳುಹಿಸಿದರೂ ಇಲ್ಲಿ ನನಗೆ ಸ್ವಾತಂತ್ರ್ಯ ಸಿಗದ ಪರಿಸ್ಥಿತಿ ಇತ್ತು. ಇಂದು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಾರೆ, ಮಾತನಾಡುತ್ತಿದ್ದೇನೆ. ಇವತ್ತು ನಾವೆಲ್ಲಾ ಕೆಲಸ ಮಾಡಿ ರಾಷ್ಟ್ರೀಯ ಕ್ರೀಡೆಗಳನ್ನು ಕರ್ನಾಟಕಕ್ಕೆ ತರಲೇಬೇಕೆಂಬ ಕಾರಣದಿಂದ ಇಲ್ಲಿ ತಂದ ಸಂದರ್ಭದಲ್ಲಿ ನಮ್ಮನ್ನು ದೂರವಿಟ್ಟು, 80 ಕೋಟಿ ರೂ.ಗಳಲ್ಲಿ ಕ್ರೀಡಾಂಗಣವನ್ನು ಪೂರ್ತಿ ಮಾಡುವುದು ಬಿಟ್ಟು, 140 ಕೋಟಿ ರೂ.ಗಳಲ್ಲಿ ಪೂರ್ಣ ಮಾಡಿದರು. ಅಂದರೆ ಇದರಲ್ಲಿ ಬಹಳ ಅವ್ಯವಹಾರ ನಡೆದಿರುವುದಕ್ಕೆ ಬಹಳ ದಾಖಲೆಗಳಿವೆ. ಒಳಾಂಗಣ ಕ್ರೀಡಾಂಗಣಕ್ಕೆ ಹಲಗೆ ಹಾಸಿಗೆ ಹಾಕಿದೆ; ಸಿಂಥೆಟಿಕ್ ಫ್ಲೋರಿಂಗ್ ಹಾಕಲು ಎಲ್ಲರೂ ತೀರ್ಮಾನಿಸಿದರು. ಅದನ್ನು ಹಾಕುವುದಕ್ಕೋಸ್ಕರ ಹೊರ ದೇಶಕ್ಕೆ ಅನೇಕ ಅಧಿಕಾರಿಗಳು ಹೋದರು. ಇದಕ್ಕೆ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿದರು. ಹೊರ ದೇಶದಿಂದ ಸುಮಾರು 76.81 ಸಾವಿರ ರೂ. ವೆಚ್ಚದಲ್ಲಿ ನೆದರ್‌ಲ್ಯಾಂಡ್ ಕಂಪನಿಯಿಂದ 1997ರ ಫೆಬ್ರವರಿಯಲ್ಲಿ ಸಿಂಥೆಟಿಕ್ ಫ್ಲೋರಿಂಗ್ ಸಾಮಗ್ರಿಗಳನ್ನು ಬೆಂಗಳೂರಿಗೆ ತರಿಸಿಕೊಂಡರು. ಅದು ಬಂದ ನಂತರ, ಇದರ ಬಗ್ಗೆ ಚರ್ಚೆ ಪ್ರಾರಂಭವಾಯಿತು. ಕೊನೆಗೆ ಇವರೆಲ್ಲರೂ ಒಂದು ತೀರ್ಮಾನಕ್ಕೆ ಬಂದು 1997ರಲ್ಲಿ ನೆಲ ಹಾಸುವ ಪ್ರಕ್ರಿಯೆಯನ್ನು ಮುಂದೆ ಹಾಕಿದರು. ಮತ್ತೆ ಇವರೇ 1997ರಲ್ಲಿ ನೆಲ ಹಾಸು ಹಾಕುವುದಕ್ಕೆ ಸಾಧ್ಯವಿಲ್ಲವೆಂದರು. ಸಾಧ್ಯವಿಲ್ಲದ ಪರಿಸ್ಥಿತಿಯಲ್ಲಿ

ಸಾಮಗ್ರಿಗಳನ್ನು ಇವರೇಕೆ ತರಿಸಿಕೊಂಡರು? ಇದರಿಂದೇನು ಪ್ರಯೋಜನವಾಯಿತು? ಇದರ ಬಗ್ಗೆ ಯಾರ ಕ್ರಮ ತೆಗೆದುಕೊಂಡಿರಿ? ಸಿಎಜಿರವರೂ ಸಹ ಇದನ್ನು ಅನಾವಶ್ಯಕವಾಗಿ ತರಿಸಿದ ಸಾಮಗ್ರಿ ಎಂದು ಹೇಳಿದ್ದಾರೆ. ಇದರ ಬಗ್ಗೆ ದೂರುಗಳನ್ನೂ ಸಹ ನಾನು ಪತ್ರಿಕೆಯಲ್ಲಿ ಓದಿದ್ದು, 4ನೇ ರಾಷ್ಟ್ರೀಯ ಕ್ರೀಡೆಗೆ ರಾಜ್ಯ ಸರ್ಕಾರವು ಸೂಕ್ತ ರೀತಿಯಲ್ಲಿ ಹಣವನ್ನು ಬಿಡುಗಡೆ ಮಾಡದೆ ಬ್ಯಾಂಕ್‌ಗಳಿಂದ ಓವರ್ ಡ್ರಾಫ್ಟ್ ಪಡೆದ ಹಿನ್ನಲೆಯಲ್ಲಿ ಅನಗತ್ಯವಾಗಿ 18.59 ಕೋಟಿ ರೂ. ಬಡ್ಡಿ ಕಟ್ಟಲಾಗಿದೆ ಎಂದು ವರದಿಯಾಗಿತ್ತು. ಅಂದರೆ, ಇದೇ ಹಣವನ್ನು ನಮ್ಮ ರಾಜ್ಯದ ಕ್ರೀಡಾಪಟುಗಳಿಗೆ ಕೊಟ್ಟಿದ್ದರೆ ರಾಜ್ಯದ ಎಲ್ಲಾ ಕ್ರೀಡಾಪಟುಗಳಿಗೂ ಗೌರವವಿರುತ್ತಿತ್ತು. ಅವರ ಮುಖದಲ್ಲಿ ಸಂತೋಷವಿರುತ್ತಿತ್ತು. ಸಂಥೆಟಿಕ್ ಟ್ರಾಕ್ ವಿಚಾರದಲ್ಲಿ ಅವ್ಯವಹಾರವೇನು ನಡೆದಿದೆ, ಸಿಎಜಿ ಇದರ ವಿರುದ್ಧ ವರದಿ ಕೊಟ್ಟಿದ್ದಾರೆ, ಇದರ ಬಗ್ಗೆ ಯಾವ ಕ್ರಮವನ್ನೂ ತೆಗೆದುಕೊಳ್ಳಲಾಗುತ್ತಿಲ್ಲವೇ? ಯಾವ್ಯಾವ ಅಧಿಕಾರಿಗಳು ಇದರಲ್ಲಿದ್ದಾರೆ? ಯಾವ್ಯಾವ ರಾಜಕಾರಣಿಗಳು ಶಾಮೀಲಾಗಿದ್ದರು? ಅವರೆಲ್ಲರೂ ಹೊರ ಬರಬೇಕಾಗುತ್ತದೆ. ಅಂದು ರಾಜ್ಯ ಕ್ರೀಡಾ ಪರಿಷತ್ತಿನ ಅಧ್ಯಕ್ಷನಾಗಿದ್ದೆ. ಆ ಸಂದರ್ಭದಲ್ಲಿ ಕರ್ನಾಟಕಕ್ಕೆ ನಾವು ರಾಷ್ಟ್ರೀಯ ಕ್ರೀಡೆಗಳನ್ನು ತರಲು ಪ್ರಯತ್ನಿಸಿದಾಗ ಈ ಕ್ರೀಡೆಗಳು ನಡೆಯುವ ಸಂದರ್ಭದಲ್ಲಿ ನಾನೇ ಸ್ವತ: ಫೋನ್ ಮಾಡಿ ಒಂದು ಪಾಸ್ ಸಳುಹಿಸಿ ಎಂದರೆ ಒಬ್ಬ ಅಧಿಕಾರಿ ಸಹ ಕಿವಿಗೊಡಲಿಲ್ಲ. ನಮ್ಮನ್ನು ಮೂಲೆಯಲ್ಲಿ ಕೂರಿಸಿ ಅವಮಾನ ಮಾಡಿದರು. ಆದರೆ, ಇಂಥ ಅವ್ಯವಹಾರ ಮಾಡುವುದಕ್ಕೆ ಮುಂದಾಗಿದ್ದಾರೆ. ಇದರ ಬಗ್ಗೆ ಯಾವ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಒಳಾಂಗಣ ಕ್ರೀಡಾಂಗಣಕ್ಕೆ 80 ಕೋಟಿ ರೂ.ಗಳನ್ನು ಖರ್ಚು ಮಾಡುವ ಸಂದರ್ಭದಲ್ಲಿ ಇಂದೂ ಕೂಡ ಮಳೆ ನೀರು ಬಂದರೆ ಇಡೀ ಕ್ರೀಡಾಂಗಳಣದಲ್ಲಿ ನೀರು ತುಂಬುತ್ತದೆ. ಅಲ್ಲಿ ಕ್ರೀಡೆಗಳಿಗೆ ಅವಕಾಶವಿಲ್ಲ. ಈಗಾಗಲೇ ಯಾರ್‍ಯಾರು ಟೆಂಡರ್‌ಗಳಲ್ಲಿ ಭಾಗವಹಿಸಿದ್ದರು, ಕಟ್ಟಡ ಕಟ್ಟಿದ ಕಂಟ್ರಾಕ್ಟರ್‌ಸ್‌ಗಳಿಗೆ ಪೂರಾ ಹಣ ಕೊಟ್ಟಿದ್ದಾರೆ. ಅವರಿಗೆ ಯಾವುದೇ ಕಮಿಟ್‌ಮೆಂಟ್ ಇಲ್ಲ. ಕೆಲವು ಅಧಿಕಾರಿಗಳು, ನಾವೇನೂ ಕಮಿಟ್‌ಮೆಂಟ್ ಮಾಡಿಲ್ಲ, ಅವರಿಗೆ ಇಷ್ಟು ಕೋಟಿ ರೂ.ಗಳಲ್ಲಿ ಕಟ್ಟಿ ಹೊರಟು ಹೋಗಿ ಎಂದಿದ್ದೆವು ಎಂದರು. ಅವರು ಹೊರಟು ಹೋಗಿದ್ದಾರೆ. ಒಳಾಂಗಣ ಕ್ರೀಡಾಂಗಣದ ಮೈನ್‌ಟೆನೆನ್ಸ್‌ಗೆ ಸರ್ಕಾರ ಪ್ರತಿವರ್ಷ 25 ಲಕ್ಷ ರೂ. ಕೊಡುತ್ತಿದೆ. ಇಷ್ಟು ಕೋಟಿ ರೂ. ಖರ್ಚು ಮಾಡಿ ಪೂರ್ಣ ಮಾಡಿದ, ಅವ್ಯವಸ್ಥೆಯಲ್ಲಿರುವ ಕ್ರೀಡಾಂಗಣಕ್ಕೆ 25 ಲಕ್ಷ ರೂ.ಗಳನ್ನು ಪ್ರತಿವರ್ಷ ಕೊಡುವ ಅವಶ್ಯಕತೆ ಏನಿದೆ? ಇಂಥ ಅನೇಕ ಅವ್ಯವಹಾರಗಳು ರಾಷ್ಟ್ರೀಯ ಕ್ರೀಡೆಗಳ ಹೆಸರಲ್ಲಿ ನಡೆದ ಸಂದರ್ಭದಲ್ಲಿ ನಾವು ಕಣ್ಣುಮುಚ್ಚಿ ಕೂರಬೇಕೆ? ಇದರಿಂದ ನಮ್ಮ ಗ್ರಾಮೀಣ ಪ್ರದೇಶದ ಕ್ರೀಡಾಂಗಣಗಳನ್ನು ಪೂರ್ತಿ ಮಾಡುವುದಕ್ಕಾಗುವುದಿಲ್ಲ, ಕ್ರೀಡಾಪಟುಗಳನ್ನು ಮೇಲಕ್ಕೆ ತರಲು ಆಗುವುದಿಲ್ಲ. ಆದರ ಬಗ್ಗೆ ಯಾರ್‍ಯಾರು ಶಾಮೀಲಾಗಿ, ರಾಷ್ಟ್ರೀಯ ಕ್ರೀಡೆಗಳ ಸಂದರ್ಭದಲ್ಲಿ ಅವ್ಯವಹಾರದಲ್ಲಿ

ಒಳಗಾಗಿದ್ದಾರೆ, ಅಂಥ ಅಧಿಕಾರಿಗಳ, ರಾಜಕಾರಣಿಗಳ ಹೆಸರುಗಳನ್ನು ಬಯಲು ಮಾಡಿ. ನಮ್ಮ ಕ್ರೀಡಾಪಟುಗಳು ಬಹಳ ಹಿಂದಿದ್ದಾರೆ. ನಮಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಆಡಲು ಅವಕಾಶ ಸಿಕ್ಕಿದಾಗ, ಒಬ್ಬ ಕ್ರೀಡಾಪಟು ಹೋಗಿ ಪ್ರತಿಯೊಂದು ಸಂಸ್ಥೆಯಲ್ಲಿ ಭಿಕ್ಷೆ ಬೇಡುವ ಪರಿಸ್ಥಿತಿ ಬಂದಿದೆ. ಸರ್ಕಾರ ನೇರವಾಗಿ ಹಣ ಕೊಟ್ಟು ಹೋಗಿ ಕ್ರೀಡೆಗಳಲ್ಲಿ ಭಾಗವಹಿಸಿ ಎಂದು ಹೇಳುವ ಪರಿಸ್ಥಿತಿ ಇಲ್ಲದಿರುವಾಗ ನಮ್ಮ ಕ್ರೀಡಾಪಟುಗಳು ಭಿಕ್ಷೆಬೇಡುವ ಪರಿಸ್ಥಿತಿಯಲ್ಲಿರುವ ಸಂದರ್ಭದಲ್ಲಿ ಇಂದು ಇಂಥ ಅವ್ಯವಹಾರಗಳನ್ನು ನೋಡಿ ನಾವು ಕಣ್ಣುಮುಚ್ಚಿ ಕುಳಿತರೆ, ನಮ್ಮ ಕರ್ನಾಟಕದ ಯುವ ಜನತೆಗೆ, ಕ್ರೀಡಾಪಟುಗಳಿಗೆ ಮಾಡುವ ಅವಮಾನವೆಂದು ಹೇಳುತ್ತೇನೆ. ನನಗೆ ಇಂದು ಮಾತನಾಡಲು ಅವಕಾಶಕೊಟ್ಟು ಮಾನ್ಯ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತು ಮುಗಿಸುತ್ತೇನೆ.

+ ಶ್ರೀಮತಿ ಅನುಸೂಯಮ್ಮಾ ನಟರಾಜ್ (ಚಿಕ್ಕಬಳ್ಳಾಪುರ) :— ಮಾನ್ಯ ಉಪಾಧ್ಯಕ್ಷರೇ, ಚಿಕ್ಕಬಳ್ಳಾಪುರ ಜಿಲ್ಲೆಯಾಗಬೇಕೆಂದು ನಾನು ಪ್ರತಿ ಅಧಿವೇಶನದಲ್ಲಿಯೂ ಚುಕ್ಕೆ ಗುರ್ತಿನ ಪ್ರಶ್ನೆ ಕೇಳುತ್ತಿದ್ದೆ, ಗಮನ ಸೆಳೆವ ಪ್ರಶ್ನೆ ಮೂಲಕ ಕೇಳುತ್ತಿದ್ದರೂ, ಅದು ಬರಲಿಲ್ಲ. ಈ ದಿನ ತಾವು ಅವಕಾಶ ನೀಡಿದ್ದಕ್ಕೆ ವಂದನೆಗಳು. ಏಕೆಂದರೆ, ಈಗಾಗಲೇ ಮಾನ್ಯ ಸಂಪಂಗಿಯವರು ಹೇಳಿದ್ದಾರೆ. ಅದು ಜಿಲ್ಲೆಯಾಗಲೇ ಬೇಕೆಂಬುದಕ್ಕೆ ಸುಮಾರು ಕಾರಣಗಳಿವೆ, ಚಿಕ್ಕಬಳ್ಳಾಪುರ ಉಪವಿಭಾಗಕ್ಕೆ ಚಿಂತಾಮಣಿ, ಶಿಡ್ಲಘಟ್ಟ, ಬಾಗೇಪಲ್ಲಿ, ಗುಡಿಬಂಡೆ, ಗೌರಿಬಿದನೂರು, ಚಿಕ್ಕಬಳ್ಳಾಪುರ ಸೇರಿ 6 ತಾಲ್ಲೂಕುಗಳಾಗುತ್ತವೆ. ಅವುಗಳನ್ನು ಸೇರಿಸಿ ವಿಶ್ವೇಶ್ವರಯ್ಯ ಜಿಲ್ಲೆ ಎಂದು ಮಾಡಿದರೆ ತುಂಬಾ ಅನುಕೂಲವಾಗುತ್ತದೆ. ಲೋಕಸಭಾ ಸದಸ್ಯರಾದ ಮಾನ್ಯ ಜಾಲಪ್ಪನವರು ಎಸಿ, ಡಿವೈಎಸ್‌ಪಿ, ಎಕ್ಸಿಕ್ಯೂಟಿವ್ ಇಂಜನಿಯರ್ಸ್, ಹೊಸದಾಗಿ ಸಾರಿಗೆ ಇಲಾಖೆಯಿಂದ ವಿಶೇಷ ಡಿಸಿ ಬಂದಿದ್ದಾರೆ, ಶಿಕ್ಷಣ ಇಲಾಖೆಯಿಂದ ಡಿಡಿಪಿಐ ಬಂದಿದ್ದಾರೆ; ಮಾನ್ಯ ಸಂಪಂಗಿಯವರ ಕ್ಷೇತ್ರದಲ್ಲಿ ಸುಮಾರು ಗಲಾಟೆಗಳಾಗುತ್ತವೆ. ಕೋಲಾರದಿಂದ ಎಸ್‌ಪಿ ಬರಬೇಕಾದರೆ ಎರಡು ಗಂಟೆ ಬೇಕು. ಅದೇ ನಮ್ಮ ಚಿಕ್ಕಬಳ್ಳಾಪುರದಿಂದ ಅವರು ಬರಲು 45 ನಿಮಿಷ ಸಾಕು. ಅದೂ ಅಲ್ಲದೆ, ನಮ್ಮಲ್ಲಿ ಅನೇಕ ವಿದ್ಯಾ ಸಂಸ್ಥೆಗಳಿವೆ, ಇಂಜನಿಯರಿಂಗ್, ಪಾಲಿಟೆಕ್ನಿಕ್ ಕಾಲೇಜುಗಳು, ಟಿಸಿಹೆಚ್, ಬಿಎಡ್, ಸಿಪಿಎಡ್ ಸಂಸ್ಥೆಗಳಿವೆ. ನಾವು ಸೆಪ್ಟೆಂಬರ್ 15 ರಂದು ವಿಶ್ವೇಶ್ವರಯ್ಯನವರ ಜನ್ಮದಿನವನ್ನು ಆಚರಿಸುತ್ತಿದ್ದೇವೆ. ಇಂತಹ ಪವಿತ್ರವಾದ ನಮ್ಮ ಚಿಕ್ಕಬಳ್ಳಾಪುರವನ್ನು ಜಿಲ್ಲೆಯನ್ನಾಗಿ ಮಾಡಬೇಕೆಂದು ನಾನು ತಮ್ಮೆಲ್ಲರ ಹತ್ತಿರ ವಿನಂತಿಸುತ್ತೇನೆ. ಈಗಾಗಲೇ ಮಾನ್ಯ ಮುಖ್ಯಮಂತ್ರಿಯವರಿಗೆ ಇದರ ಬಗ್ಗೆ ಸೋಮವಾರ ಪತ್ರವನ್ನು ಕೊಟ್ಟಿದ್ದೇನೆ. ದಯವಿಟ್ಟು ಚಿಕ್ಕಬಳ್ಳಾಪುರವನ್ನು ಅತೀ ಬೇಗನೆ ಜಿಲ್ಲೆಯನ್ನಾಗಿ ಮಾಡಿದರೆ ಎಲ್ಲರಿಗೂ ಅನುಕೂಲವಾಗುತ್ತದೆಂದು ಹೇಳುತ್ತಾ ಮಾನ್ಯ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಕಟ್ಟಾಸುಬ್ರಹ್ಮಣ್ಯನಾಯ್ಡು (ಶಿವಾಜಿನಗರ) :— ಮಾನ್ಯ ಉಪಾಧ್ಯಕ್ಷರೆ, ನನಗೆ ಮಾತನಾಡಲು ಅವಕಾಶವನ್ನು ಮಾಡಿಕೊಟ್ಟಿದಕ್ಕಾಗಿ ತಮಗೆ ವಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಇದರಲ್ಲಿ ಮುಖ್ಯವಾಗಿ ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಯ ಬಗ್ಗೆ ಮಾತನಾಡುವುದಾದರೆ, ಕರ್ನಾಟಕ ರಾಜ್ಯದಲ್ಲಿ 4 ಸಾವಿರ ಕೊಳಗೇರಿಗಳು ಇವೆ. ಇದರಲ್ಲಿ ಸುಮಾರು 15 ಲಕ್ಷಕ್ಕಿಂತಲೂ ಹೆಚ್ಚು ಜನರು ವಾಸ ಮಾಡುತ್ತಿರುವುದು ನಮ್ಮೆಲ್ಲರಿಗೂ ಗೊತ್ತಿದೆ. ಆದರಲ್ಲೂ ವಿಶೇಷವಾಗಿ ಇಲ್ಲಿ ಆರಿಸಿ ಬಂದಿರುವಂತಹ ಶಾಸಕರು ಯಾರಿದ್ದಾರೆ ಅವರೆಲ್ಲರೂ ಕೂಡ ಕೊಳಗೇರಿ ಭಾಗಗಳಲ್ಲಿ ಜನತೆಯ ಓಟಿನಿಂದಲೇ ನಾವು ಆರಿಸಿ ಬಂದವರು ಎಂಬುದನ್ನು ಯಾರು ಮರೆಯತಕ್ಕದ್ದಲ್ಲ. ಮಾನ್ಯ ವಸತಿ ಸಚಿವರು ಸದನದಲ್ಲಿ ಕುಳಿತ್ತಿದ್ದಾರೆ, ಈ ವರ್ಷದ ಬಜೆಟ್‌ನಲ್ಲಿ 32 ಕೋಟಿ ರೂಪಾಯಿಗಳನ್ನು 15 ಲಕ್ಷ ಜನರು ವಾಸ ಮಾಡತಕ್ಕಂಥ ಕೊಳಗೇರಿಗಳಿಗೆ ಮೀಸಲಿಟ್ಟಿದ್ದೇವೆ. ಆದರಲ್ಲಿ 17 ಕೋಟಿ ರೂಪಾಯಿಗಳನ್ನು ಹುಡ್ಕೋ ಸಾಲಕ್ಕೆ ನಾವು ಮರುಪಾವತಿಗೆಂದು ಕೊಡುತ್ತಿದ್ದೇವೆ. 3 ಕೋಟಿ ರೂಪಯಿಗಳನ್ನು ಸರ್ಕಾರಿ ಸಂಬಳಕ್ಕಾಗಿ ವೆಚ್ಚ ಮಾಡುತ್ತಿದ್ದೇವೆ, ಇನ್ನು ಉಳಿದಿರುವುದೆಷ್ಟು? ಕೇವಲ 12 ಕೋಟಿ ರೂಪಾಯಿಗಳು ಮಾತ್ರ, ಈ 12 ಕೋಟಿ ರೂಪಾಯಿಗಳಲ್ಲಿ 10 ಕೋಟಿ ರೂಪಾಯಿಗಳನ್ನು ನಾವು ನಿರ್ಮಲಜ್ಯೋತಿ ಯೋಜನೆ ಎಂದು ಹೇಳಿ ಒಂದು ಯೋಜನೆಯನ್ನು ಹಾಕಿಕೊಂಡಿದ್ದೇವೆ. ಇನ್ನು 2 ಕೋಟಿ ರೂಪಾಯಿಗಳನ್ನು ಅವರ ದುರಸ್ಥಿಕಾರ್ಯಕ್ಕಾಗಿ ಮಾಡುತ್ತೇವೆಂದು ಹೇಳಿದರು. ನಾನೂ ಕೂಡ ಸನ್ಮಾನ್ಯ ಗೃಹ ಸಚಿವರಾದ ಶ್ರೀ ಮಲ್ಲಿಕಾರ್ಜುನ ಖರ್ಗೆಯವರ ಜಿಲ್ಲೆಯಾದಂತಹ ಗುಲ್ಬರ್ಗಾ ಜಿಲ್ಲೆಗೆ ಪ್ರವಾಸ ಮಾಡಿದ್ದೇನೆ. ಜೇವರ್ಗಿಯಲ್ಲಿ ಎಲ್ಲಾ ಭಾಗದಲ್ಲಿ ಸ್ಲಮ್‌ಗಳ ಪರಿಸ್ಥಿತಿ ಯಾವ ರೀತಿ ಇದೆಯೆಂದು ಹೇಳಿ ಮಾನ್ಯ ಸಚಿವರಾದ ಖಮರುಲ್ಲಾ ಇಸ್ಲಾಂರವರಿಗೂ ಗೊತ್ತಿದೆ. ಅನೇಕ ಕೊಳಗೇರಿಗಳ ಬಗ್ಗೆ ಎಲ್ಲಾ ಶಾಸಕರಿಗೂ ಸಹ ಗೊತ್ತಿದೆ. ಇಡೀ ರಾಜ್ಯದಲ್ಲಿ 4 ಸಾವಿರ ಕೊಳಗೇರಿಗಳಲ್ಲಿ ಕುಡಿಯುವುದಕ್ಕೆ ನೀರಿಲ್ಲ, ಸರಿಯಾದ ವಸತಿ ಸೌಕರ್ಯಗಳಿಲ್ಲ, ಸರಿಯಾದಂತಹ ರಸ್ತೆಗಳಿಲ್ಲ, ಶೌಚಾಲಯಗಳ ವ್ಯವಸ್ಥೆಯಿಲ್ಲ, ಶಾಲೆಯ ವ್ಯವಸ್ಥೆಯಿಲ್ಲ. ಇದು ಅಲ್ಲಿರುವಂತಹ ಪರಿಸ್ಥಿತಿಯಾಗಿದೆ. ಕೊಳಚೆ ನಿರ್ಮೂಲನಾ ಮಂಡಳಿಯವರು 21 ಜಿಲ್ಲೆಗಳಿಗೆ 750 ಕೋಟಿ ರೂ.ಗಳು ಬೇಕೆಂದು ಹೇಳಿದ್ದಾರೆ. ಬೆಂಗಳೂರು ಮಹಾನಗರದಲ್ಲಿರುವಂತಹ 400 ಕೊಳಗೇರಿಗಳಿಗೆ 500 ಕೋಟಿ ರೂಪಾಯಿಗಳ ಹಣ ಬೇಕೆಂದು ಹೇಳಿ ಈಗಾಗಲೇ ಒಂದು ಯೋಜನೆಯನ್ನು ತಯಾರು ಮಾಡಿದ್ದಾರೆ. ಜಪಾನ್‌ದೇಶದ ನೆರವಿನಿಂದ 1250 ಕೋಟಿ ರೂಪಾಯಿಗಳ ಸಾಲವನ್ನು ತಂದು ಇವರನ್ನು ಅಭಿವೃದ್ಧಿ ಮಾಡುತ್ತೇವೆಂದು ಹೇಳಿದರು. ನಾವು 12000 ಮತ್ತು 20000 ಕೋಟಿ ರೂಪಾಯಿಗಳ ಸಾಲವನ್ನು ತರುತ್ತೇವೆಂದು ಅನೇಕ ಭಾರಿ ಯೋಜನೆಗಳನ್ನು ಘೋಷಣೆಯನ್ನು ಮಾಡಿದೆವು. ಆದರೆ ನಾನು ಸರ್ಕಾರದವರಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಯಾವ ಬಡಜನತೆಯು

ಶೋಷಣೆಗೆ ಒಳಪಟ್ಟಿದ್ದಾರೆ, ಅವರಿಗೆ ಅನೇಕ ವರ್ಷಗಳಿಂದ ಕುಡಿಯುವುದಕ್ಕೆ ನೀರಿಲ್ಲ. 'ಕೊಳಚೆ ನೀರು ಕುಡಿಯಬೇಕೆ, ಬನ್ನಿ ಗುಲ್ಬರ್ಗಾಕ್ಕೆ' ಎಂದು ಪೇಪರಿನಲ್ಲಿ ಹೆಡ್‌ಲೈನ್ಸ್‌ನಲ್ಲಿ ಇವತ್ತು ಪ್ರಕಟವಾಗಿರುವುದನ್ನು ನಾವು ನೋಡುತ್ತಿದ್ದೇವೆ. ಇಂತಹ ಸ್ಥಿತಿಯಲ್ಲಿ ನಾನು ಸರ್ಕಾರದ ಗಮನಸೆಳೆಯುವುದೇನೆಂದರೆ, ತಾವು ಏನೊಂದು ಯೋಜನೆಯನ್ನು ಹಾಕಿಕೊಂಡಿದ್ದೀರಿ, ಖಂಡಿತವಾಗಿಯೂ ಕೂಡ ಆ ಯೋಜನೆಯನ್ನು ಜಾರಿಗೆ ತರಬೇಕು. ಏನು 1250 ಕೋಟಿ ರೂಪಾಯಿಗಳನ್ನು ತಾವು ಈ ಯೋಜನೆಗಾಗಿ ಕೊಡುತ್ತೇವೆಂದು ಹೇಳಿದ್ದೀರಿ, ತಮ್ಮ ಕಾಲಾವಧಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಆ ಕೆಲಸದ ಕಡೆ ಸ್ವಲ್ಪ ಗಮನವನ್ನು ಕೊಟ್ಟು ಖಂಡಿತವಾಗಿಯೂ ಮಾಡಿದ್ದೇ ಆದರೆ ನಿಜವಾಗಿಯ ಕೂಡ ಆ ಬಡ ಜನತೆಯ ಆಶೀರ್ವಾದ ನಮಗೆ ಸಿಗುತ್ತದೆ ಎಂದು ಹೇಳುತ್ತಾ ನಾನು ಸರ್ಕಾರದವರಲ್ಲಿ ಮನವಿಯನ್ನು ಮಾಡಿಕೊಳ್ಳುತ್ತೇನೆ. ಅದೊಂದೆ ಅಲ್ಲ, ಈಗ ತಾವೇನು ಕೊಡುತ್ತಿದ್ದೀರಿ, ಕೇಂದ್ರದಿಂದ ಎನ್‌ಎಸ್‌ಡಿಪಿಯಿಂದ ಹಣ ಬರುತ್ತದೆ, ಆ ಹಣವನ್ನು ನೇರವಾಗಿ ಆ ಕೊಳಚೆ ನಿರ್ಮೂಲನಾ ಮಂಡಳಿಗೆ ಕೊಟ್ಟು, ಅದಕ್ಕೆ ಬೇಕಾದಷ್ಟು ಹಣವನ್ನು ನಾವು ಕೂಡ ಕೊಳಚೆ ನಿರ್ಮೂಲನಾ ಮಂಡಳಿಗೆ ಕೊಟ್ಟರೆ ಅನುಕೂಲವಾಗುತ್ತದೆ. ಈ 32 ಕೋಟಿ ರೂಪಾಯಿಗಳಲ್ಲಿ ಏನೂ ಮಾಡುವುದಕ್ಕಾಗುವುದಿಲ್ಲ. ರಾಜ್ಯ ಸರ್ಕಾರದಿಂದ ಕನಿಷ್ಟ ಪಕ್ಷ ಒಂದು ವರ್ಷಕ್ಕೆ 75 ರಿಂದ 100 ಕೋಟಿ ರೂಪಾಯಗಳ ಹಣವನ್ನು ತಾವು ಬಿಡುಗಡೆ ಮಾಡದೇ ಇದ್ದರೆ ಖಂಡಿತವಾಗಿಯೂ ಏನು ಮಾಡುವುದಕ್ಕೆ ಸಾಧ್ಯವಿಲ್ಲ. ಕೊಳಗೇರಿಗಳ ಪರಿಸ್ಥಿತಿ ಈ ರೀತಿಯಾಗಿದೆ, ರಾಜ್ಯದ ಎಲ್ಲಾ ಭಾಗದಲ್ಲಿಯೂ ಕೂಡ ಎಲ್ಲಾ ವಿಧಾನಸಭಾ ಕ್ಷೇತ್ರಗಳಲ್ಲಿಯೂ ಕೂಡ ಬಹುತೇಕ ಭಾಗಗಳಲ್ಲಿ ಇವತ್ತು ಕೊಳಗೇರಿಗಳಿವೆ. ಇಲ್ಲಿರುವಂತಹ ಎಲ್ಲಾ ಶಾಸಕರ ಕ್ಷೇತ್ರಗಳಲ್ಲಿ ಈ ಸಮಸ್ಯೆ ಇದೆ. ಕರಾವಳಿ ಪ್ರದೇಶಗಳಾದ ಉತ್ತರ ಕನ್ನಡ, ದಕ್ಷಿಣಕನ್ನಡದಲ್ಲಿ ಕೆಲವು ಭಾಗಗಳಲ್ಲಿ ಇಲ್ಲದೇ ಇರಬಹುದು. ಅಲ್ಲಿ ಕೊಳಗೇರಿಗಳ ಸಂಖ್ಯೆ ಕಡಿಮೆ ಇದೆ, ಆದರೆ ಹುಬ್ಬಳ್ಳಿ, ಧಾರವಾಡ, ಗುಲ್ಬರ್ಗಾ, ಬೆಂಗಳೂರು, ಮೈಸೂರು ಈ ಪ್ರಾಂತ್ಯಗಳನ್ನು ನಾವು ಒಂದು ಸಾರಿ ನೋಡಿದಾಗ ನಿಜವಾಗಿಯೂ ಕೂಡ ದು:ಖದ ಸ್ಥಿತಿ ಇದೆ. ಆದಕ್ಕಾಗಿ ನಾನು ಈ ವರ್ಷದ ಆಯವ್ಯಯದ ಒಂದು ಬೇಡಿಕೆಯ ಮೇಲೆ ಚರ್ಚೆ ಮಾಡುವಂತಹ ಸಂದರ್ಭದಲ್ಲಿ ವಿಶೇಷವಾಗಿ ತಮ್ಮಲ್ಲಿ ಬೇಡಿಕೊಳ್ಳುವುದೇನೆಂದರೆ, ಕನಿಷ್ಟ ಬರುವ ವರ್ಷದಿಂದ, ಈ ವರ್ಷ ಮುಗಿಯಿತು, ಈ ವರ್ಷ ಎಷ್ಟು ಅನುದಾನವನ್ನು ಕೊಡಬೇಕು ಅಷ್ಟು ಕೊಡಿ, ಮುಂದಿನ ವರ್ಷದಿಂದಲಾದರೂ ಕೂಡ ಕನಿಷ್ಟ 100 ಕೋಟಿ ರೂಪಾಯಿಗಳನ್ನು ಈ ಕೊಳಚೆ ನಿರ್ಮೂಲನಾ ಮಂಡಳಿಗೆ ಅಲ್ಲಿರುವಂತಹ ಬಡಜನರಿಗೆ ಉಪಯೋಗವಾಗುವ ರೀತಿಯಲ್ಲಿ ತಾವು ಹಣವನ್ನು ಮೀಸಲಿಡಬೇಕೆಂದು ಹೇಳಿ ಸರ್ಕಾರದವರಲ್ಲಿ ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತಿದ್ದೇನೆ. ಇನ್ನು ಉಳಿದಿರುವುದೇನೆಂದರೆ, ಕರ್ನಾಟಕ ಗೃಹಮಂಡಳಿ ವಿಚಾರದ ಬಗ್ಗೆ ಹೇಳುವುದಾದರೆ,

ಮಾನ್ಯ ವಸತಿ ಸಚಿವರು ಸದನದಲ್ಲಿದ್ದಾರೆ, ನಾವು ಪ್ರತಿನಿತ್ಯವೂ ನೋಡುತ್ತಿದ್ದೇವೆ, ಇವತ್ತು, ಯಲಹಂಕದಲ್ಲಿ ಮನೆಗಳನ್ನು ನಿರ್ಮಾಣಮಾಡಿದ್ದಾರೆ. ಕೆಂಗೇರಿಯಲ್ಲಿಯೂ ಮೈಸೂರಿನಲ್ಲಿಯೂ ಸಹ ಮನೆಗಳನ್ನು ನಿರ್ಮಾಣ ಮಾಡಿದ್ದಾರೆ. ಆದರೆ ಆ ಮನೆಗಳನ್ನು ಕೊಂಡುಕೊಳ್ಳುವುದಕ್ಕೆ ಜನರೇ ಇಲ್ಲ. ಅಲ್ಲಿ ಕಟ್ಟಿರುವಂತಹ ಮನೆಗಳು ಕಳಪೆ ಕಾಮಗಾರಿಯಿಂದ ಕೂಡಿದೆ. ಈ ಗೃಹ ಮಂಡಳಿಯಲ್ಲಿ ಅನೇಕ ಅವ್ಯವಹಾರಗಳು ನಡೆದಿದೆ ಎಂದು ಅನೇಕ ಬಾರಿ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದೆ. ಇದು ಪ್ರತಿನಿತ್ಯ ಎಲ್ಲರಿಗೂ ಗೊತ್ತಿರುವಂತಹ ಸಂಗತಿಯಾಗಿದೆ. ಆ ಗೃಹಮಂಡಳಿಯ ಕಛೇರಿಯನ್ನು ಎರಡು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಅದನ್ನು ದುರಸ್ಥಿ ಮಾಡಿರುವಂತಹ ಕೆಲಸವಾಗಿದೆ, ಅದು ಏತಕ್ಕಾಗಿ ಬೇಕಿತ್ತೆಂದು ಅರ್ಥವಾಗಲಿಲ್ಲ. ಗೃಹಮಂಡಳಿಯ ಪರಿಸ್ಥಿತಿಯನ್ನು ನೋಡಿದಾಗ ನಿಜವಾಗಿಯೂ ಗೊತ್ತಾಗುತ್ತದೆ. ಮಡಿಕೇರಿಯಲ್ಲಿ ಒಂದು ಮನೆಯನ್ನು ಕಟ್ಟಿದ್ದಾರೆ, ಆ ಮನೆಯೂ 10 ವರ್ಷಗಳಾದರೂ ಕೂಡ ವಿತರಣೆಯಾಗಲಿಲ್ಲ. ಅದು 12 ಲಕ್ಷ ರೂಪಾಯಿಗಳು ಬೆಲೆಬಾಳುವ ಮನೆಯಾಗಿದ್ದು, ಸರ್ಕಾರದ ಅಧಿಕಾರಿಗಳು ಯಾವ ರೀತಿಯಾಗಿ ಸರ್ಕಾರದ ಹಣವನ್ನು ದುರುಪಯೋಗ ಮಾಡುತ್ತಾರೆಂಬ ಬಗ್ಗೆ ನಾವು ಅರ್ಥಮಾಡಿಕೊಳ್ಳಬೇಕಾದ ಸಂಗತಿಯಾಗಿರುತ್ತದೆ. ಇವತ್ತು ಕಟ್ಟಿರುವ ಮನೆಗಳಲ್ಲಿ ಕೆಲವು ಕಡೆಗಳಲ್ಲಿ ಬಾಗಿಲುಗಳಿಲ್ಲ, ಉದಾಹರಣೆಗೆ ಚನ್ನಪಟ್ಟಣದಲ್ಲಿರುವ ಮನೆಗಳನ್ನು ಯಾರು ಕೊಂಡುಕೊಳ್ಳುವುದಕ್ಕೆ ಬಂದಿಲ್ಲ, ಅಲ್ಲಿ ಹುಲ್ಲು ಬೆಳೆದಿದೆ, ಅದು ಹಾವುಗಳ ತಾಣವಾಗಿದೆ, ಇಂತಹ ಪರಿಸ್ಥಿತಿಯಿದ್ದಾಗ, ಇದಕ್ಕೆ ಹೊಣೆಗಾರರು ಯಾರು? 100ಕ್ಕೆ 75ರಷ್ಟು ಹಣವನ್ನು ನಾವು ಏನು ನಾನ್ ಪ್ಲಾನ್ ಎಕ್ಸ್‌ಪೆಂಡಿಚರ್ ಮಾಡುತ್ತೇವೆ, ಆದರೂ ಕೂಡ ನಿಗದಿತ ಸಮಯದಲ್ಲಿ ಈ ಕೆಲಸಗಳನ್ನು ಪೂರೈಸುವುದಿಲ್ಲ. ಯಾರೇ ಗುತ್ತಿಗೆದಾರರಿಬಹುದು, ಇಲ್ಲಿ ಎಷ್ಟು ಅವ್ಯವಹಾರ ನಡೆಯುತ್ತದೆಂದರೆ, ಇವತ್ತು ಗುಲ್ಬರ್ಗಾ ನಗರದಲ್ಲಿ ಏನಾಗಿದೆ, ಮೈನ್ ರಸ್ತೆಯಲ್ಲಿ ಒಬ್ಬ ವಕೀಲರಿಗೆ 22 ಎಕರೆ ಜಮೀನನ್ನು ನಾವು ಡೀನೋಟಿಫೈ ಮಾಡಿಕೊಟ್ಟಿದ್ದೇವೆಂದು ಪತ್ರಿಕೆಗಳಲ್ಲಿ ಬಂದಿದೆ. ಇದರಲ್ಲಿ ನಿಜ ಎಷ್ಟು ಎಂಬುದು ಗೊತ್ತಾಗಲಿಲ್ಲ, 1988ರಲ್ಲಿ ಅಕ್ವಿಜಿಷನ್ ಮಾಡಿದಂತಹ ಲ್ಯಾಂಡ್ ಇದಕ್ಕಾಗಿ ಒಂದ ಯಂತ್ರಾಂಗ, ಒಂದು ಮಂತ್ರಾಂಗ ಎಲ್ಲವೂ ಇದ್ದರೂ ಕೂಡ 12 ವರ್ಷಗಳಿಂದಲೂ ಹಣವನ್ನು ಬ್ಯಾಂಕಿನಲ್ಲಿಟ್ಟು ಆ ಜಮೀನನ್ನು ನಾವು ತೆಗೆದುಕೊಳ್ಳುವುದಕ್ಕೆ ಆಗಲಿಲ್ಲ, ನ್ಯಾಯಾಲಯಕ್ಕೆ ನಮ್ಮ ವಕೀಲರುಗಳು ಹೋಗಲಿಲ್ಲ ಮತ್ತು ನಮ್ಮ ಪರವಾಗಿ ವಾದವನ್ನು ಮಾಡಲಿಲ್ಲ. ಕೊನೆಗೆ ಎಕ್ಸ್‌ಪಾರ್ಟೆ ಆರ್ಡರ್ ಆಗಿ ಆ ಜಮೀನು ಖಾಸಗಿಯವರಿಗೆ ಹೋಯಿತು. ಈ ರೀತಿಯಾಗಿ ನಾವು ಮಾಡುವುದೇ ಆದರೆ ಆ ಇಲಾಖೆ ಇರುವುದು ಏತಕ್ಕಾಗಿ? ಇವತ್ತು ಆ ಇಲಾಖೆಯ ಬಗ್ಗೆ ಪೂರ್ಣ ವಿಶ್ವಾಸ ಹೊರಟು ಹೋಗಿದೆ. ಕರ್ನಾಟಕ ಗೃಹ ಮಂಡಳಿಯ ಮೇಲೆ ಜನತೆಗೆ ವಿಶ್ವಾಸ ಹೋಗಿದೆ. ಇವತ್ತು ಚಂದಾಪುರ ರಸ್ತೆಯಲ್ಲಿ ಕಳೆದ 5 ವರ್ಷಗಳಿಂದ ಒಂದು ಯೋಜನೆಯು

275 ಎಕರೆಯಲ್ಲಿ ನಾವು ಮನೆಗಳನ್ನು ನಿರ್ಮಾಣ ಮಾಡುವ ಕೆಲಸವನ್ನು ಮಾಡುತ್ತೇವೆ ಎಂದು ಹೇಳಿದರು. ಅಲ್ಲಿ ಐದು ವರ್ಷಗಳಾದರೂ ಕೂಡ ಇಲ್ಲಿಯವರೆವಿಗೂ ಕಾರ್ಯಗತವಾಗಿಲ್ಲ, ಆದರೆ ಈ ಗೃಹಮಂಡಳಿಯ ಬಗ್ಗೆ ನಾವು ವಿಷಯ ಸಮಿತಿಯಲ್ಲಿ ಕೂಡ ಚರ್ಚೆ ಮಾಡಿದ್ದೇವೆ. ಅಲ್ಲಿಯೂ ಕೂಡ ಆ ಗೃಹ ಮಂಡಳಿಯನ್ನು ಮುಚ್ಚುವುದು ಒಳ್ಳೆಯದೆಂದು ಹೇಳಿದರು. ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ, ಬೆಂಗಳೂರ ಅಭಿವೃದ್ಧಿ ಪ್ರಾಧಿಕಾರವಿದೆ, ಅದನ್ನು ನೋಡಿದಾಗ ನಿಜವಾಗಿಯೂ ಕೂಡ ಸರ್ಕಾರಕ್ಕೆ ಮತ್ತು ಸಾರ್ವಜನಿಕರಿಗೆ ಒಳ್ಳೆಯ ಹೆಸರು ತರುವಂತಹ ಕೆಲಸವನ್ನು ಮಾಡುತ್ತಿದ್ದಾರೆ. ಆ ರೀತಿಯಾಗಿ ಏಕೆ ಈ ಗೃಹಮಂಡಳಿಯವರು ಕೆಲಸವನ್ನು ಮಾಡುವುದಕ್ಕೆ ಆಗಲಿಲ್ಲ. ಇದರಲ್ಲಿ ಯಾರ ಲೋಪವಿದೆ, ಮಂತ್ರಿಗಳ ಲೋಪವೇ, ಅಲ್ಲಿರುವ ಆಯುಕ್ತರ ಲೋಪವೇ ಅಥವಾ ಸಿಬ್ಬಂದಿ ವರ್ಗದವರ ಲೋಪವೇ ಇದರ ಬಗ್ಗೆ ನಾವು ಯೋಚನೆ ಮಾಡಬೇಕಾಗಿರುವಂತಹ ಸಂಗತಿಯಾಗಿದೆ. ನಾವು ಅನೇಕ ಭಾರಿ ಅನೇಕ ವಿಚಾರಗಳನ್ನು ವಿಷಯ ಸಮಿತಿಯಲ್ಲಿ ಚರ್ಚೆ ಮಾಡಿದಾಗ ಒಂದು ತೀರ್ಮಾನಕ್ಕೆ ಬಂದೆವು, ಈ ಗೃಹಮಂಡಳಿಯನ್ನು ಮುಚ್ಚುವುದು ಒಳ್ಳೆಯದು. ಒಂದು ಸಂದರ್ಭದಲ್ಲಿತ್ತು ಹಿಂದೆ ಮಾಜಿ ಮುಖ್ಯಮಂತ್ರಿಗಳಾದ ದಿವಂಗತ ಶ್ರೀ ವೀರೇಂದ್ರ ಪಾಟೀಲ್‌ರ ಕಾಲದಲ್ಲಿ ಆ ಸಮಯವನ್ನು ನಾವೆಲ್ಲರೂ ಕೂಡ ನೆನಪಿಸಿಕೊಳ್ಳಬೇಕು. ಅಲ್ಲಿ ಯಾರೂ ಸರಿಯಾಗಿ ಕೆಲಸ ಮಾಡುತ್ತಿಲ್ಲವೆಂದು ಈ ಬಿಡಿಎಯನ್ನು ಮುಚ್ಚಿಹಾಕಬೇಕೆಂದು ಅವತ್ತು ಯೋಚನೆಯನ್ನು ಮಾಡಿದ್ದರು; ಇದಕ್ಕೆ ಕಾರಣ ಯಾರು ಎಂದು ನಾವು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಅಲ್ಲಿರುವ ಅಧಿಕಾರಿ ಯಂತ್ರಾಂಗ ಸರಿಯಾಗಿ ಕೆಲಸ ಮಾಡದೆ ಇದ್ದರೆ ಈ ದುಸ್ಥಿತಿಯಾಗಿದೆ. ಇದಕ್ಕೆ ಯಾರು ಹೊಣೆಗಾರರು ಎಂದು ಯೋಚನೆ ಮಾಡುವಂತಹ ಪರಿಸ್ಥಿತಿಯಾಗಿದೆ. ಈ ರೀತಿಯಾಗಿ ಆಗುವುದೇ ಆದರೆ 100ಕ್ಕೆ 75ರಷ್ಟು ನಾನ್ ಪ್ಲಾನ್ ಎಕ್ಸ್‌ಪೆಂಡಿಚರ್, ಅವರ ಸ್ಯಾಲರಿ ಮತ್ತು ಇತರೆ ಎಕ್ಸ್‌ಪೆಂಡಿಚರ್‌ನ್ನು ನಾವು ಮಾಡುತ್ತೇವೆ. 25 ರಷ್ಟು ಹಣವನ್ನು ನಾವು ಅಭಿವೃದ್ಧಿ ಕೆಲಸಗಳಿಗಾಗಿ ವಿನಿಯೋಗ ಮಾಡುತ್ತೇವೆ. ಆ ಹಣ 2 ರಿಂದ 4 ವರ್ಷವಾಗುತ್ತದೋ, ಆ ಕೆಲಸಗಳನ್ನು ನಾವು ಮಾಡುವುದಿಲ್ಲವೆಂದರೆ, ಯಾವುದಕ್ಕೋಸ್ಕರ ನಮ್ಮ ಯಂತ್ರಾಂಗ, ಯಾರಿಗೆ ನಾವು ಅಕೌಂಟೆಬಿಲಿಟಿಯನ್ನು ಕೊಡಬೇಕು. ಅಲ್ಲಿ ಯಾರ ಮುಲಾಜುಗಳು ಇದರ ಬಗ್ಗೆ ಅರ್ಥವೆ ಆಗುತ್ತಿಲ್ಲ. ಯಾರನ್ನು ನಾವು ಕೇಳಬೇಕೋ ಬೇಡವೋ, ನಮಗೂ ಕೂಡ ಮುಲಾಜುಗಳು. ಎಂಎಲ್‌ಎಗೆ ಮತ್ತು ಮಂತ್ರಿಗಳಿಗೂ ಕೂಡ ಮುಲಾಜುಗಳು, ಅಧಿಕಾರಿಗಳ ಹತ್ತಿರ ಏನಾದರೂ ಕೆಲಸಗಳಾಗಬೇಕಾದರೆ, ಜೋರಾಗಿ ನಾವು ಮಾತನಾಡುವುದಕ್ಕೆ ಆಗುವುದಿಲ್ಲವೆಂದು ಹೇಳಿ ಅವರ ಹತ್ತಿರ ನಮ್ಮ ಮುಲಾಜು, ಆ ಅಧಿಕಾರಿಗಳಿಗೆ ನಮ್ಮ ಮುಲಾಜು ಅವರಿಗೆ ಇದೆ. ಪರಸ್ಪರ ಮುಲಾಜುಗಳ ಮೇಲೆ ಕೆಲಸವು ನಡೆಯುತ್ತಿದೆ. ಹೀಗೆಯೇ ಆಗುವುದಾದರೆ, ಗೃಹಮಂಡಳಿಯ ಪರಿಸ್ಥಿತಿ ಇದು,

ಕೊಳಚೆ ನಿರ್ಮೂಲನಾ ಮಂಡಳಿಯಲ್ಲಿ ಕೆಲವು ಮನೆಗಳನ್ನು ಕಟ್ಟಿದ್ದಾರೆ, ನಾನು ಮಂಡ್ಯ ಜಿಲ್ಲೆಗೆ ಹೋಗಿದ್ದೆ, ಅಲ್ಲಿ ಮನೆಗಳು ಕುಸಿದು ಬೀಳುತ್ತಿದೆ, ಆ ರೂಫ್‌ಗಳು ಇವತ್ತು ಸಿಂಕಾಗಿದೆ. ಅದು ಸಿಂಕಾಗಿ ಆ ಮನೆಗಳಲ್ಲಿ ವಾಸವನ್ನು ಮಾಡುತ್ತಿಲ್ಲ. ಅಲ್ಲಿ 200 ಮನೆಗಳನ್ನು ಕಟ್ಟಿದ್ದಾರೆ, ಈಗ ಮಾನ್ಯ ಶಾಸಕರಾದ ಶ್ರೀ ಎಂ.ಎಸ್. ಆತ್ಮಾನಂದರವರು ಬಂದ ಮೇಲೆ ಅದನ್ನು ರಿಪೇರಿ ಮಾಡಿದ್ದೇವೆಂದು ಹೇಳಿದರು. ನಾನು ಅಲ್ಲಿಗೆ ಹೋಗಿ ಬಂದು ಒಂದೂವರೆ ವರ್ಷವಾಯಿತು. ಕೊಳಚೆ ನಿರ್ಮೂಲನ ಮಂಡಳಿಯವರು ಕಟ್ಟಿರುವಂತಹ ಮನೆಗಳು ಆ ರೀತಿ, ಹೌಸಿಂಗ್ ಬೋರ್ಡ್‌ನವರು ಕಟ್ಟಿರುವ ಮನೆಗಳು ಹೀಗೆ. ಇದಕ್ಕೆ ಯಾರು ಹೊಣೆಗಾರರು ಯಾರು ಜವಾಬ್ದಾರರೆಂದು ಆತ್ಮ ವಿಮರ್ಶೆ ಮಾಡಿಕೊಳ್ಳಬೇಕಾದ ಸಂಗತಿ ಇದು. ಕಾರಣ ಏನೆಂದರೆ, ಬೇಡಿಕೆಗಳ ಮೇಲೆ ನಾವು ಚರ್ಚೆ ಮಾಡುತ್ತೇವೆ, ಹಣವನ್ನು ಮಂಜೂರು ಮಾಡುತ್ತೇವೆ. ಈ ವರ್ಷ ಆಗಬೇಕಾಗಿರುವ ಕೆಲಸವನ್ನು ಈ ವರ್ಷ ಮಾಡುವುದಿಲ್ಲ. ಕೆಲಸವನ್ನು ಡಿಸೆಂಬರ್ ಜನವರಿಯಲ್ಲಿ ಪ್ರಾರಂಭ ಮಾಡುತ್ತಾರೆ. ಮಾರ್ಚಿಯೊಳಗೆ ಕೆಲಸ ಮುಗಿಸುವುದಿಲ್ಲ ಸ್ಪಿಲ್‌ಓವರ್ ವರ್ಕ್ ಎನ್ನುತ್ತಾರೆ. ಈ ವರ್ಷದಲ್ಲಿದ್ದ ರೇಟ್ ಈ ವರ್ಷವೇ ಇರುವುದಿಲ್ಲ. ಮುಂದಿನ ವರ್ಷಕ್ಕೆ ಎಲ್ಲವೂ ಕೂಡ ಒನ್ ಟು ಡಬ್ಬಲ್ ರೇಟಾಗುತ್ತದೆ. ಇದಕ್ಕೆ ಹೊಣೆಗಾರರು ಯಾರು? ಯಾರ ತಪ್ಪಿನಿಂದ ಯಾರಿಗೆ ಶಿಕ್ಷೆ? ಜನರ ಮೇಲೆ ತಪ್ಪನ್ನು ಹಾಕುತ್ತಿದ್ದೇವೆ. ಅಧಿಕಾರಿಗಳು ಮತ್ತು ನಾವು ನಾವಿಬ್ಬರೂ ಸೇರಿಕೊಂಡು ಯಾರ ಮೇಲೆ ನಾವು ತಪ್ಪನ್ನು ಹಾಕುತ್ತಿದ್ದೇವೆ ಎನ್ನುವುದು ನಾವು ಯೋಚನೆ ಮಾಡುವಂತಹ ಸಂಗತಿಯಾಗಿದೆ.

ಇನ್ನೊಂದು ರಾಜೀವಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ ಇದನ್ನು ನಾವು ಇತ್ತೀಚೆಗೆ ಪ್ರಾರಂಭ ಮಾಡಿದ್ದೇವೆ. ದಿನಾಂಕ: 20-4-2000ದಂದು ನಾವು ಪ್ರಾರಂಭ ಮಾಡಿದ್ದೇವೆ. ಅದರಲ್ಲಿ ಮಾನ್ಯ ಮುಖ್ಯಮಂತ್ರಿಗಳು ವಸತಿ ಸಚಿವರು ಒಳ್ಳೆಯ ಉದ್ದೇಶವನ್ನಿಟ್ಟುಕೊಂಡು ಬಂದು ವರ್ಷದ ಅವಧಿಯೊಳಗಾಗಿ ಎರಡು ಲಕ್ಷ ಮನೆಗಳನ್ನು ನಿರ್ಮಾಣ ಮಾಡುತ್ತೇವೆಂದು ಅನೇಕ ಬಾರಿ ಹೇಳಿದರು. ಆ ಎರಡು ಲಕ್ಷ ಮನೆಗಳಿಗೆ ಎಷ್ಟು ಹಣ ಬೇಕೋ ಆ ಹಣವನ್ನು ಬಿಡುಗಡೆ ಮಾಡಿದ್ದೇವೆಂದು ಹೇಳಿ ಆರ್ಥಿಕ ಇಲಾಖೆಯ ಜಂಟಿ ಕಾರ್ಯದರ್ಶಿಯವರು ಹೇಳಿದ್ದಾರೆ. ಆದರೆ ಈ ಎರಡು ಲಕ್ಷ ಮನೆಗಳನ್ನು ನಿರ್ಮಾಣ ಮಾಡುವಂತಹ ಕೆಲಸದಲ್ಲಿ ಕೇವಲ ನಾವು 60 ಸಾವಿರ ಮನೆಗಳನ್ನು ನಿರ್ಮಾಣ ಮಾಡಿದರೆ ಹೇಗೆ? ನೀವು ಅಧಿಕಾರಕ್ಕೆ ಬಂದು 20 ತಿಂಗಳಾಗಿದೆ. ನೀವು ಘೋಷಣೆ ಮಾಡಿ 16 ತಿಂಗಳು ಆಗಿದೆ. ಆದರೆ ಇಲ್ಲಿಯ ತನಕ 60 ಸಾವಿರ ಮನೆಗಳನ್ನು ಕಟ್ಟಿ ಉಳಿಕೆ ಇರುವಂತಹ 1 ಲಕ್ಷದ 40 ಸಾವಿರ ಮನೆಗಳನ್ನು ಕಟ್ಟದಿರುವುದಕ್ಕೆ ಕಾರಣವೇನು? ಇದನ್ನು ನಾವು ಕೇಳಬೇಕಾಗುತ್ತದೆ. ಇದನ್ನು ನೀವೇ ಘೋಷಣೆ ಮಾಡಿರತಕ್ಕದ್ದು ಆದಕ್ಕೆ ಹಣವನ್ನು ಬಿಡುಗಡೆ ಮಾಡಲಾಗಿದೆ. ಆದರೆ ಆಶ್ರಯ ಮತ್ತು ಅಂಬೇಡ್ಕರ್ ಯೋಜನೆಗಳ ಅಡಿಯಲ್ಲಿ ಒಂದೂವರೆ ಲಕ್ಷ ಮನೆಗಳನ್ನು

ಗ್ರಾಮೀಣ ಪ್ರದೇಶಗಳಲ್ಲಿ 50 ಸಾವಿರ ಮನೆಗಳನ್ನು ಪಟ್ಟಣ ಪ್ರದೇಶಗಳಲ್ಲಿ ಮಾಡುತ್ತೇವೆಂದು ಏನು ಹೇಳಿದ್ದೀರಿ, ದುರ್ದೈವ ಅಂದುಕೊಂಡಹಾಗೆ ಗುರಿಯನ್ನು ಸಾಧನೆ ಮಾಡಲಿಕ್ಕೆ ಸಾಧ್ಯವಾಗುತ್ತಿಲ್ಲ. ಹಣ ಇದೆ ಆದರೆ ಕೆಲಸ ಮಾಡುವುದಿಲ್ಲ. ಮಂತ್ರಿಗಳಿಗೆ ಇದರ ಮೇಲೆ ಗಮನ ಇಲ್ಲವಾ? ಮಾನ್ಯ ವಸತಿ ಸಚಿವರಿಗೆ ಇದರ ಮೇಲೆ ಕಾಳಜಿ ಇಲ್ಲವಾ? ಮಂತ್ರಿಗಳ ತಪ್ಪೆಂದು ನಾನು ಹೇಳುವುದಿಲ್ಲ. ಅಧಿಕಾರಿಗಳನ್ನು ನೀವು ಏಕೆ ಕೇಳುವುದಿಲ್ಲ. ತಾವು ಸ್ಥಳಕ್ಕೆ ಧಾವಿಸಿ ಏಕೆ ಹೋಗುವುದಿಲ್ಲ? ಏಕೆ ಈ ಕೆಲಸವನ್ನು ಮಾಡುವುದಿಲ್ಲ? ಯಾರು ತಮ್ಮನ್ನು ತಡೆಹಿಡಿದಿದ್ದಾರೆ? ಇದನ್ನು ತಾವು ಯೋಚನೆ ಮಾಡಬೇಕು. ನಾವೇ ಹೇಳಿದ ಮಾತು, 2 ಲಕ್ಷ ಮನೆಗಳನ್ನು ಕಟ್ಟುತ್ತೇವೆಂದು ನಾವೇ ಹೇಳಿಲ್ಲವೇ? ಮಂತ್ರಿಗಳು ಹೇಳಿದ್ದಾರೆ. ಆದರೆ ಇಲ್ಲಿಯ ತನಕ ಆ ಮನೆಗಳನ್ನು ಕಟ್ಟಲಿಕ್ಕೆ ವಿಫಲರಾಗುವುದಕ್ಕೆ ಕಾರಣವೇನು? ಯಾವಾಗ ಕಟ್ಟುತ್ತೀರಿ? ಇನ್ನು ಮೂರು ವರ್ಷದಲ್ಲಿ ಕಟ್ಟುತ್ತೀರಿ. ಮೂರು ವರ್ಷದಲ್ಲಿ ಬೆಲೆ ಎಷ್ಟು ಹೆಚ್ಚಾಗುತ್ತದೆ? ನಿಗದಿತ ಬೆಲೆಯಲ್ಲಿ ಮನೆಗಳನ್ನು ಕಂಪ್ಲೀಟ್ ಮಾಡಿಕೊಡಲಿಕ್ಕೆ ಆಗುತ್ತದೆಯೇ? ಇಲ್ಲ ಅದೇ ಬೆಲೆಗೆ ಕಟ್ಟಬೇಕಾದರೆ ಕಳಪೆ ಕಾಮಗಾರಿಯಾಗುತ್ತದೆ. ಇದಕ್ಕೆ ಜವಾಬ್ದಾರರು ಯಾರು ಸ್ವಾಮಿ? ಇದಕ್ಕೆ ಹೊಣೆಗಾರರು ಯಾರು? ಅಂದರೆ ಎಲ್ಲಿಯೋ ಒಂದು ಜಾಗದಲ್ಲಿ ನಾವು ಅಧಿಕಾರಿಗಳನ್ನು ಕೇಳಿ ಕೆಲಸ ತೆಗೆಯುವುದರಲ್ಲಿ ವಿಫಲರಾಗಿದ್ದೇವೆನ್ನುವ ಮಾತನ್ನು ನಾವು ಒಪ್ಪಲೇ ಬೇಕಾಗುತ್ತದೆ. ನಾನು ಇದು ಒಂದೇ ಇಲಾಖೆಗೆ ಸಂಬಂಧಪಟ್ಟಹಾಗೆ ಹೇಳುತ್ತಿಲ್ಲ. ಈ ರೀತಿ ರಾಜೀವಗಾಂಧಿ ಗ್ರಾಮೀಣ ವಸತಿ ಯೋಜನೆಯಲ್ಲಿ ಏನು ಕೆಲಸಗಳನ್ನು ತೆಗೆದುಕೊಂಡಿದ್ದಾರೆ ಏನು ಘೋಷಣೆಗಳನ್ನು ಮಾಡಿದ್ದಾರೆ ಆ ಕೆಲಸವನ್ನು ನಿಗದಿತ ಸಮಯದಲ್ಲಿ ತಾವು ಮಾಡಬೇಕು. ಮಾನ್ಯ ಮುಖ್ಯಮಂತ್ರಿಗಳ ಏನು ಒಳ್ಳೆಯ ಯೋಜನೆಯನ್ನು ಹಾಕಿಕೊಂಡಿದದ್ದಾರೆ ನಿಗದಿತ ಸಮಯದಲ್ಲಿ ಕೆಲಸವಾಗುವ ದಿಸೆಯಲ್ಲಿ ಆ ಕಡೆಗೆ ಸಂಬಂಧಪಟ್ಟ ಮಂತ್ರಿಗಳಿಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತಿದ್ದೇನೆ.

ಇನ್ನು ಪೌರಾಡಳಿತ ಇಲಾಖೆಗೆ ಸಂಬಂಧಪಟ್ಟಹಾಗೆ ಹೇಳುವುದಾದರೆ, ಇವತ್ತು ಕೇಂದ್ರ ಸರ್ಕಾರ ಐದು ಅಂಶಗಳ ಕಾರ್ಯಕ್ರಮವನ್ನು ನಗರಗಳ ಅಭಿವೃದ್ಧಿಗಾಗಿ ರಾಜ್ಯ ಸರ್ಕಾರಗಳಿಗೆ ಕೊಟ್ಟಿದೆ. ಅದಕ್ಕಾಗಿ ಕೋಟ್ಯಾಂತರ ರೂಪಾಯಿಗಳನ್ನು ಕೇಂದ್ರ ಸರ್ಕಾರ ಪ್ರತಿ ವರ್ಷ ಬಿಡುಗಡೆ ಮಾಡುತ್ತಿದೆ. ಆ ಐದು ಅಂಶಗಳು ಏನೆಂದರೆ ಸಮಗ್ರ ಸಣ್ಣ ಮತ್ತು ಪಟ್ಟಣಗಳ ಅಭಿವೃದ್ಧಿ ಯೋಜನೆ. ಸ್ವರ್ಣ ಜಯಂತಿ ಶಹರ ರೋಜ್‌ಗಾರ್ ಯೋಜನೆ. ಹತ್ತನೆಯ ಹಣಕಾಸಿನ ಯೋಜನೆ, ಮೆಗಾಸಿಟಿ ಯೋಜನೆ ಮತ್ತು ತ್ವರಿತ ನೀರು ಸರಬರಾಜು ಯೋಜನೆ. ಈ ರೀತಿಯ ಐದು ಅಂಶಗಳ ಯೋಜನೆಗಳ ಕಾರ್ಯಕ್ರಮವನ್ನು ರಾಜ್ಯ ಸರ್ಕಾರಕ್ಕೆ ಕೇಂದ್ರ ಸರ್ಕಾರದವರು ಕೊಟ್ಟಿದ್ದಾರೆ. ಇದರಲ್ಲಿ ಸಮಗ್ರ ಸಣ್ಣ ಮತ್ತು ಪಟ್ಟಣ ಅಭಿವೃದ್ಧಿ ಯೋಜನೆಗಾಗಿ 1999-2000ದಲ್ಲಿ 7 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದರೆ, ನಮ್ಮ ಸರ್ಕಾರ ಖರ್ಚು ಮಾಡಿರುವುದು ಕೇವಲ 4 ಕೋಟಿ 83 ಲಕ್ಷ ರೂಪಾಯಿಗಳನ್ನು ಮಾತ್ರ. ಅವರು ಹಣ ಕೊಡದಿದ್ದರೆ

ಕೊಡಲಿಲ್ಲವೆಂದು ಹೇಳುತ್ತೇವೆ. ಹಣ ಕೊಟ್ಟ ಮೇಲೆ ಈ ತರಹ ಮಾಡುತ್ತೇವೆ. ನಾವು ಸರಿಯಾದ ಸಮಯಕ್ಕೆ ಕೆಲಸ ಮಾಡುವುದಿಲ್ಲ, ಇದನ್ನು ಕೇಳುವವರು ಯಾರು? ಅದೇ ರೀತಿಯಲ್ಲಿ ಶಹರಿ ರೋಜ್‌ಗಾರ್ ಯೋಜನೆಯಡಿಯಲ್ಲಿ 199899, 1999-2000ದಲ್ಲಿ 68 ಕೋಟಿ 42 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದರೆ ಅದರಲ್ಲಿ 32 ಕೋಟಿ 72 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಇನ್ನು 35 ಕೋಟಿ 70 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿಲ್ಲ. ಯೋಜನೆಗಳು ಕೇಂದ್ರಸರ್ಕಾರದ್ದು. ನಾವು ಅವುಗಳನ್ನು ಕಾರ್ಯಗತ ಮಾಡಬೇಕು. ನಿಗದಿತ ಸಮಯದಲ್ಲಿ ಪೂರ್ತಿ ಮಾಡಬೇಕು. ಆದರೆ ಅದನ್ನು ನಾವು ಮಾಡಲಿಲ್ಲ. ಅದೇರೀತಿ ಇನ್ನೊಂದು ವಿಷಯ ಹೇಳುವುದಾದರೆ ಹತ್ತನೆಯ ಹಣಕಾಸು ಯೋಜನೆಯಡಿಯಲ್ಲಿ 71 ಕೋಟಿ 87 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದರೆ, ಅದರಲ್ಲಿ 31 ಕೋಟಿ 14 ಲಕ್ಷ ರೂಪಾಯಿಗಳನ್ನು ನಾವು ಖರ್ಚು ಮಾಡಿ 40 ಕೋಟಿ 73 ಲಕ್ಷ ರೂಪಾಯಿಗಳನ್ನು ನಾವು ಖರ್ಚು ಮಾಡಲಿಲ್ಲ. ಅಂದರೆ ಎಲ್ಲಿಯೋ ಒಂದು ಕಡೆ ನಾವೇನು ಯೋಜನೆಗಳನ್ನು ಹಾಕಿಕೊಳ್ಳುತ್ತೇವೆ, ಈ ಸದನದಲ್ಲಿ ಚರ್ಚೆ ಮಾಡುತ್ತೇವೆ, ಅನೇಕ ಇಲಾಖೆಗಳಿಗೆ ನಾವೇನು ಅನುದಾನವನ್ನು ಕೊಡುತ್ತೇವೆ ಅನುದಾನವನ್ನು ಸರಿಯಾಗಿ ಬಳಸದಿರುವ ಅಧಿಕಾರಿಗಳ ಮೇಲೆ ಆಯಾಯ ಖಾತೆಯ ಮಂತ್ರಿಗಳ ಮೇಲಾಗಲೀ ಅವರನ್ನು ಕೇಳುವಂತಹ ಪ್ರಶ್ನೆಯೇ ಇಲ್ಲವಾ? ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಲ್ಲಿ ಮತ್ತು ಸಂಬಂಧಪಟ್ಟ ಮಂತ್ರಿಗಳಲ್ಲಿ ವಿನಂತಿಸಿಕೊಳ್ಳುತ್ತಿದ್ದೇನೆ, ಈ ರೀತಿ ಯೋಜನೆಗಳು ನಮಗೆ ಏನು ಕೇಂದ್ರದಿಂದ ಬರುತ್ತವೆ, ರಾಜ್ಯದಿಂದ ಕೊಡುತ್ತೇವೆ ಅವು ಸರಿಯಾದ ಸಮಯಕ್ಕೆ ತಾವು ಪೂರೈಸಬೇಕೆಂದು ನಾನು ವಿನಂತಿಸಿಕೊಳ್ಳುತ್ತೇನೆ.

ಇನ್ನೊಂದು ವಿಚಾರವನ್ನು ನಾನು ಆಗಲೇ ಹೇಳಿದೆ. ಕೊಳಚೆ ನೀರು ಕುಡಿಯಬೇಕೇ ಬನ್ನಿ ಕಲ್ಬುರ್ಗಿಗೆ ಎಂದು ಪತ್ರಿಕೆಯಲ್ಲಿ ಬಂದಿದೆ. ಗೃಹಮಂತ್ರಿಗಳ ಜಿಲ್ಲೆ. ಧರ್ಮಸಿಂಗ್, ಮಾಲಕರೆಡ್ಡಿ, ಖಮರುಲ್ ಇಸ್ಲಾಂರವರು ಇರುವಂತಹ ಜಿಲ್ಲೆ. ಇಂತಹ ಪರಿಸ್ಥಿತಿಯನ್ನು ನಾವು ಹತೋಟಿಯಲ್ಲಿ ತರಬೇಕಾಗುತ್ತದೆ. ನಾನು ರಾಯಚೂರಿಗೆ ಹೋಗಿದ್ದೆ. ಪಕ್ಕದಲ್ಲಿ ಆ ಕಡೆ ಕೃಷ್ಣಾನದಿ ಹರಿಯುತ್ತಿದೆ. ಆದರೆ ಅಲ್ಲಿ ಕುಡಿಯುವ ನೀರಿಗೆ ಅಭಾವ. ಕುಡಿಯುವ ನೀರಿನ ಬಗ್ಗೆ ವಿಶೇಷವಾದ ಗಮನವನ್ನು ಕೊಟ್ಟು ಕೆಲಸ ಮಾಡಬೇಕು. ಜನರಿಗೆ ಪರಿಶುದ್ಧವಾದ ನೀರನ್ನು ಕುಡಿಯಲಿಕ್ಕೆ ಕೊಡಬೇಕು. ಕಳೆದ ವರ್ಷದ ಬಜೆಟ್‌ನಲ್ಲಿ ಮಾನ್ಯ ಮುಖ್ಯಮಂತ್ರಿಗಳು ಪ್ರತಿಯೊಬ್ಬ ಪ್ರಜೆಗೂ ಕೂಡ 55 ಲೀಟರ್ ನೀರನ್ನು ಕೊಡುತ್ತೇನೆಂದು ಹೇಳಿದ್ದರು. ಆ ರೀತಿಯಲ್ಲಿ ನಾವು ಕನಿಷ್ಟ ಪ್ರತಿಯೊಬ್ಬ ಪ್ರಜೆಗೆ 50 ಲೀಟರ್, ಕಡೆಗೆ 30 ಲೀಟರ್ ಕೊಡುವಂತಹ ವ್ಯವಸ್ಥೆಯನ್ನು ಮಾಡಿದರೆ ಅನುಕೂಲವಾಗುತ್ತದೆ. ನಿಜವಾಗಿಯೂ ಕುಡಿಯಲಿಕ್ಕೆ ನೀರಿಲ್ಲದಿದ್ದರೆ ಮನುಷ್ಯ ಬದುಕಲಿಕ್ಕೆ ಸಾಧ್ಯವಿಲ್ಲ. ಈ ವ್ಯವಸ್ಥೆಯನ್ನೂ ಕೂಡ ನೀವು ಸಮಗ್ರವಾಗಿ ಜಾರಿಗೆ ತರಬೇಕೆಂದು ನಾನು ವಿನಂತಿಸಿಕೊಳ್ಳುತ್ತೇನೆ.

ಇವತ್ತು ಕೋಲಾರ, ಚಿತ್ರದುರ್ಗ ಹೀಗೆ ಅನೇಕ ಭಾಗಗಳಲ್ಲಿ ಆಶ್ರಯ

ಮನೆಗಳನ್ನು ಕಟ್ಟುವಂತಹ ವಿಚಾರದಲ್ಲಿ ಅನೇಕ ಅವ್ಯವಹಾರಗಳು ಆಗಿವೆ. ಜಿಲ್ಲಾಪಂಚಾಯಿತಿಗಳಲ್ಲಿ ಅನೇಕ ಕಾಮಗಾರಿಗಳನ್ನು ಗುತ್ತಿಗೆದಾರರನ್ನು ಕರೆಯದೆ 44 ಲಕ್ಷ, 50 ಲಕ್ಷ, 75 ಲಕ್ಷ ರೂಪಾಯಿಗಳನ್ನು ಅಲ್ಲಿರತಕ್ಕ ಕಾರ್ಯ ನಿರ್ವಹಣಾಧಿಕಾರಿಗಳು ಹಾಗೆಯೇ ಕೆಲಸಗಳನ್ನು ಅವಾರ್ಡ್ ಮಾಡಿದ್ದಾರೆಂದು ಪತ್ರಿಕೆಗಳಲ್ಲಿ ಬರುವುದನ್ನು ದಿನನಿತ್ಯವೂ ಕೂಡ ನೋಡುತ್ತಿದ್ದೇವೆ. ಆ ದಿಸೆಯಲ್ಲಿಯೂ ಕೂಡ ತಾವು ಗಮನವನ್ನು ಹರಿಸಬೇಕೆಂದು ನಾನು ವಿನಂತಿಸಿಕೊಳ್ಳುತ್ತಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಮಾನ್ಯ ನಾಯ್ಡುರವರೇ ಒಂದು ನಿಮಿಷ. ಗುಲ್ಬರ್ಗದಲ್ಲಿ ನೀರಿನ ಅಭಾವದ ಬಗ್ಗೆ ಅವರು ಮಾತನಾಡುತ್ತಾ ಹೇಳಿದರು. ಅವರು ಮಾತನಾಡುವಾಗ ಗೃಹಮಂತ್ರಿಗಳು, ಧರ್ಮಸಿಂಗ್, ಖಮರುಲ್ ಇಸ್ಲಾಂರವರು ಇದ್ದಾರೆಂದು ಹೇಳಿದರು. ತಮಗೆ ಗೊತ್ತಿರಬಹುದು. ಇತ್ತೀಚೆಗೆ ಗುಲ್ಬರ್ಗ ನಗರಕ್ಕೆ ಒಂದು ಪ್ಯಾಕೇಜ್ ಮಾಡಿ ಬರೀ ಇಂಟರ್‌ನಲ್ ವಾಟರ್‌ಸಪ್ಲೈಗೆ 60 ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿ ಈಗಾಗಲೇ ಟೆಂಡರ್ ಕಾಲ್‌ಫಾರ್ ಮಾಡಲಾಗಿದೆ. ಇದರ ಹಿಂದೆ ಕಾಂಗ್ರೆಸ್ ಪಕ್ಷದ ಸರ್ಕಾರವಿದ್ದಾಗ 50 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಭೀಮಾ ನದಿಗೆ ಬ್ಯಾರೇಜ್ ಕಟ್ಟಿ ಪೈಪ್‌ಲೈನ್ ಎಳೆದು ನೀರು ತರತಕ್ಕ ವ್ಯವಸ್ಥೆಯನ್ನು ಮಾಡಿದ್ದೇವೆ. ಅದು ಇಂಟರ್‌ನಲ್ ಪೈಪ್‌ಲೈನ್ ಸರಿ ಇರಲಾರದಕ್ಕೆ ನೀರಿನ ಸರಬರಾಜು ಆಗದೆ ಅದು ಪೆಂಡಿಂಗ್ ಬಿದ್ದಿತ್ತು. ಮೊನ್ನೆ ಮಾನ್ಯ ಮುಖ್ಯಮಂತ್ರಿಯವರು ಫೆಬ್ರವರಿ ತಿಂಗಳಿನಲ್ಲಿ ಗುಲ್ಬರ್ಗಾಕ್ಕೆ ಯಾವಾಗ ಭೇಟಿ ನೀಡಿದ್ದರು ಆಗ 120 ಕೋಟಿ ರೂಪಾಯಿಯ ಒಂದು ಪ್ಯಾಕೇಜ್‌ನಲ್ಲಿ 60 ಕೋಟಿ ರೂಪಾಯಿ ಬರೀ ಕುಡಿಯುವ ನೀರಿಗಾಗಿ ಇಂಟರ್‌ನಲ್ ಪೈಪ್ ವಾಟರ್‌ಗಾಗಿ ಕೊಡಲಾಗಿದೆ. ಕಳೆದ ಐದು ದಿವಸಗಳ ಹಿಂದೆ 18 ಕೋಟಿ ರೂಪಾಯಿಗಳನ್ನು ಒಳಚರಂಡಿ ವ್ಯವಸ್ಥೆಗೆ ಮಂಜೂರಾತಿ ಕೊಡಲಾಗಿದೆ. ಅಂದರೆ ಒಂದೇ ವರ್ಷದಲ್ಲಿ ಸುಮಾರು ಹೆಚ್ಚು ಕಡಿಮೆ 78 ಕೋಟಿ ರೂಪಾಯಿ ಕೆಲಸವನ್ನು ಒಂದು ಸಿಟಿಯಲ್ಲಿಯೇ ಪ್ರಾರಂಭವಾಗಿದೆ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು :— ತಮಗೆ ತುಂಬಾ ಧನ್ಯವಾದಗಳು. 78 ಕೋಟಿ ರೂಪಾಯಿಗಳನ್ನು ಗುಲ್ಬರ್ಗ ಜಿಲ್ಲೆಗೆ ಕೊಟ್ಟರೆ ಬೇರೆ ಜಿಲ್ಲೆಗಳ ಗತಿಯೇನು?

1.10 ಪಿ.ಎಂ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಇಷ್ಟು ಹೊತ್ತು ಗುಲ್ಬರ್ಗಾಕ್ಕೆ ಏನೂ ಮಾಡಿಲ್ಲ ಎಂದು ಫೋಟೋ ತೋರಿಸಿ ತೋರಿಸಿ ಹೇಳಿದರು. ಏಕೆಂದರೆ ನಮ್ಮ ನಾಯ್ಡು ಅವರು ಬಹಳ ಚೆನ್ನಾಗಿ ಮಾತನಾಡುತ್ತಿದ್ದಾರೆ. ಹಾಗೆ ಮಾತನಾಡಿಕೊಂಡು ಅಲ್ಲಿ ಗ್ರಾಮೀಣಾಭಿವೃದ್ಧಿ ಮಂತ್ರಿಗಳ ಜಾಗಕ್ಕೆ ಹೋಗತಕ್ಕಂಥ ಪ್ರಯತ್ನ ನಡೆದಿದೆ.

ಆದು ನಡೆಯಲಿ. ಆದರೆ ನನ್ನನ್ನು ಅವರು ನೇರವಾಗಿ ಕೇಳಿದರು ಗುಲ್ಬರ್ಗಾ ಜಿಲ್ಲೆಯ ಗತಿ ಏನಾಗಿದೆ ಎಂದು. ಪ್ರೆಸ್‌ನವರ ಕಡೆ ನೋಡಿಕೊಂಡು ಅವರು ಹಾಗೆ ಹೇಳಿದಾಗ ನಾನು ಈ ಕಡೆ ಸ್ವಲ್ಪ ಮಾತನಾಡುತ್ತಿದ್ದೆ. ಆದಕ್ಕೆ ಏನು ಮಾಡಿದ್ದೇವೆ ಎಂದು ಉತ್ತರ ಕೊಟ್ಟರೆ 'ಗುಲ್ಬರ್ಗಾಕ್ಕೆ ಇಷ್ಟು ಆಗಿದೆಯೆಂದರೆ ಬೇರೆ ಜಿಲ್ಲೆಗಳ ಗತಿ ಏನು?' ಎಂದರೆ ನಾನು ಏನು ಹೇಳಲಿ?

ಶ್ರೀ ಕಟ್ಟ ಸುಬ್ರಹ್ಮಣ್ಯಂ ನಾಯ್ಡು :— ಮಾನ್ಯ ಗೃಹಮಂತ್ರಿಗಳಿಗೆ ಧನ್ಯವಾದಗಳು. ನನ್ನ ಮೇಲೆ ಅವರು ಅಪಾರವಾದಂಥ ಗೌರವ ಮತ್ತು ಬಹಳ ಆಸಕ್ತಿಯನ್ನು ತೋರಿಸಿದ್ದಾರೆ. ಆದರ ಬಗ್ಗೆ ನನಗೆ ಸಂತೋಷವಾಗಿದೆ. ಅವರು ಇನ್ನೂ ಕೂಡ ಒಳ್ಳೆಯ ಸ್ಥಾನಕ್ಕೆ ಹೋಗಬೇಕು ಮತ್ತು ಮುಖ್ಯಮಂತ್ರಿಗಳೂ ಕೂಡ ಒಳ್ಳೆಯ ಸ್ಥಾನಕ್ಕೆ ಹೋಗಬೇಕು ಎಂದು ನನಗೆ ಆಸೆ ಇದೆ. ನನಗೆ ಒಳ್ಳೆಯದನ್ನು ಬಯಸುವುದಾದದರೆ ಅವರೂ ಕೂಡ ಚೆನ್ನಾಗಿ ಇರಬೇಕೆಂದು ನನ್ನಾಸೆ. ಹೀಗಾಗಿ ಸನ್ಮಾನ್ಯ ಉಪಾಧ್ಯಕ್ಷರೇ, ನಾವು ಬೀದರ್‌ಗೆ ಹೋಗಿದ್ದೆವು. ಬೀದರ್‌ನಲ್ಲಿ ನಾವು ಕುಡಿಯುವ ನೀರಿನ ವ್ಯವಸ್ಥೆ ಬಗ್ಗೆ ಮಾತನಾಡುವಾಗ ಅಲ್ಲಿ ರಾಜಕಾರಣಗಳು ನಡೆಯುತ್ತಿದೆ ಎನ್ನತಕ್ಕಂಥ ಮಾತು ಬಂತು. ಬೀದರ್ ಜಿಲ್ಲೆಯಲ್ಲಿ ನಾನು ಯಾರ ಮೇಲೂ ಆರೋಪ ಮಾಡುತ್ತಿಲ್ಲ, ದಯವಿಟ್ಟು ಕ್ಷಮಿಸಬೇಕು. ಅಲ್ಲಿ ಇರುವಂಥ ನಮ್ಮ ಪ್ರಜಾ ಪ್ರತಿನಿಧಿಗಳೇ ಕೆಲವರು ಸೇರಿಕೊಂಡು ಅಧಿಕಾರಿಗಳ ಮೇಲೆ ದಬ್ಬಾಳಿಕೆ ಮಾಡಿ, ಅವರು ಬೀದಿಮೆರವಣಿಗೆ ಮಾಡಿ ಯಾವ ರೀತಿ ಅವ್ಯವಸ್ಥೆ ಆಯಿತು ಎಂಬುದು ತಮಗೆ ಗೊತ್ತಿದೆ. ಇದನ್ನು ನಾವು ತಡೆಗಟ್ಟಬೇಕಾಗಿದೆ. ಕಾರಣ ಏನೆಂದರೆ, ಮುಖ್ಯಮಂತ್ರಿಗಳು ಬಹಳ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ ಎಂದು ಜನರ ಅಭಿಪ್ರಾಯ ಇದೆ. ನಾವು ಒಳ್ಳೆಯ ಕೆಲಸ ಆದರೆ ಒಳ್ಳೆಯದು ಎಂದು ಹೇಳುತ್ತೇವೆ. ಆದರೆ ಕೆಲಸ ಚೆನ್ನಾಗಿ ಇಲ್ಲವಾದರೆ ಆದನ್ನು ಖಂಡಿತವಾಗಿಯೂ ಸದನದಲ್ಲಿ ಹೇಳಬೇಕಾಗುತ್ತದೆ. ಇದಲ್ಲದೆ, ಚಿತ್ರದುರ್ಗದಲ್ಲಿ ಕಂಪ್ಯೂಟರ್ ಹಗರಣ, ಕೋಲಾರ ಜಿಲ್ಲೆಯಲ್ಲಿ ಕಾಮಗಾರಿಗಳ ಹಗರಣ, ಈ ರೀತಿ ಅನೇಕ ಭಾಗಗಳಲ್ಲಿ ಜಿಲ್ಲಾ ಪಂಚಾಯತ್‌ಗಳಲ್ಲಿ ಸಾಕಷ್ಟು ಸಮಸ್ಯೆಗಳಿವೆ. ಇವತ್ತು ಅನೇಕ ರಾಜ್ಯಗಳಲ್ಲಿ ಅಲ್ಲಿಯ ಮುಖ್ಯಮಂತ್ರಿಗಳು ಆಯಾಯ ಜಿಲ್ಲಾಧಿಕಾರಿಗಳ ಜೊತೆಗೆ ಟೆಲಿಕಾನ್ಫರೆನ್ಸ್ ಮಾಡಿ ದಿನನಿತ್ಯ ನಡೆಯತಕ್ಕಂಥ ವಿಚಾರಗಳ ಬಗ್ಗೆ ನೇರವಾಗಿ ಮಾತನಾಡುವಂಥ ವ್ಯವಸ್ಥೆ ಇದೆ. ನನಗೆ ತಮ್ಮ ಬಗ್ಗೆ ಅತ್ಯಂತ ಗೌರವ ಇದೆ. ಅವರೂ ಕೂಡ ಹೀಗೆ ಮಾಡಬೇಕು. ತಮ್ಮಲ್ಲಿ ಗುಪ್ತದಳ ಇದೆ, ಅವ್ಯವಹಾರಗಳು ಆಗುತ್ತವೆ ಒಂಬುದು ತಮಗೆ ಗೊತ್ತಿದೆ. ಎಲ್ಲೆಲ್ಲಿ ಇಂಥಾದ್ದು ನಡೆಯುತ್ತಿದೆ ಎಂಬ ಮಾಹಿತಿ ದೊರೆತ ಕೂಡಲೇ ತಾವು ಸಂಬಂಧಪಟ್ಟ ಜಿಲ್ಲಾಧಿಕಾರಿಗಳ ಜೊತೆಯಲ್ಲಿ ಟೆಲಿಕಾನ್ಫರೆನ್ಸ್ ಮಾಡಿದರೆ ನಿಜವಾಗಿಯೂ ಪರಿಸ್ಥಿತಿ ಸುಧಾರಣೆ ಆಗುತ್ತದೆ ಎನ್ನತಕ್ಕಂಥ ವಿಚಾರವನ್ನು ನಾನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛಿಪಡುತ್ತಿದ್ದೇನೆ. ಆದೇ ರೀತಿಯಲ್ಲಿ ಇವತ್ತು

ಬೆಂಗಳೂರು ಮಹಾನಗರದ ಬಗ್ಗೆ ಮುಖ್ಯಮಂತ್ರಿಗಳಿಗೆ ಹೆಚ್ಚು ಕಾಳಜಿ ಇದೆ. ಇದು ನಿಜವಾಗಿಯೂ ಸಂತೋಷದ ಸಂಗತಿ. ನಾನು ಅವರಿಗೆ ಅಭಾರಿಯಾಗಿದ್ದೇನೆ. ಅನೇಕ ಯೋಜನೆಗಳನ್ನು ಬೆಂಗಳೂರು ಮಹಾನಗರದಲ್ಲಿ ಮಾಡಬೇಕೆಂದು ಹೇಳುತ್ತಿದ್ದಾರೆ. ಇದಕ್ಕೆ ಕಾರಣಗಳು ಬೇರೆ ಬೇರೆ ಇವೆ. ಯಾವ ಕಾರಣಕ್ಕೋಸ್ಕರ ಬೆಂಗಳೂರು ಮಹಾ ನಗರವನ್ನು ಅಭಿವೃದ್ಧಿ ಮಾಡಬೇಕೆಂದರೆ ಇದು ನಮ್ಮ ರಾಜ್ಯದ ರಾಜಧಾನಿಯಾಗಿದೆ. ಇದು ಭಾರತದೇಶದಲ್ಲೇ ಒಳ್ಳೆಯ ಹೆಸರು ಪಡೆದಿರತಕ್ಕಂಥ ಪಟ್ಟಣ ಮತ್ತು ಅದರ ಜೊತೆಯಲ್ಲಿ ಪ್ರಪಂಚದಲ್ಲಿ ಅನೇಕ ಜನರಿಗೆ ಕೂಡ ಬೆಂಗಳೂರು ನಗರದ ಮೇಲೆ ಕಣ್ಣು ಇದೆ. ಅದಕ್ಕೆ ಕಾರಣ ಇಲ್ಲಿಯ ವಾತಾವರಣ ಇರಬಹುದು, ಇಲ್ಲಿ ಇರುವಂಥ ಜನತೆ ಇರಬಹುದು. ಎಲ್ಲದರ ಬಗ್ಗೆ ಹೆಚ್ಚು ಗೌರವ ಇರುವ ಕಾರಣಕ್ಕೆ ಮುಖ್ಯ ಮಂತ್ರಿಗಳು ಈ ದಿಸೆಯಲ್ಲಿ ಕೆಲಸ ಮಾಡಿದ್ದಾರೆ. ಆದರೆ ಸಮಸ್ಯೆ ಏನಿದೆ ಎಂದರೆ, ಮುಖ್ಯಮಂತ್ರಿಗಳಿಗೆ ಒಳ್ಳೆಯದು ಮಾಡಬೇಕೆಂದು ಆಸೆಯಿದೆ ಮತ್ತು ಅವರು ಘೋಷಣೆಯನ್ನೂ ಮಾಡುತ್ತಾರೆ. ಆದರೆ ಅದು ಅನುಷ್ಠಾನಕ್ಕೆ ಬರುತ್ತಿಲ್ಲ. ಒಂದು ಸಲ ನನ್ನ ಕ್ಷೇತ್ರಕ್ಕೆ ಬಂದು ಬಸ್ ನಿಲ್ದಾಣ ಉದ್ಘಾಟನೆಯನ್ನು ಮಾಡಿದರು, ತುಂಬಾ ಸಂತೋಷ. ಸುತ್ತಮುತ್ತ ಕಾಂಕ್ರೀಟ್ ರಸ್ತೆಯನ್ನು ಹಾಕಿರಿ ಒಂದು ಹೇಳು ಶಿಫಾರಸ್ಸು ಪತ್ರವನ್ನೂ ಕೊಟ್ಟರು. ನನ್ನ ಕ್ಷೇತ್ರದಲ್ಲಿ ಒಳ್ಳೆಯ ಕೆಲಸ ಮಾಡುವುದಕ್ಕೆ ನನಗೆ ಅನುವು ಮಾಡಿಕೊಟ್ಟಿದ್ದಕ್ಕಾಗಿ ನಾನು ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಆದರೆ ಒಂದು ಕೆಲಸವನ್ನು ತಾವು ಹೇಳಿದ ಮೇಲೆ ಅವರು ಎಷ್ಟು ಸಮಯ ತೆಗೆದುಕೊಳ್ಳುತ್ತಾರೆ ಎಂಬುದು ಇಲ್ಲಿಯ ಪ್ರಶ್ನೆ. ತಾವು ಘೋಷಣೆ ಮಾಡುತ್ತೀರಿ, ಆದೇಶ ಮಾಡುತ್ತೀರಿ. ಆದರೆ ಒಂದು ವರ್ಷವಾದರೂ ಅದು ಕಾರ್ಯಗತವಾಗುವುದಿಲ್ಲ. ಹೀಗಾದರೆ ಹೇಗೆ? ಬೆಂಗಳೂರು ನಗರದಲ್ಲಿ ಟಾರ್ ರಸ್ತೆ ಆಗಬೇಕಾಗಿದದ್ದು ಹನ್ನೊಂದು ತಿಂಗಳ ಹಿಂದೆ. ಇವತ್ತು ಇನ್ನೂ ಟೆಂಡರ್ ಫೈನಲೈಸ್ ಮಾಡುತ್ತಿದ್ದಾರೆ. ಇದರ ಅರ್ಥ ಏನು? ಬೆಂಗಳೂರು ನಗರವನ್ನು ಚೆನ್ನಾಗಿ ಇಡಬೇಕಂದು ಮುಖ್ಯಮಂತ್ರಿಗಳಿಗೆ ಆಸೆ ಇದೆ. ಆದರೆ ಇವತ್ತು ನಡೆಯುತ್ತಿರುವುದೇನು? ಅವರು ಒಂದು ವರ್ಷದ ಕೆಲಸವನ್ನು ಮುಂದಿನ ವರ್ಷ ತೆಗೆದುಕೊಳ್ಳುತ್ತಾರೆ, ಮುಂದಿನ ವರ್ಷದ ಕೆಲಸವನ್ನು ಅದರ ಮುಂದಿನ ವರ್ಷ ತೆಗೆದುಕೊಳ್ಳುತ್ತಾರೆ. 40 ಪರ್ಸೆಂಟ್‌ನಷ್ಟು ಟಾರ್ ಬೆಲೆ ಜಾಸ್ತಿಯಾಗಿದೆ. ಅಧಿಕಾರಿಗಳ ನಿರ್ಲಕ್ಷವೇ ಇದಕ್ಕೆ ಕಾರಣ. ನಾನು ನಿಜವಾಗಿಯ ಬಹಳ ನೇರವಾಗಿ ಹೇಳುವುದಕ್ಕೆ ಇಚ್ಛೆಪಡುವುದು ಏನೆಂದರೆ ಅಧಿಕಾರಿಗಳು ಸಮಯಕ್ಕೆ ಸರಿಯಾಗಿ ಟೆಂಡರ್ ಕರೆಯಬೇಕಾದದ್ದು ಕರೆಯಲಿಲ್ಲ. ಜೂನಿಯರ್ ಇಂಜಿನಿಯರ್, ಎಕ್ಸಿಕ್ಯೂಟಿವ್ ಇಂಜಿನಿಯರ್, ಚೀಫ್ ಇಂಜಿನಿಯರ್, ಇಂಜಿನಿಯರ್ ಇನ್ ಚೀಫ್, ಕಮೀಷನರ್, ಕೌನ್ಸಿಲ್ - ಅದು ಮತ್ತೆ ವಾಪಸ್ಸು ಬರಬೇಕು. ಟೆಂಡರ್ ಆದಮೇಲೆ ಗೋಯಿಂಗ್‌ಬ್ಯಾಕ್ ಅಂಡ್ ಕಮಿಂಗ್‌ಬ್ಯಾಕ್ - ಈ ರೀತಿಯ ವಾತಾವರಣ ಇದೆ. ಈ ಕಮಿಂಗ್ ಬ್ಯಾಕ್ ಮತ್ತು

ಗೋಯಿಂಗ್ ಬ್ಯಾಕ್‌ನಲ್ಲಿ ಅನೇಕ ವ್ಯವಹಾರಗಳು ಇವೆ. ಇದರಲ್ಲಿ ಡೀಲಿಂಗ್‌ಗಳೂ ಆಗುತ್ತವೆ. ತಾವು ದೊಡ್ಡ ಯೋಜನೆಗಳನ್ನು ಮಾಡುತ್ತಿದ್ದೀರಿ, ತುಂಬಾ ಸಂತೋಷ. ಆದರೆ ಸಣ್ಣಸಣ್ಣ ಕೆಲಸಗಳಲ್ಲೂ ಹೀಗೆ ಆಗುತ್ತಿದೆ. ಮೊನ್ನೆ ಕೂಡ ತಾವು ಸರ್ಕಾರದ ಜತೆಗೆ ಮಹಾನಗರ ಪಾಲಿಕೆಯ ವತಿಯಿಂದ ಸಾವಿರ ಕೋಟಿ ರೂಪಾಯಿಗಳ ಒಪ್ಪಂದಕ್ಕೆ ಸಹಿಹಾಕಿಸಿದಿರಿ. ತಮಗೆ ನಾನು ಧನ್ಯವಾದಗಳನ್ನು ಅರ್ಪಿಸುತ್ತೇನೆ. ಆದರೆ ಈ ಸಣ್ಣಸಣ್ಣ ಕೆಲಸಗಳು ಸರಿಯಾಗಿ ನಡೆಯುತ್ತಿಲ್ಲ. ಬೆಂಗಳೂರು ನಗರದ ಶಾಲೆಗಳಲ್ಲಿರುವ ಶೌಚಾಲಯಗಳ ಬಗ್ಗೆ ಹೇಳಬೇಕೆಂದರೆ ನನಗೆ ದು:ಖವಾಗುತ್ತದೆ. ಕಾಂಪೌಂಡ್ ಇದೆ, ಗೋಡೆ ಇಲ್ಲ, ಶೌಚಾಲಯ ಇದೆ, ನೀರು ಇಲ್ಲ, ಗಬ್ಬುನಾತ ಹೊಡೆಯುತ್ತದೆ. ಯಾರು ನಮ್ಮ ಮುಂದಿನ ಭವಿಷ್ಯ, ಮುಂದಿನ ಆಸ್ತಿಯೆಂದು ನಾವು ಮಾತನಾಡುತ್ತೇವಲ್ಲಾ, ಆ ಶಾಲೆಗಳ ಬಳಿ ಏನಾಗಿದೆ ಎಂಬುದನ್ನು ಹೇಳುತ್ತೇನೆ. ಬಹಳ ದು:ಖದ ಸಂಗತಿ ಏನೆಂದರೆ ಆ ಸ್ಥಳಗಳಲ್ಲಿ ಸಾಯಂಕಾಲ ಹೊತ್ತಿನಲ್ಲಿ ಮಾಡಬಾರದ್ದು, ಆಗಬಾರದ್ದು ಆಗುತ್ತಿದೆ. ಆ ಶಾಲೆಗಳಲ್ಲಿ ದೊಡ್ಡ ಕಾಪೌಂಡ್ ಇದ್ದರೆ, ಗೇಟಿಗೆ ಬೀಗ ಇಲ್ಲ, ವಾಚ್‌ಮನ್ ಇಲ್ಲ, ಶೌಚಾಲಯ ಇಲ್ಲ. ಆ ಶಾಲೆಗಳ ದುಸ್ಥಿತಿ ಹೀಗೆ ಇದೆ. ಇನ್ನು ರಸ್ತೆಗಳಿಗೆ ಡಾಂಬರೀಕರಣ ಮಾಡುವಂಥಾದ್ದು, ಅಸ್ಫಾಲ್ಟಿಂಗ್ ಮತ್ತು ಚಿಪ್‌ಕಾರ್ಪೆಟಿಂಗ್ ಎಂದು ಮಾಡುತ್ತಾರೆ. ಚಿಪ್‌ಕಾರ್ಪೆಟಿಂಗ್ ಎಂದರೆ ಅದು ಕೂದಲು ಎಳೆಯಷ್ಟು ದಪ್ಪ ಇರುತ್ತದೆ. ಇಲ್ಲದಿದ್ದರೆ ಈ ಕೆಲಸ ಮಾಡುವುದಿಲ್ಲ ಎಂದು ಕಂಟ್ರಾಕ್ಟರ್ ಓಡಿಹೋಗುತ್ತಾನೆ, ಇಂಜಿನಿಯರ್ ನನ್ನ ಕೈಯಲ್ಲಿ ಕೆಲಸ ಮಾಡಿಸುವುದಕ್ಕೆ ಆಗುವುದಿಲ್ಲವೆಂದು ಈ ಕಡೆ ಹೋಗುತ್ತಾನೆ. ಹಾಗಾದರೆ ನಮ್ಮ ಗತಿ ಏನು ಅಲ್ಲಿ ಹಳ್ಳ ಇದ್ದ ಜಾಗದಲ್ಲಿ ಹಳ್ಳವೇ ಇರುತ್ತದೆ. ಕೊಳ್ಳ ಇರುವ ಜಾಗದಲ್ಲಿ ಕೊಳ್ಳ, ದಿಣ್ಣೆ ಇರುವ ಜಾಗದಲ್ಲಿ ದಿಣ್ಣೆ ಹಾಗೆಯೇ ಇರುತ್ತದೆ. ಈ ರೀತಿ ಟಾರನ್ನು ಹಾಕುತ್ತಾರೆ. ಮತ್ತೆ ಮುಂದಿನ ವರ್ಷ ತಿರುಪತಿಗೆ ಹೋಗುತ್ತೇವಲ್ಲಾ ಮಾಡಿಕೊಂಡು ಬರುತ್ತೇವಲ್ಲಾ ಹಾಗೆ, ಮುಂದಿನ ವರ್ಷ ಪುನ: ಇದೇ ಕೆಲಸ ಮಾಡುತ್ತಾರೆ. ಸುಮಾರು 40 ಕೋಟಿ ರೂಪಾಯಿಗಳನ್ನು ಈ ವರ್ಷ ಖರ್ಚುಮಾಡಿ ಅದು ಮುಂದಿನ ವರ್ಷ ಮಳೆಗಾಲಕ್ಕೆ ಇರುವುದಿಲ್ಲ. ಏಕೆಂದರೆ ವೈಜ್ಞಾನಿಕವಾಗಿ ಕೆಲಸ ಮಾಡಿರುವುದಿಲ್ಲ. ವೈಜ್ಞಾನಿಕವಾಗಿ ಕೆಲಸ ಮಾಡುವ ಇಂಜಿನಿಯರುಗಳು ಇದ್ದಾರೆ. ಆದರೆ ಯಾರ ಹತ್ತಿರವೋ ಡಿಸೈನಿಂಗ್ ಮಾಡಿಸುತ್ತಾರೆ, ಒಳಸುರಂಗ ಮಾರ್ಗಗಳನ್ನು ಮಾಡುತ್ತಾರೆ. ನನ್ನ ಕ್ಷೇತ್ರದಲ್ಲಿಯೂ ಒಂದ ಒಳ ಸುರಂಗ ಕೆಲಸ ಮಾಡಿದ್ದಾರೆ. ಆದರೆ ಅದು ಕೆಲಸ ಸಾಗುತ್ತಿಲ್ಲ. ನೀವು ಯಾರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಿ? ಈ ಕಡೆ ಇಂಜಿನಿಯರುಗಳು ಹೋದರೆ, ಆ ಕಡೆ ಕಂಟ್ರಾಕ್ಟರ್ ದುಡ್ಡು ತೆಗೆದುಕೊಂಡುಹೋಗುತ್ತಾನೆ. ಹೀಗೆ ಬೆಂಗಳೂರು ನಗರದ ಬಗ್ಗೆ ಇನ್ನೂ ಅನೇಕ ವಿಚಾರಗಳು ಇವೆ. ಉಪಾಧ್ಯಕ್ಷರೇ, ತಾವು ಬೆಲ್ ಹೊಡೆಯಬೇಡಿ, ನಾನು ಬೇಗ ಮುಗಿಸುತ್ತೇನೆ. ಬಾಂಡ್ ಯೋಜನೆಯನ್ನು ತಂದರು ಸ್ವಾಮಿ. 125 ಕೋಟಿ ರೂಪಾಯಿಗಳ

ಬಾಂಡ್ ಯೋಜನೆಯನ್ನು ತಂದಿದ್ದು ಮುಂದೆ ಅದು 185 ಕೋಟಿ ರೂ. ಆಯಿತು. ಇದರಲ್ಲಿ ಆಗಿರತಕ್ಕಂಥ ಹಗರಣಗಳ ಬಗ್ಗೆ ಹೇಳಿದರೆ ಕಣ್ಣಲ್ಲಿ ನೀರು ಬರುತ್ತದೆ. ನಿಜವಾಗಿಯೂ ಬಾಂಡ್ ಹಗರಣ ಹೇಗೆ ಆಯಿತು ಎಂದರೆ ನೂರಕ್ಕೆ ನಲ್ವತ್ತು ಪರ್ಸೆಂಟ್ ಹೆಚ್ಚಾಗಿ ಟೆಂಡರ್ ಕೊಟ್ಟು ಅವಾರ್ಡ್ ಮಾಡಿಬಿಟ್ಟರು. ಅವತ್ತು ಇದ್ದಂಥ ಆಯುಕ್ತರು 40 ಪರ್ಸೆಂಟ್ ಹೆಚ್ಚು ಮಾಡಿ ಟೆಂಡರ್ ಅವಾರ್ಡ್ ಮಾಡಿಬಿಟ್ಟರು. ಅವರು ಏನು ಮಾಡಿದರು ಎಂದರೆ ಟೆಂಡರ್ ಸ್ಪೆಸಿಫಿಕೇಷನ್ಸ್ ಏನಿದೆ, ಆ ಕೆಲಸ ಮಾಡಲಿಲ್ಲ. ಸಾರ್ವಜನಿಕರಿಂದ ಬಾಂಡ್ ಎತ್ತಿ, ಆ ಹಣ ಸಾಲಮಾಡಿ ಈ ರೀತಿಯಾಗಿ ಕಂಟ್ರಾಕ್ಟದಾರರ ಪಾಲು ಮಾಡಿದರು. ಇದು ಸರಿಯೇ ಎಂದು ನಾನು ಕೇಳುತ್ತೇನೆ. ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೀರಿ ಎಂದು ನಾವು ಕೇಳಿದಾಗ ಮುಖ್ಯಮಂತ್ರಿಗಳು ಅನೇಕ ಬಾರಿ ಈ ರೀತಿ ನಡೆದಿಲ್ಲವೆಂದು ಹೇಳಿದರು. ಕೊನೆಗೆ ಮತ್ತೊಮ್ಮೆ 'ಇಲ್ಲ ನಡೆದಿದೆ, ಕ್ರಮ ತೆಗೆದುಕೊಳ್ಳುತ್ತೇನೆ' ಎಂದು ಹೇಳಿದರು. ಪಾಲಿಕೆಯ ಆಯುಕ್ತರ ಹತ್ತಿರ ಈ ರೀತಿ ಬಾಂಡ್ ಯೋಜನೆಯಲ್ಲಿ ಕಾಮಗಾರಿಗಳು ಕಳಪೆ ಮಟ್ಟದಲ್ಲಿವೆ, ಎಷ್ಟು ಕೆಲಸ ಮಾಡಬೇಕೋ ಅಷ್ಟು ಮಾಡಿಲ್ಲವೆಂದು ಹೇಳಿದೆವು ಸಭಾನಾಯಕರೇನೋ ಒಳ್ಳೆಯ ಮನಸ್ಸಿನಿಂದ ಆಯಿತು, ನಾನು ತನಿಖೆ ಮಾಡಿಸುತ್ತೇನೆ ಎಂದು ಹೇಳಿದರು. ಆದರೆ ಇಲ್ಲಿಯ ತನಕ ತನಿಖೆ ನಡೆದಿಲ್ಲ. ತಾವು ತನಿಖೆ ಮಾಡಿದರೆ ಸರಿ, ಮಾಡದೇ ಇದ್ದರೆ ಅದು ತಮಗೇ ಬಿಟ್ಟದ್ದು. ಆದರೆ ಇಂತಹ ಕೆಲಸಗಳಲ್ಲಿ ಈ ರೀತಿಯಾಗುತ್ತಿದ್ದರೆ ಇದನ್ನು ಹತೋಟಿಗೆ ತರುವವರು ಯಾರು? ಇದಕ್ಕೆಲ್ಲಾ ಅಕೌಂಟೆಬಿಲಿಟಿ ಯಾರು ಎನ್ನುವ ಪ್ರಶ್ನೆ ಬರುತ್ತದೆ. ಇಷ್ಟನ್ನು ನಾನು ಹೇಳುತ್ತಾ ಕೊನೆಯದಾಗಿ ಗೃಹಮಂತ್ರಿಗಳ ಗಮನ ಸೆಳೆಯುತ್ತೇನೆ. ಸಾಕಷ್ಟು ಸಮಯ ಇಲ್ಲ. ಆದರೆ ಮುಖ್ಯಮಂತ್ರಿಗಳು ಇಲ್ಲಿ ಇರುವುದು ನನಗೆ ಸಂತೋಷ ಉಂಟು ಮಾಡಿದೆ. ಮೊನ್ನೆದಿನ ಕಾನೂನು ವಿಚಾರ ಬಗ್ಗೆ ಸುರೇಶ್ ಕುಮಾರ್, ಸಿಂಧ್ಯಾ ಮತ್ತು ಎಲ್ಲ ನಾಯಕರು ಮಾತನಾಡಿದ್ದಾರೆ. ಸ್ವಾಮಿ, ಇತ್ತೀಚೆಗೆ ಬ್ಯಾಟರಾಯನಪುರ ಸಿ.ಎಂ.ಸಿ ಚುನಾವಣೆ ನಡೆಯಿತು. ಒಂದು ಪಕ್ಷದವರು ಗೆದ್ದರು. ಇನ್ನೊಂದು ಪಕ್ಷದವರು ಸೋತರು. ಗೆದ್ದ ಪಕ್ಷದವರು ಸಾಮಾನ್ಯವಾಗಿ ವಿಜಯಘೋಷಣೆ ಮಾಡಿ ಬರುವಂಥಾದ್ದು ಸಹಜ. ಅಂತಹ ಸಂದರ್ಭದಲ್ಲಿ ಸೋತ ಪಕ್ಷದ ಅಭ್ಯರ್ಥಿಗಳ ಮೇಲೆ ಹಲ್ಲೆ ಮಾಡಿದರು. ಅಲ್ಲಿ ಮೋಟಾರ್‌ಸೈಕಲ್‌ನ್ನು ಬೆಂಕಿಗೆ ಹಾಕಿದರು. ಪೋಲಿಸಿನವರು ಅಲ್ಲಿ ನಿಂತಿದ್ದರು, ಮೂಕ ಪ್ರೇಕ್ಷಕರಾಗಿ ಅವರೆಲ್ಲ ನೋಡಿದ್ದಾರೆ. ಇದು ಪೊಲಿಸ್ ರಾಜಕಾರಣವೋ, ರಾಜ್ಯದ ರಾಜಕಾರಣವೋ ಎಂದು ಕೇಳುವಂಥ ಸಂದರ್ಭ ಸ್ವಾಮಿ. ದೂರನ್ನು ಕೊಟ್ಟಿದ್ದಾರೆ. ಆ ಒಂದು ಪಕ್ಷದವರನ್ನು ಸುಮಾರು ನಲ್ವತ್ತು ಜನರನ್ನು ಪೊಲೀಸ್ ಸ್ಟೇಷನ್‌ಗೆ ಕರೆದುಕೊಂಡು ಹೋದರು. ಮಾರನೇ ದಿವಸ ಅವರನ್ನು ಬಿಡುಗಡೆ ಮಾಡಿದ್ದಾರೆ. ನಾವು ಪೊಲೀಸ್ ಕಮೀಷನರ್ ಹತ್ತಿರ ಹೋಗಿದ್ದೆವು, ಐ.ಜಿ. ಹತ್ತಿರ ಹೋಗಿದ್ದೆವು. ಆದರೆ ಅಲ್ಲಿದ್ದಂಥ ಸರ್ಕಲ್ ಇನ್‌ಸ್ಪೆಕ್ಟರ್ ಯಾರ ಅರ್ಜಿಯನ್ನೂ ಸ್ವೀಕಾರ ಮಾಡಿ ಅದರ ಮೇಲೆ ತನಿಖೆ ಮಾಡುವುದಕ್ಕೆ ತಯಾರಿಲ್ಲ. ಇಂತಹ ಅಧಿಕಾರಿಗಳು ಇದ್ದಾಗ ನಿಮ್ಮ ಇಲಾಖೆಗೆ ಒಳ್ಳೆಯ ಹೆಸರು ಹೇಗೆ ಬರುತ್ತದೆ? ಒಂದು ಪಕ್ಷದ ಕಾರ್ಯಕರ್ತರನ್ನು ನಾವು ವಿಜೃಂಭಿಸಿ ರೌಡಿಸಂ ಮಾಡಿ

ಎಂದು ಹೇಳಿ ಅವರನ್ನು ಬಿಟ್ಟು ಇನ್ನೊಂದು ಕಡೆ ರಾತ್ರಿ ಹೊತ್ತಿನಲ್ಲಿ ಸುಲಿಗೆ ಮಾಡುತ್ತಾರೆ. ಕೊಲೆ ಮಾಡುತ್ತಾರೆ, ಅತ್ಯಾಚಾರ ಮಾಡುತ್ತಾರೆ, ಮಾನಭಂಗ ಮಾಡುತ್ತಾರೆ ಎಂದರೆ ಇವತ್ತು ಇದನ್ನೆಲ್ಲಾ ಹತೋಟಿಯಲ್ಲಿ ಇಡುವುದಕ್ಕೆ ಸಾಧ್ಯವಾಗುತ್ತದೆಯೇ? ಎಲ್ಲಿ ರಾಜಕೀಯ ಶಕ್ತಿಗಳು ಪ್ರವೇಶ ಮಾಡುತ್ತವೆಯೋ, ಅಲ್ಲಿಯ ತನಕ ನ್ಯಾಯ ದೊರಕಲು ಸಾಧ್ಯವೇ ಇಲ್ಲ. ಯಾವ ರೀತಿ ಸಾಧ್ಯ? ಒಂದು ಪಕ್ಷದವರು ರೌಡಿಸಂ ಮಾಡಿಕೊಂಡು ಮನೆಗಳನ್ನು ಒಡೆದಿದ್ದಾರೆ. ಅವರ ಕನ್ನೆಗ ಹೊಡೆದಿದ್ದಾರೆ, ಕಣ್ಣಿಗೆ ಹೊಡೆದಿದ್ದಾರೆ, ಕಣ್ಣುಗಳ ಮೇಲೆ ಸ್ಟಿಚಸ್ ಆಗಿದೆ. ಮನೆಗಳ ಕಿಟಕಿ, ಬಾಗಿಲುಗಳು ಹೋಗಿವೆ. ಈ ರೀತಿ ಅನೇಕ ಸಮಸ್ಯೆಗಳು ಬೆಂಗಳೂರು ನಗರದಲ್ಲಿ ಇವೆ. ಇವತ್ತು ಕಾನೂನು ಸುವ್ಯವಸ್ಥೆ ಹದಗೆಡುವುದಕ್ಕೆ ಇದೂ ಒಂದು ಕಾರಣ. ಕಾರಣ ಏನೆಂದರೆ, ಎಲ್ಲಿಯೂ ಭಯ ಭಕ್ತಿ ಎನ್ನುವುದು ಇಲ್ಲ. ಮಾನ್ಯ ಮಲ್ಲಿಕಾರ್ಜುನ ಖರ್ಗೆ ಸಾಹೇಬರು ಒಳ್ಳೆಯ ಅನುಭವ ಇರತಕ್ಕ ಮಂತ್ರಿಗಳು. ಅವರು ಈ ದಿಸೆಯಲ್ಲಿ ಕ್ರಮ ಕೈಗೊಳ್ಳಬೇಕು. ಇವತ್ತು ಏನು ಲೊಟ್ಟೆಗೊಳ್ಳಹಳ್ಳಿಯಲ್ಲಿ ದೌರ್ಜನ್ಯಗಳು ನಡೆಯುತ್ತಾ ಇದೆ, ಪೋಲೀಸಿನವರು ನಿಷ್ಕ್ರಿಯರಾಗಿ ಇವತ್ತು ರಾಜಕಾರಣ ಮಾಡುತ್ತಿದ್ದಾರೆ ಅದನ್ನು ತಡೆಗಟ್ಟಬೇಕು. ಯಾವ ಪೋಲೀಸ್ ಅಧಿಕಾರಿ ತನ್ನ ಕರ್ತವ್ಯದಲ್ಲಿ ವಿಫಲನಾಗಿದ್ದಾನೋ, ಡ್ಯೂಟಿ ನೆರವೇರಿಸುವುದರಲ್ಲಿ ಸಫಲವಾಗಿಲ್ಲವೋ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ. ಇಷ್ಟು ಹೇಳಿ ಇವತ್ತಿನ ದಿವಸ ನನಗೆ ಮಾತನಾಡಲಿಕ್ಕೆ ಅವಕಾಶ ಮಾಡಿಕೊಟ್ಟಂಥ ತಮಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ, ಜೈಹಿಂದ್.

+ ಶ್ರೀ ಕೆ.ಎಂ. ಕೃಷ್ಣಮೂರ್ತಿ (ಕಡೂರು) :— ಮಾನ್ಯ ಸಭಾಧ್ಯಕ್ಷರೇ, ಇವತ್ತು ಇಲಾಖೆಗಳ ಬೇಡಿಕೆಗಳ ಮೇಲೆ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಈ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಯಾವುದೇ ಸರ್ಕಾರ, ಜನಪರ ಕಾರ್ಯಕ್ರಮಗಳನ್ನು ಮಾಡುತ್ತದೆ. ಅದು ಅನುಷ್ಠಾನಕ್ಕೆ ಬರದೇ ಇದ್ದರೆ, ಆ ಕಾರ್ಯಕ್ರಮಗಳು ಜನರನ್ನು ಮುಟ್ಟಲಿಕ್ಕೆ ಸಾಧ್ಯವಿಲ್ಲ. ಇವತ್ತು ಚುನಾವಣಾ ಪ್ರಣಾಳಿಕೆಯಲ್ಲಿ ಪ್ರಮುಖವಾಗಿ ಹೇಳುವಂಥ ವಿಚಾರ ಯಾವುದೆಂದರೆ, ರೈತರ ಸಮಸ್ಯೆ ಬಗ್ಗೆ. ನಾವು ಅಧಿಕಾರಕ್ಕೆ ಬಂದರೆ ಇಂತಹ ಸಮಸ್ಯೆಗಳನ್ನು ಬಗೆಹರಿಸುತ್ತೇವೆ, ರೈತರಿಗೆ ನೀರಾವರಿ ಸೌಕರ್ಯವನ್ನು ಮಾಡಿಕೊಡುತ್ತೇವೆ, ರೈತರಿಗೆ ಒಳ್ಳೆಯ ಬೆಳೆಯನ್ನು ಬೆಳೆಯುವುದಕ್ಕೆ ಮಾರ್ಗದರ್ಶನವನ್ನು ಇಲಾಖೆಯಿಂದ ನೀಡುತ್ತೇವೆ. ಕಾರಣ ಇದಕ್ಕೆ ನನಗನ್ನಿಸುತ್ತದೆ, ಗಾಂಧೀಜಿಯವರ ಸಿದ್ಧಾಂತ. ಅವರ ಸಿದ್ಧಾಂತ ಏನೆಂದರೆ, ಎಲ್ಲಿಯವರೆಗೆ ಈ ದೇಶದಲ್ಲಿ ಶೇಕಡ 80 ಭಾಗ ಗ್ರಾಮೀಣ ಪ್ರದೇಶ ಇದೆ, ಅದು ಅಭಿವೃದ್ಧಿಯಾಗದ ಹೊರತು, ಆ ಜನರಿಗೆ ಮೂಲಭೂತ ಸೌಕರ್ಯ ಸಿಗದೇ ಇದ್ದರೆ, ದೇಶದ ಪ್ರಗತಿಯನ್ನು ಕಾಣಲಿಕ್ಕೆ ಸಾಧ್ಯವಿಲ್ಲ. ಹಾಗೆಯೇ ಮಹಿಳೆಯರಿಗೆ ಸ್ಥಾನಮಾನಗಳು, ಕೃಷಿಕರಿಗೆ ಸವಲತ್ತುಗಳು ಈ ಸಿದ್ಧಾಂತದ ಮೇಲೆ ಇವತ್ತು ನಮ್ಮ ದೇಶದ ಸಂವಿಧಾನ ರೂಪಿತವಾಗಿದೆ. ಯಾವುದೇ ಸರ್ಕಾರ ಚುನಾವಣೆಯಲ್ಲಿ ಪ್ರಣಾಳಿಕೆಯನ್ನು ಇಟ್ಟರೂ ಕೂಡ ಅದನ್ನು ಅನುಷ್ಠಾನಗೊಳಿಸಲಿಕ್ಕೆ ಸರ್ಕಾರ ಬದ್ಧವಾಗಿರುತ್ತದೆ. ಆದರೆ ಇಲ್ಲಿ ಮಾನ್ಯ ಕಟ್ಟಾ ಸುಬ್ರಹ್ಮಣ್ಯ ನಾಯ್ಡುರವರು ಹೇಳಿದಹಾಗೆ ಎಲ್ಲೋ ಆಡಳಿತ ಲೋಪ, ಇಲಾಖೆಯ

ಅಧಿಕಾರಿಗಳ ನಿರ್ಲಕ್ಷ್ಯ ಹೀಗೆ ಹಲವಾರು ವಿಚಾರಗಳಿಂದ, ನಾವು ಹಲವಾರು ಸಮಸ್ಯೆಗಳನ್ನು ಈ ಸದನದಲ್ಲಿ ಚರ್ಚೆ ಮಾಡುತ್ತೇವೆ. ಆಡಳಿತ ಪಕ್ಷದವರು ಉತ್ತರವನ್ನು ಕೊಡುತ್ತಾರೆ. ವಿರೋಧ ಪಕ್ಷದವರು ಗಲಾಟೆ ಮಾಡುತ್ತಾರೆ. ಆದರೂ ಕೂಡ ನಮ್ಮೆಲ್ಲರ ಚಿಂತನೆ, ಈ ರಾಷ್ಟ್ರದ ಈ ರಾಜ್ಯದ ಜನರಿಗೆ ಮೂಲಭೂತ ಸೌಕರ್ಯಗಳನ್ನು, ಒಂದು ಕಾನೂನಿನ ಚೌಕಟ್ಟಿನಲ್ಲಿ ಕೊಡಿಸಿಕೊಡಬೇಕೆಂಬ ಉದ್ದೇಶ ಎಲ್ಲಾ ಸರ್ಕಾರಗಳ ಉದ್ದೇಶ. ಆದರೆ, ಜವಹರಲಾಲ್ ನೆಹರೂರವರು ಕೈಗಾರೀಕರಣ ಮಾಡಬೇಕೆಂದು ಒಂದೇ ಉದ್ದೇಶದಿಂದ ಇವತ್ತು ಕೃಷಿಕರು ಈ ದೇಶದಲ್ಲಿ ಸಮಸ್ಯೆಗಳನ್ನು ಎದುರಿಸಬೇಕಾಯಿತು. ಏನು ವಲ್ಲಭಾಯ್ ಪಟೇಲರವರು ಮೊದಲನೇ ಆದ್ಯತೆಯನ್ನು ಕೃಷಿಗೆ ಕೊಟ್ಟು, ನೀರಾವರಿ ಸೌಕರ್ಯ ಕೊಡಬೇಕೆಂದು ಹೇಳಿದರೋ ಅದನ್ನೇನಾದರೂ ಮಾಡಿದ್ದರೆ, ಈ ದೇಶದಲ್ಲಿ ಯಾರೂ ಕೂಡ ಆತ್ಮಹತ್ಯೆ ಮಾಡಿಕೊಳ್ಳುತ್ತಿರಲಿಲ್ಲ. ಏನೋ ಕೈಗಾರಿಕೆಗಳನ್ನು ಮಾಡಬೇಕು, ಅದಕ್ಕೆ ಸರಿಯಾದ ಕಚ್ಚಾ ವಸ್ತುಗಳು ಸಿಗದಿರುವುದರಿಂದ ಮತ್ತು ಉತ್ಪಾದನೆ ಒಳ್ಳೆಯ ಮಟ್ಟದಲ್ಲಿ ಆಗದೇ ಇರುವುದರಿಂದ ನಮ್ಮ ರಾಜ್ಯ ಸರ್ಕಾರದಲ್ಲೂ ಕೂಡ, ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟ ಹಲವಾರು ಸಂಸ್ಥೆಗಳು ಇವತ್ತು ನಷ್ಟವನ್ನು ಅನುಭವಿಸುವಂಥ ಪರಿಸ್ಥಿತಿಯನ್ನು ತಲುಪಿದೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಇವತ್ತು ನಾನು ಮೊದಲನೆಯದಾಗಿ ಕೃಷಿಗೆ ಸಂಬಂಧಪಟ್ಟ ವಿಷಯವನ್ನು ತೆಗೆದುಕೊಂಡರೆ ನಮ್ಮಲ್ಲಿ ಒಂದು ಗಾದೆ ಇದೆ. ವ್ಯವಸಾಯ ಮನೆ ಮಂದಿಯೆಲ್ಲಾ ಸಾಯ ಎಂದು. ಮನೆ ಮಂದಿಯವರೆಲ್ಲಾ ಎಂದರೆ, ಯಜಮಾನ, ಹೆಂಡತಿ ಮಕ್ಕಳು, ತಾಯಿ, ತಂದೆ 24 ಗಂಟೆ ದುಡಿದರೂ ಕೂಡ ಇವತ್ತು ಅವನಿಗೆ ನೆಮ್ಮದಿಯಾದ ಜೀವನವನ್ನು ಮಾಡಲಿಕ್ಕೆ ಆಗತ್ತಾ ಇಲ್ಲ. ಇದಕ್ಕೆ ಸರ್ಕಾರವೇ ಕಾರಣ ಎಂದು ನಾನು ಹೇಳುವುದಿಲ್ಲ. ಒಂದು ಕಡೆ ಪ್ರಕೃತಿ ವಿಕೋಪ ಇರಬಹುದು, ದೇಶದಲ್ಲಿ ಪ್ರಕೃತಿ ವಿಕೋಪ ಇಲ್ಲದೇ, ಸರಿಯಾಗಿ ಮಳೆ ಬಂದರೆ, ರೈತ ಸರ್ಕಾರದ ವಿಚಾರಕ್ಕೆ ಬರುವುದಿಲ್ಲ. ಏನಾದರೂ ಮಾಡಿಕೊಳ್ಳಿ ಎಂದು ಶಾಸಕರಿಗೆ ಹೇಳುತ್ತಾನೆ. ಒಳ್ಳೆಯ ಕೆಲಸ ಮಾಡಿ, ನಮಗೇನು ಸವಲತ್ತುಗಳನ್ನು ಕೊಡಬೇಕೋ ಅವುಗಳನ್ನು ಕೊಡಿ ಎಂದು ಹೇಳುತ್ತಾನೆಯೇ ಹೊರತು ಯಾವುದೇ ಬೇಡಿಕೆಯನ್ನು ಅವನು ನಮ್ಮ ಮುಂದಿಡುವುದಿಲ್ಲ. ಆದರೆ, ಇವತ್ತು ನಾವು ಕೃಷಿ ಇಲಾಖೆಗೆ ಹೆಚ್ಚು ಹಣವನ್ನು ಖರ್ಚು ಮಾಡುತ್ತಿದ್ದೇವೆ. ಇದರ ಉದ್ದೇಶ. ಸಮಸ್ಯೆ ನಿವಾರಣೆಯಾಗಬೇಕು, ನಾವೇನು ಇಲ್ಲಿ ವಿಧಾನ ಸಭೆಗೆ ಬಂದಿದ್ದೇವೆ ಶೇಕಡ 75 ರಿಂದ 80 ಭಾಗ ಕೃಷಿಕರ ಮಕ್ಕಳೇ. ಯಾರೋ ಒಬ್ಬಿಬ್ಬರು ಸಿಟಿಯಲ್ಲಿದ್ದಂತಹವರು. ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಅಥವಾ ಸುರೇಶ್ ಕುಮಾರ್‌ರಂಥವರು ಇರಬಹುದು. ಅವರೂ ಕೂಡ ಬೇರೆ ವ್ಯವಹಾರಿಕವಾಗಿ ಇದ್ದರೂ ಕೂಡ ಅವರಿಗೂ ರೈತರ ಬಗ್ಗೆ ಚಿಂತನೆ ಇದೆ. ಈವತ್ತು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆಂದರೆ ಒಂದು ತರಹ ಹಾಸ್ಯಾಸ್ಪದ ಮಾತು. ಇವತ್ತು ಏತಕ್ಕೋಸ್ಕರ ಅವನು ಆತ್ಮಹತ್ಯೆ ಮಾಡಿಕೊಂಡಿದ್ದಾನೆ, ಅವನಿಗೇನಾಗಿತ್ತು

ಎಂಬ ಬಗ್ಗೆ ವಿಚಾರ ಮಾಡಬೇಕು. ಅದು ಗೊತ್ತಾದರೆ ಜನಪ್ರತಿನಿಧಿಗಳಾದವರು ಆ ಭಾಗದ ಜನರ ಹತ್ತಿರ ಇನ್ನೂ ಹೆಚ್ಚು ಜನಪ್ರಿಯತೆ ಗಳಿಸುವುದಕ್ಕೆ, ಸರ್ಕಾರದ ಸವಲತ್ತುಗಳನ್ನು ಕೊಡಿಸಲಿಕ್ಕೆ ಪ್ರಯತ್ನ ಮಾಡುತ್ತಾರೆ. ಅದು ಶಾಸಕರು ಇರಬಹುದು, ಜಿಲ್ಲಾ ಪಂಚಾಯ್ತಿ ಸದಸ್ಯರು ಇರಬಹುದು, ತಾಲ್ಲೂಕು ಪಂಚಾಯ್ತಿ ಸದಸ್ಯರು ಇರಬಹುದು, ನಾವು ಇದರ ಬಗ್ಗೆ ವಿಚಾರ ಮಾಡಬೇಕಾಗುತ್ತದೆ. ಈ ಕಾಂಗ್ರೆಸ್ ಸರ್ಕಾರದಲ್ಲೇ ಆತ್ಮಹತ್ಯೆ ಪ್ರಕರಣಗಳು ನಡೆಯುತ್ತಾ ಇವೆ ಎಂದು ಹೇಳುವುದಿಲ್ಲ. ನಮ್ಮ ಸರ್ಕಾರ ಇದ್ದಾಗಲೂ ಆತ್ಮಹತ್ಯೆ ಪ್ರಕರಣಗಳು ನಡೆಯುತ್ತಾ ಇದ್ದವು. ಆದರೆ, ಶಾಸಕರುಗಳು ಅದರ ಬಗ್ಗೆ ಚರ್ಚೆ ಮಾಡುತ್ತಲೇ ಇದ್ದೇವೆ. ಏನು ಚರ್ಚೆ ಮಾಡುತ್ತಿದ್ದೇವೆ, ರೈತರಿಗೆ ಇಂತಹ ಸೌಲಭ್ಯ ಕೊಡಿ. ಕೆಲವೊಂದು ಸವಲತ್ತುಗಳನ್ನು ಕೊಡುವಂಥ ಕೆಲಸ ಮಾಡಿ. ಉತ್ತಮ ಗುಣಮಟ್ಟದ ಬೀಜಗಳನ್ನು ಕೊಡಿ ಎಂದು. ನಮ್ಮ ಕಾರ್ಯಕ್ರಮ ಒಂದು ಕಡೆ ಇದನ್ನು ಮಾಡಿದರೆ, ಒಂದು ಕಡೆ ನಮ್ಮ ದೇಶದ ಆರ್ಥಿಕ ನೀತಿ, ಆರ್ಥಿಕ ವ್ಯವಸ್ಥೆ, ನಮ್ಮ ರೈತರ ಜನಜೀವನದ ಮೇಲೆ ಬಹಳ ಪರಿಣಾಮ ಬೀರುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಚಿಕ್ಕಮಗಳೂರಿಗೆ ಬಂದಾಗ ನಾನು ತೋರಿಸಿದೆ. ನಮ್ಮ ಕಣ್ಣಲ್ಲಿ ನೀರು ಬರುತ್ತಾ ಇಲ್ಲ, ನಮ್ಮ ಕಣ್ಣಲ್ಲಿ ರಕ್ತ ಬರುತ್ತಾ ಇದೆಯೆಂದು ಹೇಳಿ, ತೋಟಗಾರಿಕೆಗೆ ಸಂಬಂಧ ಪಟ್ಟ ವಿಚಾರಗಳನ್ನು ತೋರಿಸಿದೆ. ಏನು ನಮಗೆ ಅನ್ಯಾಯವಾಗಿದೆ. ನುಸಿರೋಗ, ನಾನು ಈ ನುಸಿರೋಗದ ಬಗ್ಗೆ ಹೋಗುವುದಿಲ್ಲ. ಮೊದಲು ಕೃಷಿ ಇಲಾಖೆಗೆ ಬರುತ್ತೇನೆ. ಮಾನ್ಯ ಜಯಚಂದ್ರರವರು ಕೃಷಿ ಸಚಿವರಾಗಿ ಒಳ್ಳೆಯ ಕಾರ್ಯಕ್ರಮಗಳನ್ನೇನೋ ಮಾಡಿದ್ದಾರೆ. ಆದರೆ, ಇಲಾಖೆಯಲ್ಲಿ ಕೆಲವು ಬದಲಾವಣೆಯನ್ನು ಮಾಡಿರುವುದರಿಂದ ರೈತರ ಸಮಸ್ಯೆಗಳನ್ನು ನಿವಾರಣೆ ಮಾಡಲಿಕ್ಕೆ ಸಚಿವರು ಮತ್ತು ಇಲಾಖೆಯವರು ತೆಗೆದುಕೊಂಡ ಕ್ರಮ ಸರಿಯಾಗಿಲ್ಲವೆಂಬ ಅಭಿಪ್ರಾಯವನ್ನು ತಮ್ಮ ಮುಖಾಂತರ ಕೃಷಿ ಸಚಿವರಿಗೆ ಹೇಳಬೇಕಾಗಿದೆ. ಏಕೆಂದರೆ, ಬೇರೆ ದೇಶಗಳವರಿಗೆ ಹೋಲಿಸಿಕೊಂಡರೆ, ನಮ್ಮ ರೈತರು ಇನ್ನೂ ಹೊಸ ನೀತಿಯನ್ನು ಅನುಸರಿಸಬೇಕೆಂಬ ರೀತಿ ಇಲ್ಲಿ. ಇದಕ್ಕೋಸ್ಕರ ಹಿಂದೆ ಒಂದು ವ್ಯವಸ್ಥೆ ಇತ್ತು. ಹೋಬಳಿ ಮಟ್ಟದಲ್ಲಿ ಒಬ್ಬ ಗ್ರಾಮಸಹಾಯಕ ಇದ್ದ, ಒಂದೊಂದು, ಎರಡೆರಡು ಪಂಚಾಯ್ತಿಗೆ, ಅಲ್ಲೇನು ಹೆಕ್ಟೇರ್ ಅಥವಾ ಎಕರೆವಾರು ಇದೆ ಆದಕ್ಕನುಗುಣವಾಗಿ ಗ್ರಾಮಸೇವಕರು ಇದ್ದರು. ಯಾವ್ಯಾವ ನಮೂನೆ ಭೂಮಿಯಲ್ಲಿ ಏನೇನು ಬೆಳೆಯನ್ನು ಬೆಳೆಯುತ್ತಾರೆ, ಮುಂಗಾರು ಮತ್ತು ಹಿಂಗಾರಿನಲ್ಲಿ ಯಾವ್ಯಾವ ಬೆಳೆಗಳನ್ನು ಬೆಳೆಯಬಹುದು, ಪರ್ಯಾಯವಾಗಿ ಏನು ಬೆಳೆಯನ್ನು ಬೆಳೆಯಬಹುದು ಎಂಬ ಬಗ್ಗೆ ರೈತರಿಗೆ ವಾರಕ್ಕೊಂದು ಸಲ ಆ ಗ್ರಾಮಕ್ಕೆ ಹೋಗಿ ಮಾಹಿತಿಯನ್ನು ಕೊಡುತ್ತಿದ್ದಿರಿ. ಹೋಬಳಿಯಲ್ಲಿ ಒಂದು ರೈತರ ಮಾಹಿತಿ ಕೇಂದ್ರವಿದೆ. ಒಂದು ಹೋಬಳಿ ಎಂದರೆ ಸುಮಾರು ನಲವತ್ತು ಸಾವಿರದಿಂದ ಐವತ್ತು ಸಾವಿರ ಹೆಕ್ಟೇರ್ ಭೂಮಿ, ಸುಮಾರು ಎಂಟು ಸಾವಿರ ರೈತ ಕುಟುಂಬದವರು

ವಾಸ ಮಾಡುತ್ತಿದ್ದಾರೆ. ಅದು ತರಿ, ಕೆಂಪು, ಮರಳು ಭೂಮಿ ಇರಬಹುದು. ಆ ಭೂಮಿಗೆ ತಕ್ಕ ಬೆಳೆಯನ್ನು ಬೆಳೆಯಲು ಮಾರ್ಗದರ್ಶನ ಬೇಕು. ಇವತ್ತು ರೈತರು ಹೋಬಳಿ ಕೇಂದ್ರಕ್ಕೆ ಹೋಗಿ ಮಾಹಿತಿಯನ್ನು ಪಡೆದು ಬೆಳೆಯನ್ನು ಬೆಳೆಯುವಂಥ ಸ್ಥಿತಿಯಲ್ಲಿಲ್ಲ. ರೈತ ವ್ಯವಸಾಯವನ್ನು ಮಾಡುವುದನ್ನು ಬಿಟ್ಟು ಬೇರೆ ಏನನ್ನಾದರೂ ಮಾಡಬೇಕು ಎಂಬ ಮಟ್ಟಿಗೆ ನಿರಾಶಾದಾಯಕನಾಗಿದ್ದಾನೆ. ಮುಂಗಾರು ಇಲ್ಲವೆ ಹಿಂಗಾರು ಬೆಳೆ ಇರಬಹುದು, ರೋಗದ ಬಾಧೆ, ಕೀಟದ ಬಾಧೆ ಇನ್ನೂ ಏನೇನೋ ಸಮಸ್ಯೆಗಳಿಂದ ಬೆಳೆಯನ್ನು ಬೆಳೆದರೂ ಮಾರುಕಟ್ಟೆಗೆ ತೆಗೆದುಕೊಂಡು ಹೋದರೆ ಅವನನ್ನು ಸುಲಿಗೆ ಮಾಡುತ್ತಾರೆ. ಹೊಸದುರ್ಗ, ಚಿಕ್ಕನಾಯಕನಹಳ್ಳಿ, ತರೀಕೆರೆ, ಕಡೂರಿನ ಕೆಲವು ಭಾಗಗಳಲ್ಲಿ ಕಂಬಳಿ ಹುಳುವಿನ ಬಾಧೆ ಇದೆಯೆಂದು ಮಾನ್ಯ ಕೃಷಿ ಸಚಿವರಿಗೆ ತಿಳಿಸಿದ್ದೆ. 1988ರಲ್ಲಿ ಕೇವಲ 450 ಎಕರೆ ಕಂಬಳಿ ಹುಳುವಿನ ಬಾಧೆ ಮುಂಗಾರಿನ ಕಮರ್ಷಿಯಲ್ ಬೆಳೆಗಳಾದ ಸೂರ್ಯಕಾಂತಿ, ಎಳ್ಳು, ಹೆಸರು, ಉದ್ದು ಇವುಗಳಿಗೆ ಬರುತ್ತಿತ್ತು. ಆದರೆ ಈಗ ಈ ನಾಲ್ಕೈದು ತಾಲ್ಲೂಕಿನಲ್ಲಿ ನಮ್ಮ ರೈತರು ಯಾವುದೇ ವಾಣಿಜ್ಯ ಬೆಳೆಯನ್ನು ಇದರಿಂದಾಗಿ ಬೆಳೆಯದಂತಾಗಿದ್ದಾರೆ. ಹೀಗಾದರೆ ರೈತರ ಆರ್ಥಿಕ ಪರಿಸ್ಥಿತಿ ಹೇಗೆ ಸುಧಾರಿಸುತ್ತದೆ? ರೈತ ಸಾಲವನ್ನು ಹೇಗೆ ತೀರಿಸುತ್ತಾನೆ? ಹಿಂಗಾರಿನಲ್ಲಿ ರಾಗಿ, ಜೋಳ ಈ ರೀತಿ ಅವನ ಊಟಕ್ಕೆ ಬೇಕಾದಂಥ ಪದಾರ್ಥಗಳನ್ನು ಬೆಳೆಯುವುದು ನಮ್ಮ ರೈತರ ನೀತಿಯಾಗಿದೆ. ನಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ ಸಹ ಈ ಏರಿಯಾವನ್ನು ಎಂಡೋಮಿಟ್ ಏರಿಯಾ ಎಂದು ಘೋಷಣೆ ಮಾಡಿ ಎಂದು ಕೇಳಿದ್ದೆ. ಆ ರೀತಿ ಘೋಷಣೆ ಮಾಡುವುದರಿಂದ ಈ ಸಮಸ್ಯೆಯನ್ನು ನಿರ್ಮೂಲನೆ ಮಾಡಬಹುದು. ಸರ್ಕಾರ 20-30 ಲಕ್ಷ ರೂ. ಹಣವನ್ನು ಕೊಟ್ಟರೆ ಆದರಿಂದ ಈ ಸಮಸ್ಯೆಯನ್ನು ನಿರ್ಮೂಲನೆ ಮಾಡಲು ಸಾಧ್ಯವಿಲ್ಲ. 1988ರ ನಂತರ ಹನ್ನೆರಡು ವರ್ಷದಲ್ಲಿ ಆ ಕಂಬಳಿ ಹುಳುವಿನ ಬಾಧೆ 4500 ಎಕರೆ ಪ್ರದೇಶದಲ್ಲಿ ವ್ಯಾಪಿಸಿದೆಯೆಂದರೆ ನಾವು ಹೇಗೆ ಜೀವನ ಮಾಡಬೇಕು? ಸರ್ಕಾರ ಇದರ ನಿವಾರಣೆಗೆ ಹಣವನ್ನು ಖರ್ಚು ಮಾಡುತ್ತಲಿದೆ. ಫೆಬ್ರವರಿ ತಿಂಗಳಿನಲ್ಲಿ ಚಿಟ್ಟೆಯಾಗುತ್ತದೆ, ಮಾರ್ಚ್ ತಿಂಗಳಿನಲ್ಲಿ ಎಲೆಗಳ ಮೇಲೆ ಮೊಟ್ಟೆಯನ್ನು ಇಡುತ್ತದೆ, ಮೇ ಮತ್ತು ಜೂನ್‌ನಲ್ಲಿ ಹುಳುವಾಗಿ ಮುಂಗಾರು ಪೈರನ್ನೆಲ್ಲಾ ತಿನ್ನುತ್ತದೆ. ಕಂಬಳಿ ಹುಳು ಆವರಿಸಿರುವ ಹೊಲದ ಹತ್ತಿರ ನಿಂತುಕೊಂಡರೆ ಅದು ಎಲೆಯನ್ನು ತಿನ್ನುವ ಶಬ್ದ ಕೇಳಿಸುತ್ತದೆ. ಮತ್ತೆ ಜೂನ್ ಜುಲೈ ಸಮಯಕ್ಕೆ ಕೋಶಾವಸ್ಥೆಗೆ ಬಂದುಬಿಡುತ್ತದೆ. ಭೂಮಿಯೊಳಗೆ ಸೇರಿಕೊಂಡುಬಿಡುತ್ತದೆ. ಇದರ ಜೊತೆಗೆ ಹಿಂಗಾರು ಬೆಳೆಗಳಾದ ಜೋಳ, ರಾಗಿ ಕಾಂಡ ಕೊರೆಯುವ ಹುಳುಗಳ ಭಾದೆ ಬರುತ್ತದೆ. ಯಾವುದೋ ಸಂದರ್ಭದಲ್ಲಿ ಹಣವನ್ನು ಖರ್ಚು ಮಾಡಿದರೆ ಉಪಯೋಗವಾಗುವುದಿಲ್ಲ, ಸಮಯಕ್ಕೆ ಸರಿಯಾಗಿ ಉಪಯೋಗ ಮಾಡಿದರೆ ಅನುಕೂಲವಾಗುತ್ತದೆ ಎಂದು ಬೇಕಾದಷ್ಟು ಸಲ ಇಲಾಖೆಯವರಿಗೆ ಹೇಳಿದ್ದೇನೆ. ಮಾನ್ಯ ಬೈರೇಗೌಡರು ಸಚಿವರಾಗಿದ್ದಾಗಲೂ

ಹಣವನ್ನು ಕೊಟ್ಟಿದ್ದರು, ಮಾನ್ಯ ಜಯಚಂದ್ರರವರೂ ಹಣವನ್ನು ಕೊಟ್ಟಿದ್ದಾರೆ. ಆದರೆ ಕೊಟ್ಟಿರುವ ಹಣದಲ್ಲಿ ಗುರಿ ಸಾಧನೆಯಾಗಿದೆಯೇ ಎಂಬ ಬಗ್ಗೆ ಪರಿಶೀಲನೆ ಮಾಡಬೇಕೆಂದು ಮಾನ್ಯ ಸಚಿವರಿಗೆ ತಿಳಿಯಬಯಸುತ್ತೇನೆ. ಆದರೆ ಆ ಕೆಲಸ ಇವತ್ತು ಆಗುತ್ತಿಲ್ಲ. ಆದ್ದರಿಂದ ಇವತ್ತು ಹಿಂಗಾರು ಬೆಳೆಗಳಿಗೇನು ಕೀಟಬಾಧೆ ಇದೆ ಅದನ್ನು ನಿವಾರಣೆ ಮಾಡಲು ಕೇಂದ್ರ ಸರ್ಕಾರಕ್ಕೆ ವರದಿಯನ್ನು ಕಳುಹಿಸಿಕೊಡಬೇಕು, ಅನಂತರ ಅದನ್ನು ಜಾರಿಗೆ ತರುವಲ್ಲಿ ಮಾನ್ಯ ಮುಖ್ಯಮಂತ್ರಿಯವರು ಪ್ರಯತ್ನ ಮಾಡಬೇಕೆಂಬ ವಿಚಾರವನ್ನು ಹೇಳುತ್ತೇನೆ. ಎರಡನೆಯದಾಗಿ, ರಾಜ್ಯದಲ್ಲಿ ಎಲ್ಲಾ ಕಡೆ ನುಸಿರೋಗವಿದೆ. ಆದರೆ ನಮ್ಮಲ್ಲಿ ಯಾವ ದುರಾದೃಷ್ಟವೋ ಏನೋ ಮುಂಗಾರಿನಲ್ಲಿ ಕೆಂಪುತಲೆ ಹುಳು, ಹಿಂಗಾರಿನಲ್ಲಿ ಕಪ್ಪುತಲೆ ಹುಳುವಿನ ಭಾದೆ ಇದೆ. ಮೊನ್ನೆ ಮಾನ್ಯ ಮುಖ್ಯಮಂತ್ರಿಯವರು ಚಿಕ್ಕಮಗಳೂರಿಗೆ ಬಂದಿದ್ದಾಗ ಒಂದು ಕಾಯಿಯನ್ನು ತೋರಿಸಿ ಇದು ನುಸಿರೋಗದಿಂದ ಆಗುರುವಂಥದ್ದು, ಒಂದು ತೆಂಗಿನ ಗರಿಯನ್ನು ತೋರಿಸಿ ಇದು ಕೆಂಪುತಲೆ ಹುಳುವಿನಿಂದ ಆಗಿರುವ ತೊಂದರೆಯೆಂದು ತೋರಿಸಿದೆ. ಈ ರೋಗವನ್ನು ತಡೆಗಟ್ಟಲು ಮಾರ್ಚ್ ತಿಂಗಳಿನಲ್ಲಿ ಮಾನ್ಯ ಅಲ್ಲಂವೀರಭದ್ರಪ್ಪನವರು 62 ಲಕ್ಷ ರೂಪಾಯಿಗಳನ್ನು ಕೊಟ್ಟರು. ಆದರೆ ಇವತ್ತಿನವರೆಗೆ ಜಿಲ್ಲಾಪಂಚಾಯಿತಿಯವರು, ತೋಟಗಾರಿಕಾ ಇಲಾಖೆಯವರು ಆ ಹಣವನ್ನು ಖರ್ಚು ಮಾಡಿಲ್ಲ. ಇದನ್ನೇಕೆ ಸಚಿವರು ವಿಚಾರ ಮಾಡಲಿಲ್ಲ? ತಾವು ಕಡೂರಿನ ಸುತ್ತಮುತ್ತ ಬಂದು ಪರಿಸ್ಥಿತಿಯನ್ನು ನೋಡಬೇಕು. ಇವತ್ತು ನಮ್ಮ ಕಣ್ಣಿನಲ್ಲಿ ನೀರು ಬರುತ್ತಿಲ್ಲ, ರಕ್ತ ಬರುತ್ತಿದೆ. ಇಪ್ಪತ್ತು ವರ್ಷಗಳಿಂದ ನಾವು ಬರಗಾಲವನ್ನು ಅನುಭವಿಸುತ್ತಿದ್ದೇವೆ. ನಮ್ಮ ಅದೃಷ್ಟ ನಮ್ಮ ಭಾಗದಲ್ಲಿ ಕಾಫಿ ತೋಟಗಳಲ್ಲಿ ಕೂಲಿ ಸಿಗುತ್ತಿದೆ. ನಮ್ಮಲ್ಲಿ ನಲವತ್ತು ಭಾಗ ಜನರು ಕಾಫಿ ತೋಟಗಳಿಗೆ ಕೂಲಿಗೆ ಹೋಗುತ್ತಾರೆ. ಆದರೆ ತಮ್ಮ ಡಬ್ಲ್ಯೂ.ಟಿಓ. ಒಪ್ಪಂದದಿಂದಾಗಿ ಕಾಫಿಯ ಬೆಲೆ ಇಳಿದಿರುವುದರಿಂದ ಕಾಫಿ ತೋಟಗಳಲ್ಲಿ ಕೂಲಿಗೆ ತೆಗೆದುಕೊಳ್ಳುತ್ತಿಲ್ಲ. ಹೊಟ್ಟೆಯ ಹಸಿವು ಉಂಟಾದರೆ ಕಳ್ಳತನ ಮಾಡಬೇಕು, ಇಲ್ಲದಿದ್ದರೆ ಹೊಟ್ಟೆ ತುಂಬಲು ಏನಾದರೂ ಒಂದು ಕೆಲಸವನ್ನು ಮಾಡಲೇ ಬೇಕಾಗುತ್ತದೆಂದು ಮಾನ್ಯ ಕೃಷಿ ಸಚಿವರಿಗೆ ಹೇಳಿದೆ. ನಮ್ಮ ರೈತರ ಪರಿಸ್ಥಿತಿಯನ್ನು ಸುಧಾರಿಸಲು ಹಣವನ್ನು ಖರ್ಚು ಮಾಡುವುದು ಮುಖ್ಯವಲ್ಲ. ಖರ್ಚು ಮಾಡಿದಂಥ ಹಣ ಆ ರೈತನಿಗೆ ಮುಟ್ಟಿತ್ತೇ, ರೈತನಿಗೆ ಅದರಿಂದ ಅನುಕೂಲವೇನಾಗಿದೆ ಎಂಬುದನ್ನು ನೋಡಬೇಕಾಗುತ್ತದೆ. ನಮ್ಮಲ್ಲಿ ತೆಂಗಿನ ಮರದ ಬುಡದಲ್ಲಿ ಕಾಂಡ ಸೋರುವಿಕೆಯ ರೋಗ ಇದೆ. ಅದು ಬಂದುಬಿಟ್ಟರಂತೂ ತೆಂಗಿನ ಮರವು ಉಳಿಯುವುದಿಲ್ಲ. ನುಸಿರೋಗ ಬಂದರೆ ಮರವು ನೋಡಲು ಚೆನ್ನಾಗಿರುತ್ತದೆ, ಆದರೆ ಮರದಲ್ಲಿ ತೆಂಗಿನ ಕಾಯಿ ಇರುವುದಿಲ್ಲ, ಕೆಂಪುತಲೆ ಹುಳುವಿನ ರೋಗ ಬಂದರೆ ಮರವನ್ನು ನೋಡಲು ಆಗುವುದಿಲ್ಲ, ಆದರೂ ಮರ ಬದುಕುತ್ತದೆ, ಎರಡು ಮೂರು ವರ್ಷ ಏನಾದರೂ ಔಷದಿಯನ್ನು ಇನ್‌ಜೆಕ್ಟ್ ಮಾಡಿದರೆ ಬದುಕುತ್ತದೆ. ಆದರೆ ಮರದ ಬುಡದಲ್ಲಿ

ಸೋರುವಿಕೆ, ಸ್ಟೀಮ್ ಬ್ಲೀಡಿಂಗ್ ರೋಗ ಬಂದರೆ ಆ ಮರ ಬದುಕಲು ಸಾಧ್ಯವಿಲ್ಲ. ಇದರ ಬಗ್ಗೆ ತಾವು ಪರಿಶೀಲನೆ ಮಾಡಬೇಕಾಗುತ್ತದೆ. ಇವತ್ತು ಕರಾವಳಿಯ ಸುಮಾರು ನಲವತ್ತೈದು ಸಾವಿರ ತೆಂಗಿನ ಮರಗಳು ಸ್ಟೀಮ್ ಬ್ಲೀಡಿಂಗ್‌ನಿಂದ ಹಾನಿಗೆ ಒಳಗಾಗಿದೆಯೆಂಬ ವಿಚಾರವನ್ನು ಅಧಿಕಾರಿಗಳು ಸರ್ಕಾರದ ಗಮನಕ್ಕೆ ತರಲಿಲ್ಲ? ತೋಟಗಾರಿಕಾ ಅಧಿಕಾರಿಗಳು ಏನು ಮಾಡುತ್ತಿದ್ದಾರೆ? ಜಂಟಿ ನಿರ್ದೇಶಕ ಮಟ್ಟದ ಹುದ್ದೆಯನ್ನು ಮಾಡಿರುವಂಥ ಅಧಿಕಾರಿಗಳು ಸರ್ಕಾರದ ಗಮನಕ್ಕೆ ಇದನ್ನು ತಾರದಿದ್ದರೆ ಹೇಗೆ, ಇದರ ಬಗ್ಗೆ ನಾನು ಕಳೆದ ಸಲ ಮಾತನಾಡಿದ್ದೆ. ಆಗ ಮಾನ್ಯ ಜಯಚಂದ್ರರವರು ಇದರ ಬಗ್ಗೆ ವಿಚಾರ ಮಾಡುತ್ತೇನೆಂದು ಹೇಳಿದ್ದರು. ನಾವು ಚರ್ಚೆ ಮಾಡಿದ್ದು ಇಲ್ಲೇ ಉಳಿಯುವುದಾದರೆ ನಾವೇಕೆ ಇಲ್ಲಿ ಚರ್ಚೆ ಮಾಡಬೇಕು? ನಾನು ಒಂದು ವಿಚಾರವನ್ನು ಹೇಳುತ್ತೇನೆ.

1.40 ಪಿಎಂ

ನಾವೇನಾದರೂ ತೆಂಗಿನ ಕಾಯಿಯನ್ನು ತೆಗೆದುಕೊಂಡು ಹೋದರೆ ಒಂದು ನಿಂಬೆಹಣ್ಣಿನ ಬೆಲೆ ಇಲ್ಲ. ನಮ್ಮ ತೆಂಗಿನ ಕಾಯಿ ಎಷ್ಟು ಚೆನ್ನಾಗಿ ಇರುತ್ತಿತ್ತು. ಇವತ್ತು ತೆಂಗಿನ ಮರಕ್ಕೆ ನುಸಿರೋಗ ಬಂದಿರುವುದರಿಂದ ಮನುಷ್ಯನಿಗೆ ಕುಷ್ಟರೋಗ ಬಂದರೆ ಹೇಗೆ ಇರುತ್ತದೆಯೊ ಹಾಗೆ ಇರುತ್ತದೆ. ಕಾಯಿ ಸುಲಿಯುವವರನ್ನು ಕೇಳುತ್ತೇನೆ, ಎಷ್ಟು ಕಾಯಿ ಸುಲಿಯುವದಕ್ಕೆ ಸುಲಭವಾಗುತ್ತಾ ಎಂದು. ಇಲ್ಲ ಸ್ವಾಮಿ ಕಾಯಿ ಗಂಟು ; ಎಲ್ಲಿ ನುಸಿ ಬಂದಿದೆ ಅಲ್ಲಿ ಸುಲಿಯುವುದಕ್ಕೆ ಆಗುವುದಿಲ್ಲ. ಗಂಟಾಗುತ್ತದೆಂದು ಹೇಳುತ್ತಾರೆ. ಇವತ್ತು ಒಳ್ಳೆಯ ಕಾಯಿಯನ್ನು ಸುಲಿಯುವುದಕ್ಕೆ ಒಂದು ಸಾವಿರ ರೂ. ಇದ್ದರೆ ನುಸಿ ರೋಗ ಬಂದಂತಹ ಕಾಯಿಯನ್ನು ಸುಲಿಯುವುದಕ್ಕೆ 1250 ರೂಪಾಯಿ. 250 ರೂಪಾಯಿ ಜಾಸ್ತಿ ತೆಗೆದುಕೊಳ್ಳುತ್ತಾರೆ. ಮಾರುಕಟ್ಟೆಗೆ ಹೋದರೆ ಇಷ್ಟು ಕಷ್ಟಪಟ್ಟು, ಕಳ್ಳರನ್ನು ಕಾದು, ಮಂಗಗಳನ್ನು ಕಾದು, ಮನೆಯವರೆಲ್ಲಾ ತೋಟ ಕಾದು, ಮಾರುಕಟ್ಟೆಗೆ ತೆಗೆದುಕೊಂಡು ಹೋದರೆ ಸಾವಿರಕ್ಕೆ ನೂರು ರೂ. ಲಾಭ, ಒಂದು ಕೆ.ಜಿ. ಎಳ್ಳಿಗೆ ಮೂರು ಕೆ.ಜಿ. ಟಕ್ಕ. ಆದರಲ್ಲಿ ಸಣ್ಣ ಕಾಯಿ ದೊಡ್ಡಕಾಯಿ, ಮೀಡಿಯಂ ಎಂದು ಮೂರು ಭಾಗ ಮಾಡುತ್ತಾನೆ. ನಾವು ಏನು ಟೆಂಡರ್ ರೇಟ್ ಹಾಕಿರುತ್ತೇವೆ ಆದರಲ್ಲಿ 30 ಪರ್ಸೆಂಟ್ 40 ಪರ್ಸೆಂಟ್ ಮಾತ್ರ. ಇದು ಸರ್ಕಾರದ ಗಮನಕ್ಕೆ ಏನಾದರೂ ಬಂದಿದೆಯೇ? ಇದು ಹಗಲು ದರೋಡೆ. ನಾವು ವೀರಪ್ಪನ್‌ಗೆ ಏಕೆ ಹೇಳಬೇಕು ಹಗಲು ದರೋಡೆ ಎಂದು ಹೇಳಿ? ಅವನು ಕಾಡಿನಲ್ಲಿ ದರೋಡೆ ಮಾಡುತ್ತಾನೆ. ಅಧಿಕಾರಿಗಳು, ವರ್ತಕರು ಸೇರಿಕೊಂಡು ಊರಿನಲ್ಲಿ ರೈತರನ್ನು ದರೋಡೆ ಮಾಡುತ್ತಾರೆ. ರೈತರನ್ನು ಸುಲಿಗೆ ಮಾಡುತ್ತಾರೆ. ಇವತ್ತು ನಾವು ಹಲವಾರು ಕಾರ್ಯಕ್ರಮಗಳನ್ನು ರೂಪಿಸಿದ್ದೇವೆ. ಅದು ವಿಶೇಷ ಘಟಕ ಯೋಜನೆ ಇರಬಹುದು, ಸಾಮಾನ್ಯ ಯೋಜನೆ ಇರಬಹುದು, ರೈತರಿಗೆ ಕೊಡುವಂತಹ ಜಾನುವಾರುಗಳು ಇರಬಹುದು, ಇವತ್ತು ಸಹಕಾರ ಸಂಘಗಳ ಮೂಲಕ ನಾವು ಸಾಲ ಕೊಡುತ್ತಿದ್ದೇವೆ. ಕೆಲವೊಂದು ಇಲಾಖೆಗಳ ಮೂಲಕ ಸಾಲ

ಕೊಡುತ್ತಿದ್ದೇವೆ. ರೈತರನ್ನು ಸಾಲಗಾರರನ್ನಾಗಿ ಮಾಡುತ್ತಿದ್ದೇವೆ. ನಾನು ಒಂದು ಉದಾಹರಣೆಯನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. 1987ನೇ ಇಸವಿಯಲ್ಲಿ ನೂರು ಬಾವಿ ಯೋಜನೆ ಎಂದು ಇತ್ತು. ಅದರಲ್ಲಿ ಐದು ಜನಕ್ಕೆ ಸಾಲ ಕೊಟ್ಟರು. ಅದರಲ್ಲಿ ವಿಚಾರ ಏನೆಂದರೆ ಟರ್ನ ಕೀ ಬೇಸಿಸ್; ನೋ ವಾಟರ್ ನೋ ಮನಿ. ಅದೊಂದು ತರಹ ಗುತ್ತಿಗೆದಾರರಿಗೆ ಲಾಭ. ಒಂದು ಬಾವಿಗೆ 30 ಸಾವಿರ ರೂ. ಸಾಲ ಕೊಟ್ಟಿದ್ದರು. ಈಗ 12 ವರ್ಷಕ್ಕೆ ಒಂದು ಲಕ್ಷ 35 ಸಾವಿರ ರೂ. ಆಗಿದೆ. ಅವರಿಗೆ ಏನು ಮಾಡಿದರು ಅಂದರೆ 3 ಸಾವಿರ ರೂಪಾಯಿ ಪೀನಲ್ ಬೋರ್ಡ್, 14 ಸಾವಿರ ರೂಪಾಯಿ ಬೋರ್‌ವೆಲ್ ಕೊರೆದಿದ್ದು, ಎಲೆಕ್ಟ್ರಿಫಿಕೇಷನ್ ಅವೆಲ್ಲಾ ಅವನೇ ಮಾಡಿಸಿಕೊಂಡಿದ್ದರೆ ಕೇವಲ 18 ಸಾವಿರ ರೂಪಾಯಿಗಳಲ್ಲಿ ಆಗುತ್ತಿತ್ತು. ಇವತ್ತು ಅವರು 30 ಸಾವಿರ ರೂ. ಮಾಡಿದ್ದಾರೆ. ಆ ಬಾವಿಯಲ್ಲಿ ನೀರು ಇಲ್ಲ ಅವನನ್ನು ನಂಬಿಸಿದರು. 3 ಇಂಚು ನೀರು ಬಂದಿದೆ ಇದರಲ್ಲಿ ನೀನು ಬೆಳೆ ಬೆಳೆದುಕೊಳ್ಳಬಹುದು ಅಂತ. ಅವನು ಯಾವುದೇ ಒಂದು ಪೈರು ಬೆಳೆಯುವುದಕ್ಕೆ ಆಗಲಿಲ್ಲ. ಆ ಐದು ಜನ ರೈತರು ಸಾಲಗಾರರಾಗಿದ್ದಾರೆ. ತಾವು ಬೇಕಾದರೆ ತನಿಖೆ ಮಾಡಿಸಿ, ತಾವು ಆ ರೈತರು ಸತ್ತ ಮೇಲೆ ಲಕ್ಷ ರೂ. ಕೊಡಬೇಡಿ. ಅವರು ಬದುಕಿದ್ದಾಗ ಏನಾದರೂ ಮಾಡಿ. ಈ ಬಗ್ಗೆ ತನಿಖೆ ಮಾಡಿಸಿ. ರೆಕಾರ್ಡ್ ಇದೆ. ನೂರು ಬಾವಿಯೋಜನೆಯಲ್ಲಿ ಎಷ್ಟು ಜನರಿಗೆ ಕೊಟ್ಟರು? ಆಗ್ರೋ ಇಂಡಸ್ಟ್ರೀಯವರು ಏಜನ್ಸಿ. ಅವರು ಏನು ಮಾಡಿದರು ಎಷ್ಟು ಇಂಚು ನೀರು ಬಂತು? ಜಿಯಾಲಜಿಕಲ್ ಸರ್ವೆ ಇಲಾಖೆಯವರು ಏನು ಸರ್ಟಿಫಿಕೇಟ್ ಕೊಟ್ಟರು ಎಂಬುದರ ಬಗ್ಗೆ ತನಿಖೆ ಮಾಡಿ. ಇದರಿಂದ ನಮ್ಮ ಕಾರ್ಯಕ್ರಮಗಳು ವಿಫಲವಾಗುತ್ತಿವೆ. ನಾವು ಸಹಕಾರ ಸಂಘಗಳ ಮೂಲಕ ಯತೇಚ್ಛವಾಗಿ ಜಿಲ್ಲಾ ಪಂಚಾಯಿತಿ ಮೂಲಕ ಸಾಲವನ್ನು ಕೊಡುತ್ತೇವೆ. ಮನುಷ್ಯನಿಗೆ ಆಸೆ ಇದೆ. ಯಾರೂ ಸನ್ಯಾಸಿಗಳು ಅಲ್ಲ. ಸಾಲ ತೆಗೆದುಕೊಂಡವರು ಸಾಲ ತೀರಿಸುವುದಕ್ಕೆ ಆಗುತ್ತಿಲ್ಲ. ಇದರಿಂದ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುವುದು ಅವರು ಸತ್ತಾಗ ಒಂದು ಲಕ್ಷ ರೂ. ಪರಿಹಾರ ಕೊಡಬೇಡಿ. ಇದ್ದಾಗ ಏನಾದರೂ ಮಾಡಿ. ಇಲ್ಲಿ ರೈತ ತಪ್ಪು ಮಾಡಿದ್ದಾನೆಯೇ; ಇಲಾಖೆಯವರು ತಪ್ಪು ಮಾಡಿದ್ದಾರೆಯೇ ಎನ್ನುವುದನ್ನು ವಿಚಾರ ಮಾಡಿ. ನಾನು ಈ ಬಗ್ಗೆ ಮುಖ್ಯಮಂತ್ರಿಗಳಿಗೆ ಹೇಳಿದೆ. ಏನು ಮಾಡುವುದು ಕೃಷ್ಣಮೂರ್ತಿಯವರೇ, ಸಾಲ ಮನ್ನಾ ಮಾಡುವುದಕ್ಕೆ ಬರುವುದಿಲ್ಲ ಅದು ರಿಜರ್ವ್ ಬ್ಯಾಂಕ್‌ಗೆ ಸಂಬಂಧಪಟ್ಟ ವಿಚಾರ ಎಂದು ಹೇಳಿದರು. ಇನ್ನು ಆರೋಗ್ಯ ಇಲಾಖೆ ಬಗ್ಗೆ ಹೇಳುವುದಾದರೆ ನಾವು ವಿಶ್ವ ಬ್ಯಾಂಕ್‌ನಿಂದ ಸಾಲ ತೆಗೆದುಕೊಂಡಿದ್ದೇವೆ. ಹುಡ್ಕೋದಿಂದ ಸಾಲ ತೆಗೆದುಕೊಂಡಿದ್ದೇವೆ. ಈ ಸಂಸ್ಥೆಗಳಿಂದ ನಾವು ಸಾಲ ತೆಗೆದುಕೊಂಡು ಆಸ್ಪತ್ರೆಗಳನ್ನು ನಿರ್ಮಾಣ ಮಾಡುತ್ತಿದ್ದೇವೆ. ಈ ಕಾರ್ಯಕ್ರಮ 1999ನೇ ಇಸವಿಗೆ ಮುಗಿಯಬೇಕಾಗಿತ್ತು. ಆ ಯೋಜನೆಗಳು ಇದುವರೆಗೂ ಮುಗಿದಿಲ್ಲ. ವಿಶ್ವಬ್ಯಾಂಕ್‌ನವರು ಕೊಟ್ಟ ಹಣಕ್ಕೆ ಬಡ್ಡಿ ತೆಗೆದುಕೊಳ್ಳುತ್ತಾರೆ. ಸುಮ್ಮನೆ ಕೊಟ್ಟಿಲ್ಲ. 2002ನೇ ಇಸವಿ ಬಂದರೂ ಕೂಡ ಕಾಮಗಾರಿಗಳು ಪೂರ್ಣವಾಗದೇ ಇದ್ದರೆ ಈ ಬಗ್ಗೆ ನಾವು ಏನು

ಹೇಳಬೇಕು? ತಾವು ಆಸ್ಪತ್ರೆಗಳನ್ನು ಕೊಟ್ಟಿದ್ದೀರಿ ಅಲ್ಲಿ ಡಾಕ್ಟರ್ ಇಲ್ಲ, ನರ್ಸ್‌ಗಳು ಇಲ್ಲ, ಔಷಧಿ ಇಲ್ಲ. ಅದೇ ರೀತಿ ನಾವು ಪಶುವೈದ್ಯ ಇಲಾಖೆಗೆ ಬಂದರೆ ಇಡೀ ಜಿಲ್ಲೆಗೆ ಜಿಲ್ಲಾ ಪಂಚಾಯತಿಯವರು ಔಷಧಿಗೆ ಐದು ಲಕ್ಷ ಕೊಟ್ಟಿದ್ದಾರೆ. ಇವತ್ತು ರೈತ ಬೆಳೆದ ಬೆಳೆಗೆ ಕಡಿಮೆ ದರ. ನಾವು ಕೊಂಡುಕೊಳ್ಳುವಂತಹ ವಸ್ತುಗಳ ಬೆಲೆ ಜಾಸ್ತಿ. ಇದರ ಜೊತೆಗೆ ಜಾನುವಾರುಗಳಿಗೆ ಏನಾದರೂ ರೋಗ ಬಂದರೆ ಆ ಇಲಾಖೆಯಲ್ಲಿ ಔಷಧಿ ಇಲ್ಲ. ಇದು ಏಕೆ ಬೇಕು? ಜಿಲ್ಲಾ ಪಂಚಾಯತಿ ಸರ್ಕಾರ್‌ನಲ್ಲಿ ಇಷ್ಟು ಹಣ ಆ ಇಲಾಖೆಗೆ ಕೊಡಬೇಕು. ರಾಜ್ಯ ಸರ್ಕಾರ್‌ನಿಂದ ಇಷ್ಟು ಹಣ ಕೊಡಬೇಕು. ಇವತ್ತು ಒಂದು ಜೊತೆ ಎತ್ತಿನ ಬೆಲೆ 25 ಸಾವಿರ ರೂಪಾಯಿ. ಆ ಎತ್ತುಗಳಿಗೆ ಏನಾದರೂ ರೋಗ ಬಂದು ಕಳೆದುಕೊಂಡರೆ ಅವನು ನಿಜವಾಗಿಯೂ ಸಾಲಗಾರನಾಗುತ್ತಾನೆ. ನಾವು ಎಷ್ಟು ಸಾಲ ಕೊಟ್ಟು ಏನು ಪ್ರಯೋಜನ? ಅಧ್ಯಕ್ಷರೇ, ಇನ್ನು ಶಿಕ್ಷಣ ಇಲಾಖೆ. ಈಗಾಗಲೇ ಲೋಕಸಭೆ, ವಿಧಾನಸಭೆ, ತಾಲ್ಲೂಕು ಜಿಲ್ಲಾ ಪಂಚಾಯಿತಿಗಳಿಗೇ ಊರಿನಲ್ಲಿ ಮೂರು ಪಾರ್ಟಿ, ಶಿಕ್ಷಣ ಇಲಾಖೆಯಿಂದ ನಾಲ್ಕೈದು ಪಾರ್ಟಿ. ಶಿಕ್ಷಣ ಸಚಿವರಿಗೆ ಹೇಳುತ್ತೇನೆ ಹಿಂದಿನ ವ್ಯವಸ್ಥೆ ಏನಿತ್ತೋ ಅದನ್ನು ಜಾರಿಗೆ ತರಲಿಕ್ಕೆ ಅವರು ಪ್ರಯತ್ನ ಮಾಡಬೇಕು. ಇವತ್ತು ನಾನು ಅವರನ್ನು ಅಭಿನಂದಿಸಬೇಕಾಗುತ್ತದೆ. ಖಾಸಗಿ ಶಿಕ್ಷಣ ಸಂಸ್ಥೆಗಳು ಹಣವನ್ನು ದೋಚುತ್ತಿದ್ದರು. ಅದನ್ನು ಪತ್ತೆಹಚ್ಚಿ ಕನಿಷ್ಟ ಒಂದು ವರ್ಷಕ್ಕೆ 10 ರಿಂದ 12 ಕೋಟಿ ರೂ. ಹಣ ಇಳಿಸಿದರು ಎಂದು ನನಗನ್ನಿಸುತ್ತದೆ. ಆದರೆ ಒಂದೊಂದು ಸಲ ಶಿಕ್ಷಣ ಸಚಿವರ ಹೇಳಿಕೆಗಳೇ ಗೊಂದಲ. ಒಂದು ಸಲ ಜವಳಿ ಇಲಾಖೆಯಿಂದ ಬಟ್ಟೆ ಕೊಳ್ಳುವುದಿಲ್ಲ ಎನ್ನುತ್ತಾರೆ. ಜವಳಿ ಇಲಾಖೆಯವರು ಹೇಳುತ್ತಾರೆ ನಮ್ಮಿಂದಲೇ ಬಟ್ಟೆ ಕೊಳ್ಳಬೇಕೆಂದು. ಇದು ಹಾಸ್ಯಾಸ್ಪದ. ಏಕೆ ಹೀಗೆ? ಒಂದು ಸಚಿವಸಂಪುಟವಿದ್ದು, ಮುಖ್ಯಮಂತ್ರಿಗಳಿದ್ದು ಇಂತಹ ಹೇಳಿಕೆ ಕೊಡುವುದರಿಂದ ಏನು ಆಗುತ್ತದೆ ಅಂದರೆ, ಇದರಿಂದ ನಮಗೆ ವಿರೋಧಪಕ್ಷದವರಿಗೆ ಒಳ್ಳೆಯದೇ, ಆಡಳಿತ ಪಕ್ಷದವರ ಸ್ಥಿತಿಗತಿಗಳನ್ನು ತಾವು ವಿಚಾರ ಮಾಡಬೇಕಾಗುತ್ತದೆ.

ಇನ್ನು ಉನ್ನತ ಶಿಕ್ಷಣ. ಎಲ್ಲಿ ವಿದ್ಯಾರ್ಥಿಗಳಿಲ್ಲವೋ ಅಲ್ಲಿ ಮುಚ್ಚುತ್ತೇವೆ ಅಂದರು. ಬಹಳ ಸಂತೋಷ. ಆದರೆ ಉನ್ನತ ಶಿಕ್ಷಣ ಕಾಲೇಜುಗಳಲ್ಲಿ ಎಷ್ಟು ಲೆಕ್ಚರರ್‌ಗಳನ್ನು ತುಂಬಿದ್ದೀರಿ? ಉದಹರಣೆಗೆ ಕಡೂರಿನಲ್ಲಿ ಪ್ರಥಮದರ್ಜೆ ಕಾಲೇಜಿದೆ, ಬಿಎಸ್‌ಸಿ ಇದೆ, ಇವತ್ತು ನಮ್ಮ ಮಕ್ಕಳು 40 ಕಿಮೀ ದೂರ ಹೋಗಿ ಪ್ರಾಕ್ಟಿಕಲ್ ಮಾಡಿಕೊಂಡು ಬರಬೇಕು. 45 ಲಕ್ಷ ರೂ. ವೆಚ್ಚದಲ್ಲಿ ಕಟ್ಟಡ ಕಟ್ಟಿದ್ದೇವೆ. ಕುಳಿತುಕೊಳ್ಳಲು ಬೆಂಚಿಲ್ಲ, ಉನ್ನತ ಶಿಕ್ಷಣ ಇಲಾಖೆ ಕಮೀಷನರು ಹೇಳುತ್ತಾರೆ ಏನು ಮಾಡುವುದು ಕೃಷ್ಣಮೂರ್ತಿಯವರೇ, ಈ ದೇಶದ ದುಡ್ಡು ಈ ರಾಜ್ಯದ ದುಡ್ಡು ಯಾವುದಕ್ಕೋ ಖರ್ಚಾಗುತ್ತದೆ, ಶಿಕ್ಷಣ ಇಲಾಖೆಗಿಲ್ಲ, ನೀವೇ ಏನಾದರೂ ಮಾಡಿ ಬೆಂಚುಗಳನ್ನು ಮಾಡಿಸಿಕೊಳ್ಳಿ ಎಂದು.

ಕೊನೆಯದು, ನಮ್ಮ ಚಿಕ್ಕಮಗಳೂರಿನ ಚಿಕ್ಕಮಗಳು ಮೋಟಮ್ಮ, ಯಾವತ್ತೂ ನಾವು ನೋಡಿ ಸಂತೋಷಪಡುತ್ತೇವೆ. ಯಾಕೆಂದರೆ ಒಳ್ಳೆ ಕಾರ್ಯಕ್ರಮ ಮಾಡಿಸುತ್ತಿದ್ದಾರೆ. ಯಾರೇ ಇರಲಿ, ಅವರು ಕಾಂಗ್ರೆಸ್ ಪಕ್ಷದಲ್ಲಿದ್ದಾರೆ ಎಂದು ಅವರನ್ನು ವಿರೋಧಿಸಬೇಕೆಂಬ ಅಭಿಪ್ರಾಯವಲ್ಲ. ಅವರ ಕಾರ್ಯಕ್ರಮಗಳನ್ನು ನೋಡಿದರೆ ನಾವು ಮೆಚ್ಚಿಕೊಳ್ಳಬೇಕು. ಮೊನ್ನೆ ಕೆಡಿಬಿ ಸಭೆ ನಡೆದಾಗ ಶಿಕ್ಷಣ ಇಲಾಖೆಯ ಅನುದಾನವನ್ನು ಪೂರ್ಣವಾಗಿ ಅವರು ಜಿಲ್ಲಾ ಪಂಚಾಯ್ತಿ ಮೂಲಕ ಕೊಡಲಿಕ್ಕೆ ಪ್ರಯತ್ನ ಮಾಡಿದರು. ನನಗನ್ನಿಸುತ್ತದೆ: ನಮ್ಮ ಮಗಳು, ಸ್ತ್ರೀ ಶಕ್ತಿ, ಅಂಗವಿಕಲರ ಕಲ್ಯಾಣ ಇವೆಲ್ಲಾ ನೋಡಿದರೆ ಸ್ವಲ್ಪ ಹೆಚ್ಚಿನ ಹಣವನ್ನು ಕೊಡಿ. ಅಂಗವಿಕಲರಿಗೆ ನಾವೇನಾದರೂ ಸಹಾಯ ಮಾಡಿದಂತಾಗುವುದು. ಅಂಗವಿಕಲರ ಅಭ್ಯುದಯ ಸಾಧಿಸಲು, ನನಗೆ ಯಾರೂ ಏನೂ ಹೇಳಿಕೊಟ್ಟಿಲ್ಲ. ಮೋಟಮ್ಮನವರು ನಮಗೆ ಸಿಗುವುದೇ ಕಮ್ಮಿ ಅವರನ್ನು ನೀವು ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸದಸ್ಯೆ ಮಾಡಿದ ಮೇಲೆ ನಮ್ಮ ತಾಲ್ಲೂಕಿನ ಯಾವುದೇ ಸಮಾರಂಭಕ್ಕೆ ಕರೆದರೂ ಅವರು ಬರುತ್ತಾ ಇಲ್ಲ. ಅದೊಂದು ದೊಡ್ಡ ತಪ್ಪಾಗಿಬಿಟ್ಟಿದೆ ನಮಗೆ. ಬರೀ ಸಚಿವರಾಗಿದ್ದರೆ ಬರುತ್ತಿದ್ದರೇನೋ. ಆದ್ದರಿಂದ ಒಂದು ನಾನು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ ಇವತ್ತು ಮಹಿಳೆ ಪರಿಶಿಷ್ಟ ವರ್ಗದಲ್ಲಿ ಹುಟ್ಟಿರುವುದರಿಂದ ಆಕೆಗೆ ನೋವು ಆ ಒಂದು ಸಂಕಟ ಎಲ್ಲಾ ಗೊತ್ತಾಗುತ್ತದೆ. ಯಾಕೆಂದರೆ ಮೋಟಮ್ಮ ಬೇರೆ ಯಾವುದಾದರೂ ಉತ್ತಮವಾದ ಜಾತಿಯಲ್ಲಿ ಹುಟ್ಟಿದ್ದರೆ ಆ ಅರಿವು ಇರುತ್ತಿರಲಿಲ್ಲ. ಆದರೆ ಆ ವರ್ಗದಲ್ಲಿ ಹುಟ್ಟಿರುವುದರಿಂದ ಮಹಿಳೆಯರ ಬಗ್ಗೆ ಚಿಂತನೆಯಿದೆ, ಅಂಗವಿಕಲರ ಬಗ್ಗೆ ಚಿಂತನೆಯಿದೆ, ಮಕ್ಕಳ ಬಗ್ಗೆ ಚಿಂತನೆಯಿದೆ, ನಾನೇನೂ ಅವರನ್ನು ಹೊಗಳುತ್ತಿಲ್ಲ. ಆದ್ದರಿಂದ ಅಧ್ಯಕ್ಷರೇ, ಮಹಿಳಾ ಇಲಾಖೆಗೆ ಹೆಚ್ಚಿನ ಅನುದಾನವನ್ನು ಕೊಡುವ ಮೂಲಕ ಮತ್ತು ಅಂಗವಿಕಲರಿಗಾಗಿ ಒಂದು ಮಂಡಲಿ ಮಾಡುವುದರಿಂದ ಅವರ ಕಲ್ಯಾಣವಾಗಬಹುದು, ಅವರೂ ಕೂಡ ಮನುಷ್ಯರಾಗಿ ನಮ್ಮಲ್ಲಿ ಹುಟ್ಟಿದ್ದಾರೆ ಅವರಿಗೂ ಸಮಾಜದಲ್ಲಿ ಬದುಕಲು ಅವಕಾಶ ಕಲ್ಪಿಸಿಕೊಡಬೇಕೆಂಬ ವಿಚಾರವನ್ನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಧನ್ಯವಾದಗಳು. ನಿಮಗೆ ವಂದಿಸಿ ನನ್ನ ಮಾತು ಮುಗಿಸುತ್ತೇನೆ.

ಉಪಾಧ್ಯಕ್ಷರು :— ಈಗ ಸದನವನ್ನು 2.45ರ ವರೆಗೆ ಮುಂದೂಡುತ್ತಿದ್ದೇನೆ.

(ಸದನವು 1.55ಕ್ಕೆ ಮುಂದೂಡಲ್ಪಟ್ಟು ಮತ್ತೆ 2.45ಕ್ಕೆ ಸಮಾವೇಶಗೊಳ್ಳಲು ನಿರ್ಧರಿಸಿತು)

(ಸದನವು 3.10 ನಿಮಿಷಕ್ಕೆ ಸಮಾವೇಶಗೊಂಡಿತು)

(ಮಾನ್ಯ ಉಪಾಧ್ಯಕ್ಷರು (ಶ್ರೀ ಮನೋಹರ ಹೆಚ್. ತಹಸೀಲ್ದಾರ್) ರವರು ಅಧ್ಯಕ್ಷ ಪೀಠವನ್ನಲಂಕರಿಸಿದ್ದರು)